Mr. SPEAKER.—May we decide this to-morrow?

(SOME MEMBERS.—Yes.)

BUDGET FOR 1953-54.

DEMANDS FOR GRANTS—*contd.*

DEMAND No. 21—AGRICULTURE.

40. *Agriculture.*

(EXCEPT BOTANICAL AND OTHER PUBLIC GARDENS).

Mr. SPEAKER.—Motion moved:

"That a sum not exceeding Rs. 50,27,000 be granted to the Government to defray the charges which will come in course of payment during the year ending 31st day of March 1954, in respect of 'Agriculture (Except Botanical and other Public Gardens)'."

ಶ್ರೀ ಎಚ್. ಸಿದ್ಧವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೇ, ಈ ಡಿಮ್ಯಾಂಡಿನ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಮೊದಲೇ ತಿಳಿಸಬೇಕಾದದ್ದು ಅತ್ಯಾವಶ್ಯಕವೆಂದು ಭಾವಿಸಿ ನಾನು ಮಾತನಾಡಲು ನಿಂತಿದ್ದೇನೆ. ಮೊದಲು ಹಣಕಾಸಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುತ್ತೇನೆ. 1951-52ರಲ್ಲಿ ವ್ಯವಸಾಯದ ಇಲಾಖೆಗೆ 68,30,000 ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿತ್ತು. ಆ ಸಾಲಿನಲ್ಲಿ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಅನಾವಶ್ಯಕವಾದ ಕೆಲವು ಬಾಬುಗಳನ್ನು ತೆಗೆದು ಆದಷ್ಟುಮಟ್ಟಿಗೆ ಖೋತಾ ಮಾಡಬೇಕೆಂಬ ದೃಷ್ಟಿಯಿಂದ ಕೆಲಸ ಮಾಡಿದ್ದರಿಂದ ಆ ವರ್ಷದ actuals 47,06,000 ರೂಪಾಯಿಗಳು ಮಾತ್ರ ಆದವು. ಅಲ್ಲಿಗೆ 24,23,000 ರೂಪಾಯಿಗಳಷ್ಟು ಉಳಿತಾಯ ಬಂತು. ಅದರ ಮಾರನೆಯ ವರ್ಷವೂ ಅಂದರೆ 1952-53ರಲ್ಲಿ 61,40,000 ರೂಪಾಯಿಗಳಿಗೆ ಬಡ್ಜೆಟ್ ಅಂದಾಜಾಗಿದ್ದರೂ, ಅದರಲ್ಲಿಯೂ ಅಲ್ಲಿ ಇಲ್ಲಿ ಬೇಕಿಲ್ಲದ, ಅಂದರೆ ಅವಶ್ಯಕವಾಗಿ ಕಾಣದ, ಕೆಲವು ಬಾಬುಗಳನ್ನು ಕಡಿಮೆ ಮಾಡಿದ್ದರಮೇಲೆ, ರಿವೈಸ್ಡ್ ಎಸ್ಟಿಮೇಟ್ ಪ್ರಕಾರ 50,09,000 ರೂಪಾಯಿಗಳು ಮಾತ್ರ ಆಗಿರುವುದು ಬಡ್ಜೆಟ್ಟಿನಲ್ಲೇ ಕಾಣಬರುತ್ತದೆ. ಈ ರೀತಿಯಾಗಿ ಇಲ್ಲಿಯೂ 11,31,000 ರೂಪಾಯಿಗಳಷ್ಟು ಉಳಿತಾಯವನ್ನು ತೋರಿಸಿದೆ. ಆಮೇಲೆ ಈ ಇಲಾಖೆಗೆ ಸಂಬಂಧಪಟ್ಟಂತೆ ಬರುವ ಸಾಲಿಗೆ, ಅಂದರೆ 1953-54ಕ್ಕೆ, 59,93,000 ರೂಪಾಯಿಗಳನ್ನು ಕೊಟ್ಟಿದೆ.

Sri L. SIDDAPPA (Channagiri).—What are the items in which savings have been effected—such huge savings in a department like the Agricultural Department?

ಶ್ರೀ ಎಚ್. ಸಿದ್ಧವೀರಪ್ಪ.—ಅತ್ಯಾವಶ್ಯಕವಾಗಿಲ್ಲದ ಕೆಲವು ಬಾಬುಗಳನ್ನು ಕಡಮೆ ಮಾಡಿದೆ. ಯಾವು ಯಾವುವನ್ನು ಕಡಿಮೆಮಾಡಿದೆಯೆನ್ನುವುದಕ್ಕೆ ವಿವರಗಳು ಈಗ ನನ್ನಲ್ಲಿಲ್ಲ. ಇದರಮೇಲೆ ಚರ್ಚೆ ಮುಗಿಯುವುದರೊಳಗಾಗಿ ವಿವರಗಳನ್ನು ತರಿಸಿಕೊಡಲು ಪ್ರಯತ್ನ ಮಾಡುತ್ತೇನೆ. ಇದನ್ನೆಲ್ಲಾ ನಾನು ಈಗೇಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಸದಸ್ಯರು ಇದರ ಸಂಬಂಧದಲ್ಲಿ ಎತ್ತಬಹುದಾದ ಆಕ್ಷೇಪಣೆಗಳಿಗೆ ಅಷ್ಟಾಗಿ ಅವಕಾಶವಿಲ್ಲದಿರಲಿ ಎಂದು ನಾನು ಈ ಮೊದಲೇ ಹೇಳುತ್ತಿದ್ದೇನೆ. ಹಣಕಾಸಿನ ವಿಚಾರದಲ್ಲಿ ಹೆಚ್ಚಿಗೆ ಅವಶ್ಯಕತೆಯಿಲ್ಲದೆ ಇರತಕ್ಕ ಬಾಬುಗಳಲ್ಲಿ ಎಷ್ಟು ಖೋತಾ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು, consistent with the efficiency, and working of the Dapartment, ಕಡಮೆ ಮಾಡಬೇಕೆಂದಿದ್ದೇವೆಂದು ನಾನು ಹೇಳಬಯಸುತ್ತೇನೆ.

ಇನ್ನು 1952-53ನೆಯ ಸಾಲಿನಲ್ಲಿ ಈ ಇಲಾಖೆಯಲ್ಲಿ ನಡೆದಿರುವ ಕಾರ್ಯಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮುಖ್ಯವಾಗಿ ಈ ಸಾಲಿನಲ್ಲಿ ನಾವು ಮಾಡಿರುವ ಕಾರ್ಯವೆಂದರೆ, ರಿಸರ್ಚ್ ವಿಚಾರಕ್ಕೆ ಬಹಳ ಹೆಚ್ಚಿನ ಗಮನವನ್ನು ಕೊಟ್ಟಿರುವುದು. ಹೋದ ಸಾರಿ ಬಡ್ಜೆಟ್ಟಿನ ಮೇಲೆ ಮತ್ತು ಡಿಮ್ಯಾಂಡುಗಳ ಸಂಬಂಧದಲ್ಲಿ ನಡೆದ ಚರ್ಚೆಗಳ ಪರಿಣಾಮವಾಗಿ, ನಾನು ರಿಸರ್ಚ್ ಸೆಕ್ಷನ್ನಿಗೆ ಹೋಗಿ ರಿಸರ್ಚಿಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನೂ ಸೇರಿಸಿ ಸಭೆ ಕರೆದು ಒಂದಂಶವನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ಏನೆಂದರೆ ರಿಸರ್ಚ್ ಮಾಡುವ ದೃಷ್ಟಿ ಸುಮ್ಮನೆ ಲ್ಯಾಬೊರೇಟರಿಯಲ್ಲಿ ಕುಳಿತುಕೊಂಡು ಏನೋ ಮಾಡಿಕೊಂಡಿರುವುದಲ್ಲ. Tangible resultsನ್ನು ತೋರಿಸಬೇಕು. ಪ್ರತಿಯೊಂದು ವಿಷಯದಲ್ಲೂ, ಆಹಾರಕ್ಕೆ ಸಂಬಂಧಪಟ್ಟ ದಿನಸಿಗಳಲ್ಲೇ ಆಗಲಿ ಅಥವಾ ವ್ಯಾಪಾರದ ಬೆಳೆಗಳಿಗೆ ಸಂಬಂಧಪಟ್ಟ ದಿನಸಿಗಳಲ್ಲೇ ಆಗಲಿ, ರಿಸರ್ಚ್‌ಮಾಡುವ ದೃಷ್ಟಿ, ಜನರಿಗೆ ಅದರಿಂದ ಸುಖವಾದ ಪರಿಣಾಮವಾಗಬೇಕು. ಎಂಬುದು ನಮ್ಮ ಅಭಿಪ್ರಾಯವೆಂದು ಸ್ಪಷ್ಟವಾಗಿ ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅಷ್ಟೇಅಲ್ಲ, ಅವರಿಗೆ ನಾನು ಹೇಳಿದ್ದೇನೆ, ಬರೀ ಬೆಂಗಳೂರು ಒಂದೇ ನಗರದಲ್ಲಿ ನಮ್ಮ ಸಂಶೋಧನಾ ಕೇಂದ್ರಗಳನ್ನು ಕೇಂದ್ರೀಕರಣ ಮಾಡಿ ಅಲ್ಲಿಂದಲೇ ಸಂಸ್ಥಾನದ ಎಲ್ಲಾ ಕಡೆಗೂ ನಮ್ಮ ರಿಸರ್ಚಿನ ಫಲಗಳನ್ನು ತಿಳಿಯುವಂತೆ ಮಾಡುತ್ತೇವೆ ಎನ್ನುವುದು ಸೂಕ್ತವಲ್ಲ. ಅವಕ್ಕೆ ಬದಲು ಯಾವಯಾವ ಬೆಳೆ ಎಲ್ಲೆಲ್ಲಿ ಹೆಚ್ಚಿಗೆ ಬೆಳೆಯುತ್ತದೆಯೋ ಅಲ್ಲಿಗೇ ವರ್ಗಾವಣೆ ಮಾಡಬೇಕೆಂದು ತಿಳಿಸಿದ್ದೇವೆ. ಅದೃಷ್ಟವಶಾತ್, ಈಗ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ವಿದ್ಯುಚ್ಛಕ್ತಿ ಇದೆ. ರಿಸರ್ಚ್ ಸೆಕ್ಷನ್ನಿಗೆ ಬೇಕಾದ ಉಪಕರಣಗಳನ್ನು ಉಪಯೋಗಿಸಲು ವಿದ್ಯುಚ್ಛಕ್ತಿಯ ಸಹಾಯ ಬೇಕಾಗಿದ್ದರೆ ಆ ಅನುಕೂಲವೂ ಸುಲಭವಾಗಿ ದೊರೆಯುತ್ತದೆ. ಆದ್ದರಿಂದ ಮುಖ್ಯವಾಗಿ ಆಯಾ ಧಾನ್ಯಗಳು ಹೆಚ್ಚಾಗಿ ಬೆಳೆಯುವ ಪ್ರದೇಶಗಳಲ್ಲೇ ಇಂಥಾ ಪರಿಶೋಧನಾ ಕೇಂದ್ರಗಳನ್ನು ಏರ್ಪಡಿಸಬಹುದು ಎಂದು ತಿಳಿಸಿದ್ದೇನೆ. ಉದಾಹರಣೆಗೆ ಬತ್ತದ ರಿಸರ್ಚ್ ಮಾಡಬೇಕಾದರೆ ಶಿವಮೊಗ್ಗ ಅಥವಾ ಮಂಡ್ಯ ಪ್ರದೇಶಕ್ಕೇ ಹೋಗಬೇಕು ಎಂದು ಹೇಳಿದ್ದೇನೆ. ಇದನ್ನು ತಪ್ಪಿ ಇಲ್ಲೇ ಒಂದೇ ಸ್ಥಳದಲ್ಲಿ ಮಾಡಿದರೆ ಅದಕ್ಕೆ ಸರ್ಕಾರದವರ ಮನ್ನಣೆಯಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಇದೇ ದೃಷ್ಟಿಯಿಂದ

ಈಗ ತ್ವರಿತವಾಗಿ ರಿಸರ್ಚ್ ಸೆಕ್ಷನ್‌ಗಳನ್ನು ಎಲ್ಲೆಲ್ಲಿ ಮಾಡಬೇಕೋ ಅಲ್ಲಿ ಮಾಡಿಕೊಂಡು ಕಾರ್ಯವನ್ನು ಮುಂದುವರಿಸುತ್ತಿದ್ದೇವೆ.

ಆಮೇಲೆ, ಆಲೂಗಡ್ಡೆಯ ವಿಚಾರದಲ್ಲಿ ಈಗಿನ ಸಂಶೋಧನೆ ಫಲಕಾರಿಯಾಗುವ ರೀತಿ ನಡೆಯುತ್ತಿದೆ. ಬತ್ತದ ವಿಚಾರದಲ್ಲಿಯೂ ಕೂಡ ಹಾಗೆಯೇ ಆಗಿದೆ. ಎರಡು ಸಂಶೋಧನೆಗಳು ನಡೆದು, ಅದರ ಫಲಿತಾಂಶ ಇಷ್ಟರಲ್ಲೇ ಬರುತ್ತದೆ. ಹತ್ತಿಯ ವಿಚಾರದಲ್ಲಿ ಶ್ರೀಮಾನ್ ಪಂಚಾಕ್ಷರಯ್ಯನವರು ಆಸಕ್ತಿ ತೋರಿಸಿದ್ದಾರೆ. ಎಂ. ಎ. ಹತ್ತಿಯನ್ನು ಬದಲಾಯಿಸುವುದಕ್ಕೆ ಏನು ಮಾಡಿದ್ದೀರೆಂದು ಕೇಳಿದರು. ಈ ವಿಚಾರದಲ್ಲಿಯೂ ಸಂಶೋಧನೆ ನಡೆಸಲು ಕಾರ್ಯಕ್ರಮ ಕೈಕೊಂಡಿದ್ದೇವೆ. ಸದ್ಯದಲ್ಲೇ ಸರಿಯಾದ ತಳಿಯನ್ನು ಕಂಡು ಹಿಡಿಯಲು ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತಿದ್ದೇವೆ.

ಇನ್ನು ಜೋಳದ ವಿಚಾರ. ಮೈಲೋ ಎಂಬುದನ್ನು ನಾವು ಅನೇಕ ವರ್ಷಗಳಿಂದ ನೋಡುತ್ತಿದ್ದೇವಷ್ಟೆ. ಇದು ನಮ್ಮ ದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆಯೆ ಎಂಬುದನ್ನು ಪರೀಕ್ಷೆಮಾಡುತ್ತಿದ್ದೇವೆ. ಇದು ಅಮೇರಿಕಾ ದೇಶದ್ದು. ಈ ವಿಷಯದಲ್ಲಿ ಇನ್ನೂ ಸಂಶೋಧನೆ ಮಾಡಿಸುತ್ತಿದ್ದೇವೆ. ಮಾನ್ಯ ಸದಸ್ಯರು ವಿ. ಸಿ. ಫಾರಮ್ಮಿಗೆ ಹೋದರೆ ಅಲ್ಲಿ ನಡೆಯುತ್ತಿರುವ ಕೆಲಸವೇನೆಂಬುದು ಗೊತ್ತಾಗುತ್ತದೆ. ಅಲ್ಲಿಗೆ ಹೋದಾಗ ಒಂದು ತೆನೆಯನ್ನು ಕೊಟ್ಟರು. ಉತ್ತೇಜನಕರವಾದ ಫಲಿತಾಂಶ ಬರುತ್ತಿದೆಯೆಂದು ಕಾಣುತ್ತದೆ. ಇದನ್ನು ಇನ್ನೂ ಸಂಶೋಧನೆಮಾಡಿ ಫಲಿತಾಂಶವನ್ನು ತೋರಿಸಬೇಕೆಂದು ಹೇಳಿದ್ದೇವೆ. ಇದರಿಂದ ಉತ್ಪತ್ತಿ ಜಾಸ್ತಿಬರುತ್ತದೆ, ತೆನೆ ದೊಡ್ಡದಾಗಿರುತ್ತದೆ. ಇದನ್ನು ನಾವು ಸಂಶೋಧನ ಶಾಖೆಗೆ ತಿಳಿಸಿದ್ದೇವೆ.

ಗೊಬ್ಬರದ ವಿಚಾರದಲ್ಲಿಯೂ ಸಂಶೋಧನೆಯ ಕೆಲಸ ನಡೆಯುತ್ತಿದೆ. ಸಾಯಿಲ್ ಸರ್ವೆ ವಿಚಾರದಲ್ಲಿ ಅನೇಕ ಖೋತಾ ನಿರ್ಣಯಗಳು ಬಂದಿವೆ. ಇದು ಪ್ರಾಮುಖ್ಯವಾದ ವಿಷಯ. ಸಂಸ್ಥಾನದಲ್ಲಿ ಇದರ ವಿಷಯದಲ್ಲಿಯೂ ಆದಷ್ಟು ಕಾರ್ಯಕ್ರಮ ಕೈಕೊಳ್ಳಬೇಕೆಂದು ಲಕ್ಕವಳ್ಳಿಯ ಪ್ರದೇಶದಲ್ಲಿ ಇದನ್ನು ಯಾವ ರೀತಿ ಮಾಡಬೇಕೆಂಬ ವಿಷಯದಲ್ಲಿ ಕಾರ್ಯ ನಡೆಸುತ್ತಿದ್ದೇವೆ. ವಿಶ್ವೇಶ್ವರಯ್ಯ ನಾಲೆಯ ಪ್ರದೇಶದ ಜಮೀನಿನಲ್ಲಿ ಸತ್ವ (fertility) ಕಡಮೆಯಾಗುತ್ತಿದೆ, ಇದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಲು intensive soil survey ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಒಂಭತ್ತುಸಾವಿರ ಹಳ್ಳಿಗಳಲ್ಲಿ ರೂರಲ್ ಕಂಪೋಸ್ಟ್ ಯೋಜನೆಯನ್ನು ಮಾಡಿದ್ದೇವೆ. ಇದರಿಂದ 50 ಲಕ್ಷ ಟನ್ನುಗಳಷ್ಟು ಗೊಬ್ಬರ ಹೆಚ್ಚಾಗಿದೆಯೆಂದು ಕಂಡುಬಂದಿದೆ. ಅಲ್ಲದೆ ಟೌನ್ ಮುನಿಸಿಪಾಲಿಟಿಗಳಲ್ಲಿ ಅರ್ಬನ್ ಕಂಪೋಸ್ಟ್ ಯೋಜನೆ ಚೆನ್ನಾಗಿ ಕೆಲಸಮಾಡುತ್ತಿದೆಯೆಂದು ವರದಿ ಬಂದಿದೆ. ಎಷ್ಟು ಮಟ್ಟಿಗೆ ಯಾವ ಯಾವ ಕೆಲಸವನ್ನು ಮಾಡುತ್ತಿದ್ದೇವೆಂಬುದನ್ನು ತಿಳಿಸುವ ದೃಷ್ಟಿಯಿಂದ ಇದನ್ನೆಲ್ಲಾ ಹೇಳಿದ್ದೇನೆ. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಹೇಳಿದರೆ ತಪ್ಪಾಗಲಾರದು. ಮಳೆ ಹೋಗಿ ಅನೇಕ ಕಡೆ ತೊಂದರೆಯಾಗಿರುವ ಸಮಯದಲ್ಲಿ ಹೈದರಾಬಾದಿಗೆ ಹೋಗಿ ಅತ್ಯುತ್ತಮವಾದ ಬಿಳಿಯ ಜೋಳವನ್ನು ತಂದು ಸಂಸ್ಥಾನಕ್ಕೆ ಕೊಟ್ಟರು. ಇದರಿಂದ ಎಷ್ಟು ಸಹಾಯವಾಗಿದೆಯೆಂದರೆ, ಬಹುಶಃ ಪ್ರತಿ ಪಕ್ಷದ ನಾಯಕರು ಕೂಡ ಈ ಕೆಲಸಕ್ಕೆ ಮೆಚ್ಚಿಗೆಯನ್ನು ಸೂಚಿಸುತ್ತಾರೆಂದು ನನ್ನ ನಂಬಿಕೆ.

SRI L. SIDDAPPA.—I convey congratulation.

ಶ್ರೀ ಎಚ್. ಸಿದ್ಧವೀರಪ್ಪ.—ಸಂಸ್ಥಾನಕ್ಕೆ ಲಕ್ಷಾಂತರ ಪಲ್ಲ ಜೋಳಬಂತು. ಇದರಿಂದ ಎಷ್ಟೋ ಆಹಾರಾಭಾವ ಕಡಮೆಯಾಗಿದೆ ಎಂಬುದನ್ನು ಈಗಾಗಲೇ ಪ್ರತಿಪಕ್ಷದವರೂ ಹೇಳಿರುವುದರಿಂದ, ಪುನಃ ನಾನು ಹೇಳುವುದಿಲ್ಲ. ಇದೊಂದು ಸ್ತುತ್ಯ ಕಾರ್ಯವನ್ನು ನಮ್ಮ ಇಲಾಖೆಯವರು ಮಾಡಿದ್ದಾರೆ.

ಇನ್ನು ಗ್ರೋಮೋರ್‌ಫುಡ್ ವಿಷಯದಲ್ಲಿ ಎರಡು ಅಂಶಗಳನ್ನು ಹೇಳಬೇಕಾಗಿದೆ. ಬಹುಶಃ ಈ ಸಂಬಂಧವಾದ ಖೋತಾ ಸೂಚನೆಗಳು ಚರ್ಚೆಗೆ ಬರಬಹುದು; ಆಗ ಇದರ ವಿಚಾರವನ್ನು ವಿವರವಾಗಿ ತಿಳಿಸುತ್ತೇನೆ. ಒಟ್ಟಿನಲ್ಲಿ ಇದರ ವಿಚಾರವನ್ನು ಹೇಳಬೇಕಾದರೆ, ನನ್ನ ಮಿತ್ರರಾದ ಇಮಾಂರವರು ಕೃಷ್ಣಮಾಚಾರಿ ಸಮಿತಿಯ ವರದಿಯನ್ನು ಓದಿದ್ದಾರೆಂದು ಭಾವಿಸಿದ್ದೇನೆ......

ಶ್ರೀ ಎಲ್. ಸಿದ್ದಪ್ಪ.—ಅದರ ಪ್ರತಿ ನಮಗೆ ಸಿಕ್ಕಲೇ ಇಲ್ಲ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ನಮಗೆ ಯಾರು ಕೊಡುತ್ತಾರೆ, ಬಡಪಾಯಿಗಳಿಗೆ! (ನಗು!).

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಡೆಲ್ಲಿಗೆ ಹೋಗಿದ್ದಾಗ ತಂದಿದ್ದ ಒಂದು ಪ್ರತಿ ನನ್ನಲ್ಲಿದೆ, ಅದನ್ನು ಬೇಕಾದರೆ ಕೊಡುತ್ತೇನೆ.

ಮುಖ್ಯವಾಗಿ schemes of permanent value such as Lift Irrigation, ಬಾವಿಗಳನ್ನು ತೆಗೆಸುವುದು, ಕೆರೆಗಳನ್ನು ಸರಿಪಡಿಸುವುದು ಮುಂತಾದ ಕೆಲಸಗಳಿಗೆ ಪ್ರಾಮುಖ್ಯತೆ ಕೊಟ್ಟಿದೆ. ಈ ಸಮಿತಿಯವರು, ಇಡೀ ದೇಶದಲ್ಲಿ ಈ ಕೆಲಸಗಳು ನಡೆಯುತ್ತಿವೆ ಎಂಬುದನ್ನು ಹೇಳುತ್ತಾ, ಇಂಥ ಖಾಯಂ ಉಪಯೋಗವಾಗುವ ಯೋಜನೆಗಳಿಗೆ ಹೇಗೆ ಸರ್ಕಾರದವರು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸಿದ್ದಾರೆ. In 1947-48, 24 per cent of the amount spent on Grow More Food was used for schemes of permanent value; In 1951-52, 84 per cent has been spent on such works. ಇದು ಅಖಿಲಭಾರತಕ್ಕೆ ಸಂಬಂಧಪಟ್ಟ ಅಂಕಿ. ನಮ್ಮಲ್ಲಿ ಸುಮಾರು ಶೇಕಡ 92 ರಷ್ಟು ಈ schemes of permanent value ಮೇಲೆ ಖರ್ಚು ಮಾಡುತ್ತಿದ್ದೇವೆ. ನಮ್ಮ ಮಿತ್ರರಿಗೆ ಗೊತ್ತಿರುವಹಾಗೆ ತೆಂಗಿನ ಗಿಡವನ್ನು ಹಾಕಿದ ದಿವಸವೇ ಅದು ಕಾಯಿಬಿಡುವುದಿಲ್ಲ. ಯಾವುದೇ ಕೆಲಸವನ್ನು ತೆಗೆದುಕೊಳ್ಳಲಿ ತಕ್ಷಣ ಪ್ರತಿಫಲ ದೊರೆಯುವುದಿಲ್ಲ; ಸ್ವಲ್ಪಕಾಲ ತಡೆಯಬೇಕು. ಕೆಲವು ಕಡೆಗಳಲ್ಲಿ ಈಗಾಗಲೇ ಪ್ರತಿಫಲ ಬರುತ್ತಿದೆ. ಇನ್ನು ಕೆಲವು ವರ್ಷಗಳಲ್ಲಿ ಇದರ ಪೂರ್ಣಫಲ ಬರುವ ನಿರೀಕ್ಷೆಯಿದೆ. ಅಲ್ಲಿಯವರಗೂ ಶ್ರೀಮಾನ್ ಗೋಪಾಲಗೌಡರು ಕಾದು ನೋಡಬೇಕೆಂಬುದೇ ನನ್ನ ಪ್ರಾರ್ಥನೆ.

Lift Irrigation ಯೋಜನೆ ಬಹಳ ಮುಖ್ಯವಾದುದು. ಗ್ರೋ ಮೋರ್‌ಫುಡ್ ಯೋಜನೆಯಲ್ಲಿ ಈವರ್ಷ ಪ್ರಾಮುಖ್ಯತೆಯನ್ನು ಕೊಟ್ಟಿರುವುದು Lift irrigation by electricity ಗೆ. ಇಲ್ಲಿಗೆ ಬಂದು ಡಿಸ್ಟ್ರಿಕ್ಟ್ ಪ್ರದೇಶವನ್ನು ನೋಡಿಕೊಂಡು ಹೋಗಿರುವ ರಾಮಮೂರ್ತಿ ಸಮಿತಿಯವರಿಂದ ಹೆಚ್ಚು ಹುರುಪು ಬಂದಿದೆ. ಅವರೂ ಸಬ್ ಸಾಯಿಲ್ ವಾಟರ್ ಉಪಯೋಗಿಸುವುದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದಾರೆ.

(ಶ್ರೀ ಎಚ್. ಸಿದ್ದವೀರಪ್ಪ)

ಇದನ್ನು ಇನ್ನೂ ಹೆಚ್ಚು ಮುಂದುವರಿಸಿಕೊಂಡು ಹೋಗಬೇಕೆಂಬುದೇ ಸರ್ಕಾರದ ನೀತಿ. ಭೂಮಿಯಲ್ಲಿ ಕೆಳಗಿರುವ ನೀರನ್ನು ನಾವು ಮೇಲಕ್ಕೆತ್ತಲೆಂದು ದೇವರು ಮೇಲಿನ ನೀರನ್ನು ಕಡಮೆಮಾಡಿದ್ದಾನೆಂದು ಕಾಣುತ್ತದೆ. ಆದಕಾರಣ ಕೆಳಗಿನಿಂದ ನೀರನ್ನು ಆದಷ್ಟು ತೆಗೆದುಕೊಂಡು ವ್ಯವಸಾಯಕ್ಕೆ ಅನುಕೂಲ ಮಾಡಬೇಕೆಂಬ ದೃಷ್ಟಿಯಿಂದ ಚಾಲ್ತಿ ಸಾಲಿನಲ್ಲಿ ಇದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. ಇದುವರೆಗೆ, ಜನವರಿ 1953ರ ವರೆಗೆ ಇದಕ್ಕೆ 21,96,367 ರೂಪಾಯಿ ಖರ್ಚಾಗಿದೆ. ಇನ್ನೂ ಮೂರು ತಿಂಗಳಿಗೆ ಇನ್ನೂ ಖರ್ಚಾಗಿರಬೇಕು. ಕೆಲವು ಸಲಕರಣೆಗಳನ್ನು ತರಿಸಿದ್ದಾರೆ. ನಾನು ಈ ದಿವಸ ಕೂಡ ಆ ಇಲಾಖೆಯ ಡೈರೆಕ್ಟರನ್ನು ಕರೆಸಿ ಕೇಳಿದೆ. ಲಿಫ್ಟ್ ಇರಿಗೇಷನ್ನಿಗೆ ಒದಗಿಸಿರುವ ಪೂರ್ತಿಹಣ ಈ ವರ್ಷ ಖರ್ಚಾಗುವ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಅವರು ಗ್ರಾಮಾಂತರಗಳ ಜನರ ಕಷ್ಟವನ್ನು ತಿಳಿದಿರುವುದರಿಂದ ಸರಿಯಾಗಿ ಕೆಲಸ ಮಾಡುತ್ತಾರೆಂಬ ಭರವಸೆಯಿದೆ. ಪ್ರತಿ ವಾರವೂ ಪರಿಶೀಲನೆ ಮಾಡಿ, ಹಣ ಸ್ವಲ್ಪವೂ ಲ್ಯಾಪ್ಸ್ ಆಗದೇಯಿರುವ ಹಾಗೆ ನೋಡಿಕೊಳ್ಳಬೇಕೆಂದು ಹೇಳಿದ್ದೇನೆ.

Sri S. SRINIVASA IYENGAR (T.-Narasipur). –The amount was surrendered last year; was it not, Sir?

ಶ್ರೀ ಎಚ್. ಸಿದ್ದವೀರಪ್ಪ.—I want notice for that. ಒಟ್ಟಿನಲ್ಲಿ ತ್ವರಿತವಾಗಿ ಕೆಲಸ ಮಾಡಬೇಕೆಂಬುದೇ ನಮ್ಮ ಆಶಯವಾಗಿದೆ. ಮುಖ್ಯವಾಗಿ ಆಹಾರದ ಪ್ರಶ್ನೆ ದೇಶದ ಮುಂದಿರುವಾಗ ಪ್ರತಿಯೊಬ್ಬರ ದೃಷ್ಟಿಯೂ ಈ ಇಲಾಖೆಯಮೇಲೆ ಬಿದ್ದಿದೆಯೆಂಬುದು ಅವರಿಗೂ ಮನದಟ್ಟಾಗಿದೆ. They want to justify their very existence and to serve the country to the best of their ability. ಆ ದೃಷ್ಟಿಯಿಂದ ಕೆಲಸ ನಡೆಯುತ್ತಿದೆ. ಇಷ್ಟು ವಿಷಯಗಳನ್ನು ಸಭೆಯ ಗಮನಕ್ಕೆ ತಂದಿದ್ದೇನೆ. ಇನ್ನೇನಾದರೂ ಹೆಚ್ಚಿನ ವಿಷಯವಿದ್ದರೆ ಸಂದರ್ಭ ಬಂದಾಗ ಅರಿಕೆ ಮಾಡುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಲಿಫ್ಟ್ ಇರಿಗೇಷನ್ನಿಗೆ ಪ್ರಾಮುಖ್ಯತೆ ಕೊಟ್ಟಿದೆಯೆಂದು ಹೇಳುತ್ತಾರೆ. River valley ಅಲ್ಲದೆ ಬೇರೆ ಕಡೆ ಬಾವಿಗಳನ್ನು ತೆಗೆಯಬೇಕಾದರೆ, ಒಂದೇ ಒಂದು ಬೋರಿಂಗ್ ಮೆಷಿನ್ ಇದೆ; ಹೆಚ್ಚು ಮೆಷಿನ್‌ಗಳನ್ನು ತರಿಸದಿದ್ದರೆ ಈ ಕೆಲಸ ಫಲದಾಯಕವಾಗುವುದಿಲ್ಲವೆಂದು ಹೇಳಬೇಕಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಇಂಡಿಯಾ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದೇವೆ. ನಮಗೆ ಹೆಚ್ಚು ಕೊಡಬೇಕೆಂದು ಕೇಳಿಕೊಂಡಿದ್ದೇವೆ. ಅಮೆರಿಕನ್ ಏಡ್ ಪ್ರಕಾರ 25 ಬೋರಿಂಗ್ ಮೆಷಿನ್‌ಗಳು ಬರುತ್ತವೆಂದು ಹೇಳಿದ್ದಾರೆ, ನಮ್ಮ ಸಂಸ್ಥಾನಕ್ಕೆ. ಈ ವಿಚಾರದಲ್ಲಿ ಸರ್ಕಾರಕ್ಕೆ ತೀವ್ರಾಸಕ್ತಿಯಿದೆ. ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಆದಷ್ಟುಮಟ್ಟಿಗೂ ಅವರ ಸಹಾಯವನ್ನು ದೊರೆಕಿಸಿಕೊಳ್ಳಲು ಪ್ರಯತ್ನ ಮಾಡುತ್ತೇವೆ.

Mr. SPEAKER.—There are only two Demands for to-day, Nos. 21 and 23 and so shall we divide the time equally for these demands?

Some Hon'ble Members.—Yes, Sir.

Mr. SPEAKER.—So, till 3 P.M. Demand No. 21 will be continued and then the next Demand. Therefore, such of the Hon'ble Members who have sent more than one cut motion, may select only one of them so that others also may have a chance. This is only a suggestion. With that understanding we shall proceed.

Failure of Food Production Drive.

* Sri H. K. SIVARUDRAPPA (Gundlupet and Heggaddevankote).—I beg to move:

"That the demand under the head "40. Agriculture (except Botanical and other Public Gardens)" for Rs. 50,27,000 be reduced by Rs. 100 (to bring to the notice of the Government the failure of food production drive in the State)."

ಸ್ವಾಮಿ, ಈಗತಾನೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸುತ್ತಾ ಫುಡ್ ಪ್ರೊಡಕ್ಷನ್ ಡ್ರೈವಿಗೆ ಒದಗಿಸುತ್ತಿದ್ದ ಮೊಬಲಗನ್ನು ಕಡಮೆಮಾಡಿಕೊಂಡು ಬಂದಿದ್ದೇವೆ, ಕಾರಣ ಅನೇಕ ದುಂದುವೆಚ್ಚ ಕಡಮೆಮಾಡಬೇಕಾಗಿರುವುದು ಎಂದು ಹೇಳಿದರು.

ಶ್ರೀ ಎಚ್. ಸಿದ್ದವೀರಪ್ಪ.—ವ್ಯವಸಾಯದ ವಿಷಯ ಹೇಳಿರುವುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.–ಸರಿ; ಇದಲ್ಲದೆ ನಮ್ಮ ದೇಶದಲ್ಲಿ ಆಹಾರ ಧಾನ್ಯ ಸಾಲದೆ ಹೊರ ಪ್ರಾಂತಗಳಿಂದ ಆಮದುಮಾಡಿಕೊಳ್ಳುವ ಪರಿಸ್ಥಿತಿಯಲ್ಲಿ ಇಂಥ ಒಂದು ಯೋಜನೆಯ ಆವಶ್ಯಕತೆ ನಮ್ಮ ದೇಶಕ್ಕೆ ಉಂಟಾಯಿತು. 1942ರಲ್ಲಿ ಈ ಯೋಜನೆ ಪ್ರಾರಂಭವಾಗಿ ಇಲ್ಲಿಗೆ ಹತ್ತು ವರ್ಷವಾಯಿತು. ಹತ್ತು ವರ್ಷದ ಕಾಲದಲ್ಲಿ ನಾವು ನಮ್ಮ ಆಹಾರ ಧಾನ್ಯದ ಕೊರತೆ ನೀಗಿದ್ದೇವೆಯೋ ಎಂದು ನೋಡಿದರೆ, ಇಲ್ಲ ಎಂದು ಹೇಳಬೇಕಾಗಿದೆ. ಇದಕ್ಕೆ ಅನೇಕ ಕಾರಣಗಳಿವೆ. ಈ ಯೋಜನೆ ಇಂಪ್ಲಿಮೆಂಟ್‌ಮಾಡುವಾಗ ಇದರಲ್ಲಿ ಅನೇಕ ಲೋಪದೋಷಗಳಿದ್ದುದಲ್ಲದೆ ನಮ್ಮ ಜನಸಂಖ್ಯೆ ವರ್ಷೇ ವರ್ಷೇ ಹೆಚ್ಚುತ್ತಲೇ ಬಂದುದೂ ಕಾರಣವೆಂದು ಗೊತ್ತಾಗುತ್ತದೆ. ಸ್ವಾಮಿ, ಈ ಒಂದು ಯೋಜನೆಯಲ್ಲಿ ನಾವು ನೋಡಿದ ಪಕ್ಷದಲ್ಲಿ 1953—54 ರಲ್ಲಿ 31·77 ಲಕ್ಷ ರೂಪಾಯಿಗಳನ್ನು ಖರ್ಚುಬಾಬಿನಲ್ಲಿ ತೆಗೆದಿಟ್ಟಿದ್ದಾರೆ. ಇದರಲ್ಲಿ ಟ್ರಾಕ್ಟರ್ ಸರ್ವಿಸ್ ಬಾಬು ತೆಗೆದುಕೊಂಡರೆ, 'ಅದನ್ನು ತೆಗೆಯುತ್ತೇನೆ, ಅದನ್ನು ಇನ್ನು ಇಂಪ್ಲಿಮೆಂಟ್‌ಮಾಡುವುದಿಲ್ಲ, ಬುಲ್‌ಡೋಜರ್‌

* indicates that speech has not been revised by Member concerned.

ಮಾತ್ರ ಇಟ್ಟುಕೊಳ್ಳುತ್ತೇವೆ' ಎಂದು ಮಾನ್ಯ ಮಂತ್ರಿಗಳು ಹಿಂದೆಯೇ ಹೇಳಿದ್ದಾರೆ, ಹಾಗಾದರೆ 12 ಲಕ್ಷ ರೂಪಾಯಿಗಳನ್ನು ಈ ಬಾಬಿಗೇಕೆ ಕೇಳುವುದು ಎಂಬುದಕ್ಕೆ ಸಮಜಾಯಿಷಿ ಆವಶ್ಯಕವೆಂದು ಭಾವಿಸುತ್ತೇನೆ. ಮತ್ತು ಈ ಹಣವನ್ನು ಖರ್ಚುಮಾಡುವಾಗ ದೇಶದ ಎಲ್ಲಾ ಭಾಗಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಖರ್ಚು ಮಾಡುತ್ತಿಲ್ಲವೆಂದು ವಿಷಾದದಿಂದ ನಾನು ಸೂಚಿಸಬೇಕಾಗಿದೆ. ಕೇವಲ ಕೆಲವು ಪ್ರದೇಶಗಳಲ್ಲಿ ಮಾತ್ರ ಈ ಹಣದ ಉಪಯೋಗವಾಗುತ್ತಾ ಇದೆ. ಇದು ಸಾಧುವಾದುದಲ್ಲ, ಈ ಉಪಯೋಗ ಪ್ರತಿಯೊಬ್ಬ ರೈತನಿಗೂ ಸಿಕ್ಕುವಂತೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯ. ಸ್ವಾಮಿ, ನಮ್ಮ ದೇಶ ಬೇರೆ ದೇಶದಮೇಲೆ ಆಹಾರ ಧಾನ್ಯಕ್ಕಾಗಿ ಡಿಪೆಂಡಾಗಬಾರದೆಂಬುದು ನಮ್ಮ ಉದ್ದೇಶವಾಗಿದ್ದರೂ, ನಮ್ಮ ಮೈಸೂರು ದೇಶದಲ್ಲಿ ಪ್ರತಿಯೊಬ್ಬ ರೈತನೂ ತನಗೆ ಬೇಕಾದಷ್ಟನ್ನು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಸರಿಯಾದ ನೀತಿಯನ್ನನುಸರಿಸಿ ಸಂಹೊಂದಿಸಿಕೊಳ್ಳಬೇಕು. ಈ ದೃಷ್ಟಿಯಿಂದ ನಮ್ಮ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಲು ಪ್ರತಿಯೊಬ್ಬ ರೈತನಿಗೂ ಅನುಕೂಲವಾದ ಒಂದು ಕಾರ್ಯಕ್ರಮ ಹಾಕಬೇಕು. ಈಗ ಹಾಗೆ ಆಗಿಲ್ಲ, ಎಲ್ಲೋ ಕೆಲವು ಕಡೆ, ಮಂಡ್ಯ ಜಿಲ್ಲೆ ಅಥವಾ ಶಿವಮೊಗ್ಗ ಜಿಲ್ಲೆಯಲ್ಲಿ, ಆಹಾರದ ಸ್ವಯಂಪರಿಪೂರ್ಣತೆ ಕೆಲಸ ನಡೆದರೆ ಸಾಲದು, ಬಾಕಿ ಜಿಲ್ಲೆಗಳವರೂ ಅವರನ್ನು ಅನುಸರಿಸಿ ಅದೇ ರೀತಿ ಮಾಡಬೇಕು. ಪ್ರತಿಯೊಬ್ಬ ರೈತನೂ ತನಗೆ ಬೇಕಾದ ದವಸ ಬೆಳೆಯುವುದಕ್ಕೆ ಈಗ ಸಾಧ್ಯವಾಗಿಲ್ಲ. ಬೇರೆ ದೇಶಗಳನ್ನು ಆಶ್ರಯಿಸುವುದನ್ನು ಬಿಡುವುದಲ್ಲದೆ, ಒಂದು ಜಿಲ್ಲೆಯವರು ಬೇರೆ ಜಿಲ್ಲೆಯವರನ್ನು ಆಶ್ರಯಿಸದಂತೆ ಕೂಡ ಮಾಡಬೇಕು. ಒಟ್ಟಿನಲ್ಲಿ ಹಂಚಿಕೆ ಸಮರ್ಪಕವಾಗಿಲ್ಲ, ಸಮರ್ಪಕವಾಗಬೇಕು ಎಂದು ಹೇಳುವುದೇ ನನ್ನ ಉದ್ದೇಶ.

ಈ ಯೋಜನೆಯಲ್ಲಿ ಕಪಿಲೆ ಬಾವಿಗಳನ್ನು ತೆಗೆಯುವುದಕ್ಕೆ ಒಂದು ಗ್ರಾಂಟು ಕೊಡುತ್ತಿದ್ದೀರಿ. ಹಿಂದೆ ಒಂದು ಸಾವಿರ ರೂಪಾಯಿ ಕೊಡುತ್ತಿದ್ದುದನ್ನು 500 ರೂಪಾಯಿಗಿಳಿಸಿ, ಪುನಃ ಅದನ್ನು 250 ರೂಪಾಯಿಗಿಳಿಸಿದ್ದಾರೆ. ಸಾಲ ಕೊಡಬೇಕೆಂದು ಹೇಳುವಾಗ ಜಮೀನಿದ್ದರೆ ತಾನೆ ಕೊಡುವುದು? ಸಾಕಾದಷ್ಟು ಜಮೀನಿದ್ದರೆ ಅದನ್ನು ಆಧಾರಮಾಡಿಕೊಂಡು ತಾನೆ ಕೊಡುವುದು? ಒಂದೊಂದು ಬಾವಿ ಕೆಲವು ಕಡೆ 80 ಅಡಿಗಳವರೆಗೆ ತೆಗೆಯಬೇಕಾಗಿದೆ, ತಾವು ಕೊಡುವ ಸಬ್ಸಿಡಿ ಈಗ ಸಾಲುವುದಿಲ್ಲ. ಆದ್ದರಿಂದ ಹಿಂದಿದ್ದ ಹಾಗೆ ಒಂದು ಸಾವಿರ ರೂಪಾಯನ್ನಾದರೂ ಕೊಡಿ ಎಂದು ಮನವಿಮಾಡುತ್ತೇನೆ.

ಸುಮಾರು 5 ಸಾವಿರ ಹಳ್ಳಿಗಳಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಾಗುತ್ತಿದೆಯೆಂದು ಹೇಳಿದ್ದೀರಿ. ಬಹುಶಃ ಹಾಗೆ ವರದಿಯಾಗಿರಬಹುದೇ ಹೊರತು ನಿರೀಕ್ಷಿಸಿರುವಷ್ಟು ಫಲ ದೊರೆಯುತ್ತಿಲ್ಲವೆಂದು ಹೇಳಬೇಕಾಗಿದೆ. ಇದಕ್ಕೆ ಕಾನೂನು ಅನುಕೂಲವಾಗಿದ್ದರೂ ಸಾಮಾನ್ಯವಾಗಿ ನಿರೀಕ್ಷೆಮಾಡುವಷ್ಟು ಕೆಲಸವಾಗುತ್ತಿಲ್ಲ.

ತಕಾವಿ ಸಾಲ, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಇವಕ್ಕೆ ಹೆಚ್ಚುಹೆಚ್ಚಾಗಿ ಹಣ ಒದಗಿಸಿದ್ದೀರಿ. ಅನೇಕ ಕಡೆಗೆ ಕೊಟ್ಟಿರಬಹುದು; ಅದರಲ್ಲಿ ಸಂದೇಹವಿಲ್ಲ. ಕೆಲವು ಸಂದರ್ಭಗಳಲ್ಲಿ ಇದನ್ನು ತೆಗೆದುಕೊಳ್ಳುವ ರೈತರು ಸಾಲಗಳನ್ನು ಬೇರೆ ರೀತಿಯಲ್ಲಿ ಮದುವೆಗೆ ಅಥವಾ ಇತರ ಕೆಲಸಗಳಿಗೆ ಉಪಯೋಗಮಾಡುತ್ತಿದ್ದಾರೆ. ಸಾಲವನ್ನು ತೆಗೆದುಕೊಳ್ಳುವಾಗ ಮಂಜೂರು ಮಾಡುವ ಅಧಿಕಾರಿಗಳು ಅನೇಕ ತೊಂದರೆ ಕೊಡುತ್ತಿದ್ದಾರೆ. ಯಾರಿಗೆ ಆವಶ್ಯಕತೆ ನಿಜವಾಗಿದೆಯೋ, ಯಾರು ನಿಜವಾಗಿಯೂ ತೆಗೆದುಕೊಂಡ ಕೆಲಸಕ್ಕಾಗಿಯೇ ಉಪಯೋಗಿಸುತ್ತಿದ್ದಾರೋ ಅವರನ್ನು ನಿಗಾದಲ್ಲಿಟ್ಟು ಅಂಥವರಿಗೆ ಮಾತ್ರ ಕೊಡಬೇಕು. ಕೊಡುವ ಹಣ ಸಹ ಕಡಮೆ. 150—200 ರೂಪಾಯಿಗಳನ್ನು ಕೊಟ್ಟರೆ ಲಂಚ ರುಸುವತ್ತುಗಳಿಗೆ ಬೇರೆ ಹಣ ಖರ್ಚಾಗುತ್ತದೆ. ಲಂಚದ ಇಲಾಖೆ ಡೈರೆಕ್ಟರೊಬ್ಬರಿರುವಾಗ ಲಂಚದ ಹಾವಳಿ ತಡೆಗಟ್ಟಲು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು.

ಇರಿಗೇಷನ್ ಪಂಪಿಂಗ್ ಸೆಟ್ಸ್‌ಗೆ ಗ್ರಾಮಾಂತರಗಳ ಕಡೆಯಿಂದ ಅನೇಕ ಬೇಡಿಕೆಗಳು ಸರ್ಕಾರಕ್ಕೆ ಬಂದಿವೆ. ಅವನ್ನು ಹೆಚ್ಚುಹೆಚ್ಚಾಗಿ ಎಲ್ಲ ಕಡೆಗೂ ಒದಗಿಸುವುದಕ್ಕೆ ಏರ್ಪಾಡುಮಾಡಿಲ್ಲ, ಬಹುಶಃ ಅನೇಕ ಅರ್ಜಿಗಳು ಸರ್ಕಾರದಲ್ಲಿ ಇತ್ಯರ್ಥವಾಗದೆ ನಿಂತಿವೆಯೆಂದು ಭಾವಿಸುತ್ತೇನೆ. ಈ ಸಾಲಿನಲ್ಲಾದರೂ ಇದನ್ನು ಒದಗಿಸಿ ಈ ಕೊರತೆ ನೀಗಬೇಕೆಂದು ಪ್ರಾರ್ಥನೆಮಾಡುತ್ತೇನೆ. ಎಲ್ಲಿ ನೀರಾವರಿ ಸೌಕರ್ಯ ಕಡಮೆ ಇದೆಯೋ, ಎಲ್ಲಿ ನೀರನ್ನೊದಗಿಸಲು ಸಾಧ್ಯವಾಗಿಲ್ಲವೋ ಅಂಥ ಕಡೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು ಮತ್ತು ಕೇಳಿದಾಗ ಅಂಥವರಿಗೆ ಹೆಚ್ಚು ನಿಗಾ ಕೊಡಬೇಕು ಎಂದು ಪ್ರಾರ್ಥನೆಮಾಡುವುದೂ ಅಲ್ಲದೆ, ನಂಜನಗೂಡು ಸಬ್‌ಡಿವಿಜನ್ನಿಗೆ ಇನ್ನೂ ಹೆಚ್ಚಾಗಿ ಒದಗಿಸಬೇಕೆಂದು ಪ್ರಾರ್ಥನೆಮಾಡುತ್ತೇನೆ.

1-30 P.M.

ಇನ್ನು ಹೆಚ್ಚು ಆಹಾರ ಬೆಳೆಯುವ ಯೋಜನೆಯ ಬಗ್ಗೆ ಉತ್ತಮ ಬೀಜಗಳನ್ನು ಒದಗಿಸುವ ವಿಚಾರದಲ್ಲಿ ಒಂದೆರಡು ಅಂಶಗಳನ್ನು ತಮ್ಮ ಅವಗಾಹನೆಗೆ ತರಲಿಚ್ಛಿಸುತ್ತೇನೆ. 1951—52ನೆಯ ಸಾಲಿನಲ್ಲಿ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕ್ಷಾಮ ತಲೆದೋರಿದ ಕಾಲದಲ್ಲಿ ಸರ್ಕಾರದವರು ಬಿಳೀ ಜೋಳವನ್ನು ಒದಗಿಸಿದ್ದರು. ಅದನ್ನು ಉಪಯೋಗಿಸಿದವರೆಲ್ಲ ಬಹಳ ಕಷ್ಟಕ್ಕೆ ಗುರಿಯಾದರು. ಕಾರಣ, ಈ ಬಿಳೀ ಜೋಳ ಅಲ್ಲಿಯವರು ಯಾರಿಗೂ ಹೊಂದಲಿಲ್ಲ. ನಮ್ಮ ಸಂಸ್ಥಾನದಲ್ಲಿ ಇಷ್ಟೊಂದು ಪರೀಕ್ಷಾ ಕೇಂದ್ರಗಳನ್ನಿಟ್ಟುಕೊಂಡಿದ್ದರೂ ಸಹ ಏನೂ ಪ್ರಯೋಜನವಾಗದೆ ಜನರು ಆಗ ಬಹಳ ಕಷ್ಟನಷ್ಟಕ್ಕೆ ಗುರಿಯಾದರು. ಅದೇ ಸಾಲಿನಲ್ಲಿ ರಾಗಿ ಬೆಳೆ ಸಹ ಆಗಲಿಲ್ಲ. ಈ ಕಾರಣದಿಂದ ಜನರು ಕಷ್ಟನಷ್ಟಗಳಿಗೆ ಗುರಿಯಾದರು. ಈ ರೀತಿ ಪುನಃ ಆಗದಂತೆ ತಡೆಗಟ್ಟಲು ಈ ಬಗ್ಗೆ ಸರ್ಕಾರದವರು ಸೂಕ್ತ ವ್ಯವಸ್ಥಾ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಒತ್ತಾಯಪಡಿಸುವ ಸಲುವಾಗಿ ಈ ಖೋತಾ ಸೂಚನೆಯನ್ನು ತಂದಿರುತ್ತೇನೆ.

Mr. SPEAKER.—Cut motion moved :—

"That the demand be reduced by Rs. 100".

Sri J. MOHAMED IMAM (Jagalur).—Sir, in support of the cut motion moved by my Hon'ble friend Sri H. K. Shivarudrappa, I wish to say a few words. He has emphasised therein that the food production drive in the State has met with failure. I

(SRI J. MOHAMED IMAM.)

am not criticising the persons who were responsible for the introduction of food production drive.

Sri L. SIDDAPPA (Channagiri).—Because, you yourself were responsible for it in 1934, or so.

Sri J. MOHAMED IMAM.—But in 1934 it was not food production drive. It was not a drive but only intensification of the measures existing at that time. The actual drive began from 1949-50 when there was food scarcity. The then Minister for Agriculture promised the people that he would make the State self-sufficient by 1951-52 of 1952-53, that is within three years and he adopted a three year programme. The Legislature voted the required amount for each year and that amount was really considerable. At that time, it was pointed out to us that the State was deficit to the extent of 2.41 lakhs of tons of foodgrains. And he told us that within three years this deficit would be made up and that we would have plenty of food. Now what we have to consider dispassionately is this: whether food production drive has materialised; whether it has solved our food problem to an appreciable extent. I have got here a copy of the achievements during the year 1951-52 wherein they have stated that till now they have been able to grow more food to the extent of 63,000 tons. So, according to this and taking for granted that these achievements are true, that we have been able to grow more food to the extent of 63,000 tons, we must admit that that food drive or the three years programme of food production has not met with such success as we expected. We are still short apparently to the extent of 180,000 tons of foodgrains. And it has also been explained here, as admitted here, that this food drive could not be implemented for various reasons. The first reason given is on account of increase in the population to the extent of 10 lakhs or one million there is shortage of food. They have thrown the blame on the people. They have also given some other reasons at the end of the statement prepared by the Commissioner of Food Production. The reasons are as follows:

(1) During 1949-50, the first year of the campaign, most of the big tanks and reservoirs of the State including the Krishnarajasagar went dry, seriously affecting the paddy crop raised under them during that year. Owing to want of sufficient rains during the year 1951-52 drought conditions prevailed in some of the dry districts of the State, namely Kolar, Tumkur and Chitaldrug, as a result of which the progress of the campaign received a set-back;

(2) The Double Cropping Programme according to which an area of 1,10,000 acres was expected to yield an additional production of 55,000 tons of foodgrains during these three years did not yield beyond a scanty quantity of 10,073 tons due to insufficiency of rains;

(3) the programme of bringing a large extent of current fallow lands under cultivation during the period under report did not materialise substantially with the result that the expected additional production to the tune of 75,000 tons was not realised due to lack of sufficient response from the raiyats. The drought conditions that prevailed during the period also contributed to the poor progress;

(4) the scheme of sinking irrigation wells according to which an additional production of 5,100 tons was expected to be realised during the three years did not go beyond 1351 tons for various reasons;

(5) the tendency on the part of raiyats to divert some of the food areas towards commercial crops owing to the increased returns from the latter also worked as a severe handicap to the progress of the scheme. The deviation of the areas from food crops towards the cultivation of cotton under the integrated agricultural production plan also reduced the area under food crops to a certain extent;

(6) the abnormal growth of population which has been significant in the recent years has upset the calculations of our food deficit. This is no doubt one of the causes for the persistence of food scarcity even after the application of Grow More Food Campaign during these three years.

The additional production derived during these three years compared with the figures of the State's food deficiency indicates the fact that we are still far away from the target. It only shows that the campaign will have to be continued for some more years to come in order to reach self-sufficiency.

So, Sir, it has been admitted that inspite of the best efforts to grow more food during these three years and inspite of the huge sums of money spent on the food production drive we are not in any way better than we were and we have not reached the target. On the other hand, I must state that on account of this reason and for various other reasons also, such as the continuance of controls we are in a worse position. Four years ago, millets were sold at 4 seers or 5 seers a rupee. Now they are being sold at three seers a rupee. Rice was being sold four years ago at 3 seers or $3\frac{1}{2}$ seers a rupee whereas now it is being sold at 1 seer or $1\frac{1}{4}$ seers a rupee. Similarly, in respect of other commodities. So, if there had been some appreciable increase.. (A voice: What about subsidy?) Without subsidy the previous Government were supplying food at a cheap rate. If there had been some substantial increase in our food production, then we would have expected some reasonable price for the common man to purchase his food requirements. So, I must submit that admittedly we are still far short of foodgrains to the extent of 160 lakhs of tons and the scarcity still continues, the prices are really abnormally high. If you would kindly refer to my previous speeches, I was pointing out to the then Minister that most of the schemes included under the Grow More Food Campaign were experimental. I pointed out to him at that time that he should concentrate on only one aspect which would really help solve the food problem; that is, that whatever money is available, I was requesting him to invest the amount on irrigation works and irrigation works alone. But Sri Mariappa —it is unparliamentary to call him by his name—the then Minister for Agriculture had his own reasons, had his own pet theories. The result is, in the course of these three or three and a half years, crores of rupees have been spent. 3.37 crores have been spent without any tangible result, and subsequently the Government must have spent a good deal of money. Sir, even now it is not too late for us to think about as to how to achieve self-sufficiency. I must also state that the introduction of this food production system has only increased the expenditure of the Department without bringing any return.

I think you will permit me to speak on this aspect also, Mr. Speaker, because there is a cut motion bearing on this.

Mr. SPEAKER.—And you do not move that cut motion?

Sri J. MOHAMED IMAM.—Yes. The expenditure of the Department then was 6 lakhs per annum and this was increased to 52 lakhs by the introduction of this food production drive. Sir, I may be permitted to quote some figures in this connection to show how the expenditure has swelled up. Up to the year 1941-42 the expenditure of the Department of Agriculture was between 6 and 10 lakhs. In the year 1947-48, the Budget of the Agricultural Department shot up to 50 lakhs and this was the result of having undertaken the Grow More Food Campaign. I was telling the Government, I was imploring and appealing to them not to waste money on idealogical schemes but to invest money only on irrigation works which will be works

(SRI J. MOHAMED IMAM.)

of parmanent utility and substantial benefit. But they went on—I will not say indulged—they went on with their own schemes which I think, you might have realised now, have not borne us any substantial result and have not helped the food situation.

Sir, the Food Campaign drive was divided into three categories—work schemes, supply schemes and services and miscellaneous schemes. So far as the works schemes are concerned they relate to irrigation works: restoration of tanks and desilting of tanks and subsidising the construction of wells. I do not oppose these works. But so far as the other two schemes were concerned, *viz.*, supply and service and miscellaneous scheme, they have not been of much benefit. Even now I must state that these two schemes require a good deal of modification. Sir, in the present budget, about 31 lakhs of rupees have been provided and a major portion of this sum is taken away by tractors and bull-dozers. Sir, I was pessimistic from the beginning about the success of tractors and bull-dozers. They took away a good deal of the Government money. The then Government gave us very high hopes and we were all watching with interest as to how far they would benefit the Government. Now, Sir, it has been realised by one and all that the policy of the Government in introducing bull-dozers and tractors in our system of agriculture was rather premature; and I think the Government themselves have now been thinking of winding up the tractor organisations. We can say with certainty that these tractors have not helped much in growing more food. The bull-dozers and tractors may have helped a lucky few. Sir, yesterday I was going to a certain place and on the way I noticed two places belonging to the previous Ministers which are nicely cleaned, nicely levelled up, with nice roads and bridges put up. But it is only the privilege of one or two. So far as the common man is concerned, so far as the ordinary riayat is concerned, he has not at all used these tractors or bull-dozers. It must be also understood that the number of holdings with an acreage up to 10 acres is much more than the holdings of 100 acres and about. The number of small holdings is much more and the small raiyat cannot and will not make use of your tractor and bull-dozer. So the introduction of tractors and bull-dozers did not help us much. On the other hand, it involved Government in a good deal of expenditure without any commensurate return. Similarly, Sir, the other schemes for example, well-subsidy, I must state with regard that in spite of the best intentions of the Government, this well-subsidy has been a failure. When the Government announced that they were prepared to advance money or give grants of Rs. 500 per well, many people did come forward. But it is well-known that this subsidy was not properly used; it was even misused, and the result is that we are not having as many wells as we expected, nor has the acreage under these wells increased as much as we expected. I will give figures. We have given subsidy to the extent of 3.71 lakhs towards these irrigation wells and the extra acreage that is brought under cultivation is only 1,682 acres and of even this, I am doubtful. I can tell the Government, I will be glad if they can stop this well-subsidy, because the amount that is being given is being misused and is not properly used. There is no proper supervision and in the interval before the money reaches the raiyat, there is considerable leakage.

Similarly, the land improvement schemes. Government must have advanced lakhs of rupees on land improvement schemes . . . .

Sri G. A. THIMMAPPA GOWDA (Arkalgud).—May I know in how many cases it has been misused?

Sri J. MOHAMED IMAM.—I want notice. It is not in one or two cases. It is within the common knowledge of every member.

I was telling you, Sir, that the money that is given for land improvement purposes was not being applied for the proper purpose for which it was intended. There are any number of instances where very many persons obtained loan on the plea that they are going to improve their land; they deliberately misapplied the money. Instances are not wanting where people obtained money on the ground that they wanted to start a dairy farm, but they have not started the dairy farm.

Sri S. SREENIVASA IYENGAR.—There is not even a cow!

Sri J. MOHAMED IMAM.—There are a number of instances of this type. The land improvement loans and takavi loans are intended to be given to persons who are really interested in the improvement of the land and if that purpose is served, it will really be worthwhile advancing amount of money. But so far as my experience goes—and if there is anyone to correct me in my impression, I will be very glad—the person who receives this loan or well-subsidy or the dairy loan will misapply the money and it will never be spent for the purpose for which it was intended.

Sir, the Hon'ble Minister was pleased to remark in his opening speech that he is very particular about the Research Station. I am also very particular about research. Research forms the very life of any enterprise, and I have no objection for it. But what I submit to him is this, that the research must be carried methodically and properly. Even before food production drive was introduced research was going on in the Agricultural Department and it was receiving only a grant of 6 lakhs of rupees, per annum. For example, cotton selection 69 was found as a result of research and I shall be glad if it is intensified. The money that is allotted must be well utilised and I have no serious objection for that. What I object to is, for example, the distribution and multiplication of improved varieties of seeds. Government spend large amounts on this scheme. I will give you figures under "Food Production Drive".

	Rs.
Direction	82,300
Staff for "Grow More Food" Works.	35,800
Tractor and Lorry Service in the State.	12,30,200

I will be glad if you scrap the above and leave it to private persons. Government need not spend any more on this scheme.

	Rs.
Multiplication of Improved Varieties of Seeds.	10,000
Distribution of Improved Varieties of Seeds.	1,50,000

I am not a paddy grower. There are three or four varieties of paddy which are popular and liked by all—Coimbatore Sanna, Bangara Kaddi, Halubbalu and other variety. Every year we have been spending about two lakhs of rupees on the item of Distribution of Improved Varieties of Seeds. I request the Government to examine this item carefully and see whether there is need to make this provision in the light of the present financial stringency.

Another item is Manufacture and Distribution of Rural Compost. I am myself a villager and a raiyat and I prepare my own compost. But I do not see the need . . . .

Sri H. S. RUDRAPPA (Honnali).—Will the servants prepare or you prepare?

Sri J. MOHAMED IMAM.—I myself do it. I have to set an example and I have to work.

The manufacture of compost manure is, I admit, an ideological scheme. Every raiyat knows how to prepare the compost. If you are going to supply him extra manure I have no objection. But to spend on the preparation of the compost I think is rather unnecessary. The

(SRI J. MOHAMED IMAM.)

money that was allotted was spent in digging pits all round the village and every villager was asked to store compost in any of them. I think this can be done by the raiyat himself. He gets hold of the nearest pit and dumps it there. This costly item may be taken away.

Similarly, expenditure with regard to Protective Measures against Pest and Diseases, Preparation and Distribution of manure mixture, Subsidy for construction of Irrigation Wells, Assessment of the Result of Grow More Food—all these come to 32 lakhs. I request you to consider whether in the light of the observation that I have made the Grow More Food Campaign has not proved a failure, and whether it is worthwhile to continue to incur the same expenditure. Personally, I think all these items can be curtailed.

With these words, I request the House to support the cut motion. If you support the cut motion you will be helping the Government and it will be in your own interest to cut down the expenditure.

Mr. SPEAKER.—Cut motion moved :

"That the demand be reduced by Rs. 100".

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ನಾನು ಪ್ರಾರಂಭ ಭಾಷಣದಲ್ಲೇ ಈ ರೀತಿಯಾಗಿ ಕೆಲವು ಟೀಕೆಗಳು ಬರುತ್ತವೆಂದು ನಿರೀಕ್ಷಣೆಮಾಡಿ, ಈ ಮೊದಲೇ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ.

ಆದರೆ ಈಗ ತಾನೆ ಮಾತನಾಡಿದ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಮಹಮದ್ ಇಮಾಂರವರು ಹೇಳಿರತಕ್ಕದ್ದನ್ನು ನಾನು ಸಂಪೂರ್ಣವಾಗಿ ತಪ್ಪು ಎಂದು ಹೇಳುವುದಿಲ್ಲ. ಆದರೆ ಇದು ಎಷ್ಟರಮಟ್ಟಿಗೆ ಫಲಕಾರಿಯಾಗಬೇಕಾಗಿತ್ತೋ ಅಷ್ಟರಮಟ್ಟಿಗೆ ಫಲಕಾರಿಯಾಗಿಲ್ಲವೆಂಬ ಅರ್ಥ ಬರುವ ರೀತಿಯಲ್ಲಿ ಟೀಕೆ ಮಾಡಿ ತೋರಿಸಿದ್ದಾರೆಂದು ನಾನು ಭಾವಿಸುತ್ತೇನೆ. ಇಲ್ಲಿ ತೋರಿಸಿರತಕ್ಕ ಅಂಶಗಳನ್ನು ತಾವು ನೋಡುವುದಾದರೆ ನಾವು ಸತ್ಯಾಂಶವನ್ನು ಚಾಚೂ ಮರೆಮಾಚದಂತೆ ತೋರಿಸಿರುತ್ತೇವೆಂಬುದು ಎಲ್ಲರಿಗೂ ಗೊತ್ತಾಗುತ್ತದೆ. ಆದರೆ ಇದರಿಂದ ಎಷ್ಟು ಫಲಕಾರಿಯಾದ ಪ್ರಯೋಜನಗಳಾಗಿವೆ ಎಂಬುದು ಟೀಕೆ ಮಾಡತಕ್ಕಂಥ ಜನರ ಕಣ್ಣಿಗೆ ಬೀಳತಕ್ಕದ್ದು ಬಹಳ ಕಷ್ಟವೆಂದು ಈ ಮೊದಲೇ ನಾನು ತಿಳಿಸಿದ್ದೇನೆ. ಆದರೆ ಇದೇನೂ ಅಂಥ ಒಂದು ಕುರುಡು ದಾರಿಯಲ್ಲಿ ಹೋಗುತ್ತಿಲ್ಲವೆಂಬ ಅಂಶವನ್ನು ತಾವು ಪರಿಶೀಲನೆಮಾಡಬೇಕೆಂದು ಹೇಳುತ್ತೇನೆ. ಕಳೆದ ಸಾಲಿನಲ್ಲಿ ಈ ಕಾಂಪೋಸ್ಟ್ ಮೆನ್ಯೂರ್ ಸ್ಕೀಮಿಗಾಗಿ ಬಡ್ಜೆಟ್ಟಿನಲ್ಲಿ 10 ಲಕ್ಷ ರೂಪಾಯಿಗಳನ್ನೊದಗಿಸಲಾಗಿತ್ತು. ಆದರೆ ನಾವು ಇದರ ಫಲಿತಾಂಶವೇನಾಗುತ್ತದೋ ಎಂಬ ಆಲೋಚನೆಯಿಂದ ಹಾಗೆ ಹಣವನ್ನೊದಗಿಸಿದ್ದರೂ, ಆ ಮೊಬಲಗಿನಲ್ಲಿ ಒಂದು ಕಾಸನ್ನಾದರೂ ಸಹ ಖರ್ಚುಮಾಡಿರುವುದಿಲ್ಲ. ತಾವು ಬಡ್ಜೆಟ್ ಪುಸ್ತಕವನ್ನು ಬೇಕಾದರೆ ತೆಗೆದು ನೋಡಬಹುದು. ಆ ಹಣವೆಲ್ಲವೂ ಹಾಗೆಯೇ ಉಳಿದಿದೆ. ಎಲ್ಲಿ ಖರ್ಚುಮಾಡಿದರೆ ಅದರಿಂದ ನಮಗೆ ಸರಿಯಾದ ಫಲ ದೊರೆಯುತ್ತದೆ, ಎಲ್ಲಿ ಖರ್ಚುಮಾಡಿದರೆ ಅದರಿಂದ ಸರಿಯಾದ ಫಲ ದೊರಕುವುದಿಲ್ಲವೆಂಬ ಅಂಶ ನಮಗೂ ಸಹ ಚೆನ್ನಾಗಿ ಮನದಟ್ಟಾಗಿರುತ್ತದೆ. ಹಾಗೆ ಅನವಶ್ಯಕವಾದ ಬಾಬಿಗೆಲ್ಲಾ ಹಣವನ್ನು ಖರ್ಚುಮಾಡುತ್ತಿಲ್ಲವೆಂಬ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

We do not stand on *izzat* or anything of the sort.

ಇದನ್ನು ಸಾರ್ವಜನಿಕರೂ ಸದ್ವಿನಿಯೋಗಪಡಿಸಿಕೊಳ್ಳಲಿ ಎಂದು ಇದನ್ನು ತಮ್ಮೆಲ್ಲರ ಮುಂದೆ ಇಟ್ಟಿದ್ದೇನೆ. ಆದರೆ ಇದರಲ್ಲಿ ಯಾವ ದೃಷ್ಟಿಯಿಂದ ನೋಡಿದರೂ ಅನುಕೂಲವಾಗುತ್ತಿಲ್ಲವೆಂದು ದಯೆಯಿಟ್ಟು ಯಾರೂ ಆಲೋಚನೆಮಾಡಬೇಡಿ.

This is a very valuable document and I am going to make a present of this. Please read and find out whether the G. M. F. scheme is sucessful or not. This is a learned document produced by the T. T. Krishnamachari Committee wherein they have surveyed the whole thing.

ಇದರಲ್ಲಿ ನಾವು ನಮ್ಮ ಪ್ರೊಡಕ್ಷನ್ ಎಷ್ಟರಮಟ್ಟಿಗೆ ಹೆಚ್ಚಿರುತ್ತದೆಯೆಂಬುದನ್ನು ತೋರಿಸಿದ್ದೇವೆ. ಆದರೆ ನಾವು ಹಾಗೆ ಇಲ್ಲಿ ತೋರಿಸಿರತಕ್ಕ ಉತ್ಪತ್ತಿಯಲ್ಲಿ ಇನ್ನೂ ಅಂಡರ್ ಎಸ್ಟಿಮೇಟ್ ಮಾಡಿದ್ದೇವೆಯೇ ಹೊರತು, ಇದರಲ್ಲಿ ಓವರ್ ಎಸ್ಟಿಮೇಟ್‌ಮಾಡಿಲ್ಲವೆಂಬುದನ್ನು ಈ ಪುಸ್ತಕದಲ್ಲಿ ಚೆನ್ನಾಗಿ ಹೇಳಿದ್ದಾರೆ. ಆದರೆ ನಾವು ಈಗ ಯಾವ ಯಾವುದಕ್ಕಾಗಿ ಖರ್ಚುಮಾಡಬೇಕೆಂದಿದ್ದೇವೆಯೋ ಆ ಹಣವೆಲ್ಲವನ್ನೂ ಇರಿಗೇಷನ್ ಬಾಬಿಗೇ ಹಾಕಬೇಕೆಂಬ ಆಸೆ ತಮಗಿರುವಹಾಗೆ ಕಾಣುತ್ತದೆ. ಆ ಅಂಶವನ್ನು ತಾವು ಗಮನಿಸುವುದಾದರೆ, ತಾವು ತಮ್ಮ ಕಾಲದಲ್ಲಿ ಪ್ರಾರಂಭಮಾಡಿ ಕೈ ಬಿಟ್ಟಿದ್ದಂಥ ನೀರಾವರಿ ಕಾಮಗಾರಿಗಳನ್ನೆಲ್ಲಾ ನಾವು ಕೈಕೊಂಡು ಆ ಕೆಲಸಗಳನ್ನು ಮುಗಿಸುತ್ತ ಬಂದಿದ್ದೇವೆ. ಆ ಕೆಲಸಗಳೆಲ್ಲಾ ಪೂರ್ತಿಯಾಗಿ ಮುಗಿಯುತ್ತಾ ಬಂದಿವೆ. ಅದನ್ನು ತಾವು ಪರ್ಯಾಲೋಚನೆ ಮಾಡಿದರೆ ಮತ್ತೆ ಯಾವುದನ್ನೂ ಖರ್ಚುಮಾಡದಿರುವಷ್ಟು ಹಣವನ್ನು ಉದಾರವಾಗಿ ಈ ನೀರಾವರಿ ಬಾಬಿಗೆ ನಾವು ಖರ್ಚುಮಾಡುತ್ತಿದ್ದೇವೆಂಬುದು ಗೊತ್ತಾಗುತ್ತದೆ. ತಾವು ಈ ಬಗ್ಗೆ ಹೆಚ್ಚಿನ ಸಂಶಯ ಪಡಬೇಕಾಗಿಲ್ಲ. ಇದರಿಂದ ಏನೂ ಪ್ರಯೋಜನವಿಲ್ಲವೆಂಬುದನ್ನು ತಾವು ನಮಗೆ ಮನದಟ್ಟುಮಾಡಿಕೊಡುವ ಕಾಲಕ್ಕೆ ನಾವು ಇದನ್ನು ಕೂಡಲೇ ತೆಗೆದುಹಾಕಲು ಸಿದ್ಧರಾಗಿದ್ದೇವೆಂಬ ಅಂಶವನ್ನು ಈ ಸಮಯದಲ್ಲಿ ನಾನು ತಮಗೆ ತಿಳಿಸಿದರೆ ಸಾಕಾಗಿದೆ.

ಇನ್ನು ಟ್ರಾಕ್ಟರ್‌ಗಳ ವಿಚಾರವಾಗಿ ಮಾತನಾಡುತ್ತಾ ಮಾನ್ಯ ಸದಸ್ಯರು, ನಮ್ಮ ದೇಶಕ್ಕೆ ಇವುಗಳಿಂದ ಎಷ್ಟರಮಟ್ಟಿನ ಪ್ರಯೋಜನವಾಗಬೇಕಾಗಿತ್ತೋ ಅಷ್ಟಾಗಿಲ್ಲವೆಂದು ಹೇಳಿದರು. 1946—47 ರಲ್ಲಿ ಈ ಟ್ರಾಕ್ಟರುಗಳ ಬಗ್ಗೆ 21,58,802 ರೂಪಾಯಿಗಳು ಖರ್ಚಾಗಿವೆ. ಟ್ರಾಕ್ಟರ್‌ಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೆಂದು ಹೇಳಿದರು.

ಶ್ರೀ ಎಚ್. ಎಸ್. ರುದ್ರಪ್ಪ.—ಟ್ರಾಕ್ಟರ್‌ಗಳು ಸರಿಯಾಗಿ ಕೆಲಸಮಾಡುತ್ತಿಲ್ಲವೋ, ಜನರು ಸರಿಯಾಗಿ ಕೆಲಸಮಾಡುತ್ತಿಲ್ಲವೋ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೆ ನಾನಾ ಕಾರಣಗಳಿವೆ. ಆದರೆ ಅವರು ಅಷ್ಟಾಗಿ ಅವುಗಳು ಫಲಕಾರಿಯಾಗಿ ಕೆಲಸಮಾಡಲಿಲ್ಲವೆಂದು ಹೇಳಿದರು. ಆ ವರ್ಷ 85 ಸಾವಿರ ಎಕರೆ ಜಮೀನನ್ನು ಸಾಗುವಳಿ ಮಾಡಲಾಗಿದೆ, ಈ ಟ್ರಾಕ್ಟರುಗಳಿಂದ.

ಆದರೆ ನಮ್ಮ ಮಾನ್ಯ ಸದಸ್ಯರು ಇಬ್ಬರ ವಿಚಾರವಾಗಿ ಒಂದು ಪ್ರಸ್ತಾಪಮಾಡಿದ್ದಾರೆ. ಅದನ್ನು ನಾನು ರೆಫ್ಯೂಟ್ ಮಾಡಲೇಬೇಕಾಗಿದೆ. ಆ ಎರಡು ಜನರೂ ಈ ಟ್ರಾಕ್ಟರುಗಳಿಂದ ಪಡೆದುಕೊಂಡ ಪ್ರತಿ ಫಲಕ್ಕೆ ಸರಿಯಾಗಿ ಹಣವನ್ನು ಸರ್ಕಾರಕ್ಕೆ ಪಾವತಿ ಮಾಡಿದ್ದಾರೆ. ಆದರೆ ಈ ವಿಚಾರವನ್ನು ಪ್ರಸ್ತಾಪಮಾಡಿರತಕ್ಕ ಮಾನ್ಯ ಸದಸ್ಯರು ಈಗ ಸಭೆಯಲ್ಲಿದ್ದಿದ್ದರೆ ಅವರಿಗೆ ಸಾಕಷ್ಟು ಅಂಕಿ ಅಂಶಗಳನ್ನೆಲ್ಲಾ ಒದಗಿಸಿ, ಇದರಲ್ಲಿ ವ್ಯತ್ಯಾಸವೇನಿರುತ್ತದೆಯೆಂಬುದನ್ನು ತಿಳಿಸಬಹುದಾಗಿತ್ತು. ಹೀಗೆ ಈ ಟ್ರಾಕ್ಟರುಗಳಿಂದ 85 ಸಾವಿರ ಎಕರೆ ಜಮೀನು ಸಾಗುವಳಿಯಾಗಿದೆ. ಆ ಎರಡು ಜನಗಳದೂ ಸೇರಿ, ಇದರಲ್ಲಿ 25 ಎಕರೆ ಇರಬಹುದು.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಅವರ ಕಣ್ಣಿಗೆ ಬಿದ್ದವರು ಆ ಎರಡು ಜನಗಳು ಮಾತ್ರ.

ಶ್ರೀ ಎಚ್. ಸಿದ್ದವೀರಪ್ಪ.—ಇನ್ನು ಈ ವೆಲ್‌ಸಬ್‌ಸಿಡಿ ಬೇಡ. ಇದನ್ನು ನಿಲ್ಲಿಸಿಬಿಡಿ ಎಂದು ಹೇಳಿದ್ದಾರೆ. ಆದರೆ ಅನೇಕರು ಈ ವೆಲ್‌ಸಬ್‌ಸಿಡಿಯಿಂದ ಅನೇಕ ಕಡೆಗಳಲ್ಲಿ ಅನುಕೂಲವಾಗಿದೆ, ಇದನ್ನು ಮುಂದುವರಿಸಿ ಎಂದು ಕೇಳುತ್ತಿದ್ದಾರೆ ನಿಜ. ಕೆಲವರು ಆ ರೀತಿಯಾಗಿ ದುರುಪಯೋಗಪಡಿಸಿಕೊಂಡಿದ್ದಾರೆ. ಅದಕ್ಕೆ ಯಾವ ರೀತಿ ಸರ್ಕಾರದವರು ತೀವ್ರ ಕಾರ್ಯಕ್ರಮ ತೆಗೆದುಕೊಂಡು ಪೆನಾಲ್ಟಿ ಕೂಡ ಹಾಕಿ ವಸೂಲುಮಾಡಿದ್ದಾರೆಂಬುದು ತಮಗೇ ಗೊತ್ತಿದೆ. ಆದ್ದರಿಂದ you have to take both the sides of the picture. ಕೊಂಚ ಭಾಗ ನೀವು ಹೇಳಿದಂತೆಯೂ ಆಗಿತ್ತು. ಯಾರು ಯಾರು ಹಣ ತೆಗೆದುಕೊಂಡು ದುರುಪಯೋಗಪಡಿಸಿಕೊಂಡರೋ ಅವರ ಮೇಲೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳದೆ ಇಲ್ಲ. ಆದ್ದರಿಂದ ಒಟ್ಟಿನಲ್ಲಿ ಇದನ್ನು ನಿಲ್ಲಿಸುವುದು ಸೂಕ್ತವಲ್ಲವೆಂದು ಹೇಳಬಹುದು.

ನಮ್ಮ ಮಾನ್ಯ ಸ್ನೇಹಿತರಾದ ಗೋಪಾಲಗೌಡರು Grow More Food ಇಷ್ಟು ವರ್ಷಗಳಿಂದಿದ್ದರೂ ಆಹಾರದ ಧಾನ್ಯಗಳ ಬೆಲೆ ಏರುತ್ತಲೇ ಇದೆ ಎಂದು ಹೇಳಿದರು. ಮಾನ್ಯ ಸದಸ್ಯರು ಒಂದಂಶವನ್ನು ತಿಳಿಯಬೇಕು. ಆಹಾರ ಧಾನ್ಯಗಳ ಬೆಲೆಗಳು ಜಾಸ್ತಿಯಾಗಿರುವುದು ಅಂತರರಾಷ್ಟ್ರೀಯ ಬೆಲೆಗಳಿಗನುಸಾರವಾಗಿ. ಆದ್ದರಿಂದ ಬೆಲೆಗಳನ್ನು ನೋಡುವಾಗ ನಮ್ಮ ಒಂದು ದೇಶವನ್ನು ಮಾತ್ರ ನೋಡಕೂಡದು. ಅಖಿಲ ಭಾರತಕ್ಕೆ ಅದು ಸಂಬಂಧಪಟ್ಟಿದೆಯಲ್ಲದೆ world price structure ಗೆ ಕೂಡ ಸಂಬಂಧಪಟ್ಟಿದೆ. ಪ್ರಪಂಚದ ಬೆಲೆಗಳ ಏರಿಳಿತಕ್ಕೆ ಕಾರಣ ನಾವಲ್ಲ. ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಅದು ಅವಲಂಬಿಸುತ್ತದೆ. ಜೊತೆಗೆ ಪ್ರಕೃತಿ ನಮ್ಮ ಮೇಲೆ ಮುನಿಸಿಕೊಂಡೂ ಹೀಗಾಯಿತೆನ್ನಬಹುದು.

ಶ್ರೀ ಎಚ್. ಎಸ್. ರುದ್ರಪ್ಪ.—ರೈತರಿಗೆ ಹೆಚ್ಚಿಗೆ ಬೆಲೆ ಕೊಟ್ಟದ್ದೇ ಕಾರಣ. ಅವರು ಹಿಂದೆ ಕಡಮೆ ಕೊಡುತ್ತಿದ್ದರು.

ಶ್ರೀ ಎಚ್. ಸಿದ್ದವೀರಪ್ಪ.—ಶ್ರೀಮಾನ್ ರುದ್ರಪ್ಪನವರು ಹೇಳಿದ ಹಾಗೆ, ನಿಮ್ಮ ಕಾಲದಲ್ಲಿ ಎಷ್ಟು ಕೊಡುತ್ತಿತ್ತು; ಈಗ ಎಷ್ಟು ಹೆಚ್ಚು ಕೊಡುತ್ತಿದೆಯೆಂಬದಕ್ಕೆಲ್ಲಾ ಲೆಕ್ಕವಿದೆ.

ಶ್ರೀ ಎಲ್. ಸಿದ್ದಪ್ಪ.—ಆದರೂ ಆಗ ಜನರು ಎಷ್ಟೋ ಸುಖವಾಗಿದ್ದರು.

ಶ್ರೀ ಎಚ್. ಸಿದ್ದವೀರಪ್ಪ.—ಈಗ ರೈತರು ಸುಖವಾಗಿದ್ದಾರೆಯೇ ಇಲ್ಲವೇ ಎಂಬದನ್ನು ನೀವು ಅಷ್ಟು ಯೋಚನೆಮಾಡಬೇಕಾದ್ದಿಲ್ಲ. Because I know more intimately about the agriculturists as much as you do at least. ರೈತರನ್ನೇ ಬೇಕಾದರೆ ಕೇಳಿ. 25 ರೂಪಾಯಿಗಳನ್ನು ಕೊಟ್ಟಿರುವುದು ಬಹಳ ಚೆನ್ನಾಗಿದೆಯೆಂದು ಅವರೇ ಒಪ್ಪಿಕೊಳ್ಳುತ್ತಾರೆ.

There is no parallel in the history of Mysore for the last 60 years where two-thirds of the State continually suffer like this, where there are acute distress conditions. That is the reason for the increase of prices and not the grow more food campaign. In fact, the grow more food campaign results have not been visibly seen for the simple reason that unfortunately for the last three or four years we have been subject to continual distress conditions and also for the reason that on account of the controls and the indirect effect of the same, money crops have been grown on a larger area than food crops. There are various other reasons. We have provided facilities for growing more. It is for the people either to grow more food or any other crop. We must create conditions where growing more food is more profitable and feasible rather than growing any other crop.

ಒಟ್ಟಿನಲ್ಲಿ ನಾವು ಲೆಕ್ಕ ಹಾಕುವುದಾದರೆ—ಅದಕ್ಕೆ ಅಂಕಿ ಅಂಶಗಳನ್ನು ಕೊಡುವುದು ಅನಾವಶ್ಯಕವೆಂದು ನಾನಾಗಲೇ ಹೇಳಿದ್ದೇನೆ—ಅಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿದೆಯೆನ್ನಬೇಕು. ಆದರೆ ಫಲಿತಾಂಶಗಳು ಸಮರ್ಪಕವಾಗಿ ಕಣ್ಣಿಗೆ ಕಾಣದಿರಬಹುದು ಅಷ್ಟೆ. ಇದಕ್ಕೆ ಕಾರಣ ಈ ಸ್ಕೀಮಲ್ಲ, ಬೇರೆ ಕಾರಣಗಳು ಎಂಬುದನ್ನು ತಿಳಿಯಬೇಕು. ನಮ್ಮ ಅನುಭವದಲ್ಲಿ ಎಲ್ಲೆಲ್ಲಿ waste ಆಗುತ್ತಿದೆ, ಯಾವ ಯಾವ ಸ್ಕೀಮಿನಲ್ಲಿ ಲೋಪದೋಷಗಳಿವೆ ಅಂಥ ಸ್ಕೀಮುಗಳನ್ನು ಕಡಮೆ ಮಾಡುವುದಕ್ಕೆ ಯಾವಾಗಲೂ ತಯಾರಿದ್ದೇವೆ. ಈ ವಿವರಣೆಯ ಮೇಲೆ ಮಾನ್ಯ ಶಿವರುದ್ರಪ್ಪನವರು ದೊಡ್ಡ

(ಶ್ರೀ ಹೆಚ್. ಸಿದ್ದವೀರಪ್ಪ.)

ಮನಸ್ಸುಮಾಡಿ ತಮ್ಮ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—What does the Member say now ?

Sri H. K. SIVARUDRAPPA.—I beg leave of the House to withdraw my cut motion.

The cut motion was, by leave, withdrawn.

Encouragement to Coffee-growers.

ಶ್ರೀಮತಿ ಬಿ. ಎಲ್ ಸುಬ್ಬಮ್ಮ (ಚಿಕ್ಕಮಗಳೂರು ಮೂಡಿಗೆರೆ).—ಅಧ್ಯಕ್ಷರೇ, ನನ್ನ ಖೋತಾ ಸೂಚನೆ ಈ ರೀತಿಯಿದೆ.

> "40 ವ್ಯವಸಾಯ (ಬೊಟಾನಿಕಲ್ ಮತ್ತು ಇತರ ಸರ್ಕಾರಿ ಉದ್ಯಾನವನಗಳನ್ನು ಬಿಟ್ಟು)" ಎಂಬ ಬಾಬಿದಲ್ಲಿ ಕೋರಿರತಕ್ಕ 50,27,000 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆಮಾಡಬೇಕು. ಮೈಸೂರು ದೇಶದಲ್ಲಿ ಕಾಫಿ ಬೆಳೆಯ ವ್ಯವಸಾಯಕ್ಕೆ ಉತ್ತೇಜನ ಕೊಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳುವುದಕ್ಕಾಗಿ).

ಸ್ವಾಮಿ, ಈ ಖೋತಾ ನಿರ್ಣಯವನ್ನು ನಾನು ಸಭೆಯ ಮುಂದೆ ಮಂಡಿಸಲು ಬಹಳ ಸಂತೋಷಪಡುತ್ತೇನೆ. ಈಗ ತಾನೆ ವ್ಯವಸಾಯದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕೆಲವು ಸಮಜಾಯಿಷಿಗಳನ್ನು ಕೊಟ್ಟರು.

Sri B. V. NARAYANA REDDY (Bagepalli—Gudibanda).—On a point of information. Is there no time-limit ?

Mr. SPEAKER.—That must be left to my discretion with reference to certain cut motions. She will not take much time.

Sri B. V. NARAYANA REDDY.—I am not objecting to this.

Mr. SPEAKER.—Which is your cut motion ?

Sri B. V. NARAYANA REDDY.—I want to oppose the Demand.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಾನ್ಯ ಮಂತ್ರಿಗಳು ಈ ಡಿಮ್ಯಾಂಡ್ ಸಂಬಂಧದಲ್ಲಿ ಸಮಜಾಯಿಷಿ ಕೊಡುತ್ತಾ ಕಬ್ಬು, ಜೋಳ ಮತ್ತು ಬತ್ತದ ರಿಸರ್ಚಿನ ವಿಚಾರದಲ್ಲಿ ಏನೇನು ಪ್ರಯತ್ನಗಳನ್ನು ನಡೆಸಿದ್ದಾರೆಂಬುದನ್ನು ತಿಳಿಸಿದ್ದಾರೆ. ಆದರೆ ಈ ಸಂಬಂಧದಲ್ಲಿ ಕಾಫಿಯ ಬೆಳೆಗೆ ಸಂಬಂಧಪಟ್ಟ ಹಾಗೆ ರಿಸರ್ಚ್‌ಸಂಶೋಧನೆಗಳ ಬಗ್ಗೆ ಯಾವ ರೀತಿಯಾದ ಸಮಜಾಯಿಷಿಯನ್ನೂ ಕೊಡಲಿಲ್ಲ. ಕಾರಣ, ಬಹುಶಃ ಇದು ಕೇಂದ್ರಕ್ಕೆ ಸಂಬಂಧಪಟ್ಟಿದ್ದು ಎಂಬ ಅಭಿಪ್ರಾಯದಿಂದಲೋ ಏನೋ ಎಂದು ಕಾಣುತ್ತದೆ. ಆದರೆ ಇದು ಕೇಂದ್ರಕ್ಕೆ ಸಂಬಂಧಪಟ್ಟ ವಿಷಯವಾಗಿದ್ದರೂ, ಕಾಫಿಯನ್ನು ಹೆಚ್ಚಿಗೆ ಬೆಳೆದು ಒದಗಿಸುವುದು ಮೈಸೂರು ದೇಶದ ಪಾಲಿಗೆ ಬಿದ್ದಿದೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೆಂದು ನಾನು ತಿಳಿದಿದ್ದೇನೆ. ಏಕೆಂದರೆ, ಕಾಫಿಯ ಒಟ್ಟು production ಸುಮಾರು 21,000 ಟನ್ ಇರುವಲ್ಲಿ, ನಮ್ಮ ಮೈಸೂರು ದೇಶದಲ್ಲಿ 12,000 ಟನ್‌ಗಳಷ್ಟು ಬೆಳೆಯುತ್ತಿದೆ. ಕೊಡಗು 9,000 ಟನ್‌ಗಳಷ್ಟು ಬೆಳೆಯುತ್ತಿದೆ. ಆದ್ದರಿಂದ ಮೈಸೂರು ದೇಶದಲ್ಲಿ ಕಾಫಿ ಬೆಳೆಗೆ ಎಷ್ಟು ಪ್ರಾಮುಖ್ಯತೆ ಕೊಡಬೇಕೆಂಬುದನ್ನು ನಾನೀಗ ಹೇಳಬೇಕಾಗಿಲ್ಲ. ಈಗ ಇಂಡಿಯನ್ ಕಾಫಿ ಬೋರ್ಡಿಗೆ ಸಂಬಂಧಪಟ್ಟಂತೆ ಹೊಸದಾಗಿ ಆಕ್ಟನ್ನು ಜಾರಿಗೆ ತರುವ ಸಂದರ್ಭದಲ್ಲಿ ಕಾಫಿ ಬೋರ್ಡಿನವರು ಕೆಲ ಕೆಲವು ಸ್ಥಾನಗಳನ್ನು ನಾನಾ coffee interestsಗೆ ಮೀಸಲಾಗಿಟ್ಟಿದ್ದಾರೆ. ಅದರ ಪ್ರಕಾರ ಅವರು ಮೈಸೂರಿನವರಿಗೆ ಎರಡು ಸ್ಥಾನಗಳನ್ನೂ, ಮದ್ರಾಸಿನವರಿಗೆ ನಾಲ್ಕು ಸ್ಥಾನಗಳನ್ನೂ, ಕೊಡಗಿನವರಿಗೆ ಎರಡು ಸ್ಥಾನಗಳನ್ನೂ, ಲೇಬರಿಗೆ ಒಂದು ಸ್ಥಾನವನ್ನೂ ಕೊಟ್ಟಿದ್ದಾರೆ. ಇದರಲ್ಲಿ ವ್ಯಾಪಾರಿಗಳಿಗಾಗಲಿ, ಚೇಂಬರ್ಸ್ ಆಫ್ ಕಾಮರ್ಸಿನವರಿಗಾಗಲಿ, ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ನಿನವರಿಗಾಗಲಿ ಒಂದು ಸ್ಥಾನವನ್ನೂ ಕೊಟ್ಟಿಲ್ಲ. ಈಗ ದೇಶದಲ್ಲಿ ಪ್ರಜಾಪ್ರಭುತ್ವವಿದ್ದು ದೇಶದ ಪ್ರತಿನಿಧಿಗಳನ್ನೇ ನಾವು ಚುನಾಯಿಸುವಾಗ, ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ನಾಮಕರಣ ಪದ್ಧತಿಯನ್ನು ಏಕೆ ತಂದರೋ ಗೊತ್ತಿಲ್ಲ. ಕಾಫಿ ಬೆಳೆಯುವವರು ಕಾಫೀ ಬೋರ್ಡಿನವರ ಕೈಗೊಂಬೆಗಳಲ್ಲ. ನ್ಯಾಯವಾಗಿ ಈ ವಿಷಯದಲ್ಲಿ ಇಂಡಿಯಾ ಸರ್ಕಾರದ ವಾಣಿಜ್ಯ ಶಾಖಾ ಮಂತ್ರಿಗಳು ಆಯಾ ಸರ್ಕಾರದವರ ಅಭಿಪ್ರಾಯಗಳನ್ನೂ ತೆಗೆದುಕೊಳ್ಳಬೇಕಾಗಿತ್ತು. ಅದೇನನ್ನೂ ಮಾಡದೆ ನಾಮಕರಣಮಾಡಿರುವುದು ಒಳ್ಳೆಯದಲ್ಲ. ಕಾಫಿ ಪ್ಲಾಂಟರುಗಳ ಹಿತದೃಷ್ಟಿಯಿಂದ ನಾಮಕರಣ ಪದ್ಧತಿಯನ್ನು ಅವರು ಅನುಸರಿಸಬಾರದಾಗಿತ್ತೆಂದು ಹೇಳುತ್ತೇನೆ. ಅದರಲ್ಲೂ ಈ ಇಂಡಿಯನ್ ಕಾಫಿ ಬೋರ್ಡಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿರುವವರನ್ನೂ ಕೂಡ ನಾಮಕರಣಮಾಡುವ ಪದ್ಧತಿಯನ್ನಿಟ್ಟುಕೊಂಡಿರುವುದು ತೀರಾ ಅನ್ಯಾಯ. ಈ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಕೇಳಿದವರೇ ಇಲ್ಲ. ಕಾಫಿಯ ಬೆಳೆಯ ವಿಷಯವನ್ನು ಅವರೇನು ಬಲ್ಲರು? ಅವರೇನು ತಾನೆ ಸಲಹೆ ಕೊಟ್ಟಾರು ? ಅವರು ಕಾಫಿ ಬೇಸಾಯಗಾರರ ಹಿತವನ್ನು ಎಷ್ಟರಮಟ್ಟಿಗೆ ಕಾಪಾಡಿಯಾರೋ ಎಂಬ ಶಂಕೆಯುಂಟಾಗಿದೆ. ಏಕೆಂದರೆ, ಆ ಇಂಡಿಯಾ ಕಾಫಿ ಬೋರ್ಡಿನವರು ಕೆಲವು ಅಧಿಕಾರಿಗಳನ್ನು ನಮ್ಮ ಕಡೆಗೆ, ಹಾಗೆಯೇ ಎಲ್ಲಾ ಕಡೆಗೂ, ಕಳುಹಿಸುತ್ತಿರುತ್ತಾರೆ. ಇವರುಗಳು ಬಂದವರು ಪಾರ್ಚ್‌ಮೆಂಟ್ ಅಂದರೇನು, ಚೆರಿ ಎಂದರೇನು ಎಂದು ನಮ್ಮನ್ನೇ ಕೇಳುತ್ತಿರುತ್ತಾರೆ. ಅವರು ಯಾರೂ ಕಾಫಿ ತೋಟವನ್ನೇ ನೋಡಿರುವುದಿಲ್ಲ. ಅಂಥವರನ್ನು ಕಟ್ಟಿಕೊಂಡು ಏನು ಮಾಡಬೇಕು ! ಕೆಲವರು ಕಾಫಿ ಎಂಬುದು ಮರವೇ ಅಥವಾ ಗಿಡವೇ ಅಥವಾ ಬಳ್ಳಿಯ ಹಾಗೆ ಹಬ್ಬುತ್ತದೆಯೇ ಎಂದೂ ಕೇಳುತ್ತಿರುತ್ತಾರೆ. ಇಂಥ ಅಧಿಕಾರಿಗಳಿಂದ ಕಾಫಿ ಬೆಳೆಗಾರರ ಹಿತ ಹೇಗೆ ತಾನೆ ಸಾಧನೆಯಾದೀತು ?

ಆಮೇಲೆ, ಕಾಫಿ ತೋಟದವರು ಅಗ್ರಿಮೆಂಟಿನ ರಿಜಿಸ್ಟ್ರೇಷನ್ 'ರಿನ್ಯೂ'ಮಾಡಬೇಕೆಂದು ಹೇಳಿದ್ದಾರೆ. ಇದರ ಅರ್ಥವೇನೋ ನನಗೆ ಗೊತ್ತಾಗುವುದಿಲ್ಲ. ಕಾಫಿ ಬೆಳೆಯುವ ರೈತರೇನೂ ಇಂಗ್ಲೆಂಡಿನಿಂದಾಗಲಿ, ಬೇರೆ ಪರದೇಶದಿಂದಾಗಲಿ ಬಂದವನಲ್ಲ. ಅಲ್ಲದೆ ಆತ ನಾಲು

ಎಕರೆ, ಆರು ಎಕರೆ, ಎಂಟು ಎಕರೆ ಕಾಫಿ ತೋಟ ಇಟ್ಟುಕೊಂಡು ಅದನ್ನೇ ತನ್ನ ಜೀವನಕ್ಕೆ ಅವಲಂಬಿಸಿಕೊಂಡಿರುವುದಿಲ್ಲ. ಹೀಗಿರುವಲ್ಲಿ ಆ ಸಣ್ಣ ಕಾಫಿ ತೋಟಗಾರ ಕಾಫಿಯನ್ನು ಒಣಗಿಸುವುದಕ್ಕಾಗಲಿ, ಅದನ್ನು store ಮಾಡುವುದಕ್ಕಾಗಲಿ ಚೀಫ್ ಎಗ್ಜಿಕ್ಯೂಟಿವ್ ಆಫೀಸರ ಅನುಮತಿಪಡೆಯಬೇಕೆಂದರೆ ಬಹಳ ಕಷ್ಟ. ಇದಕ್ಕೆಲ್ಲಾ ಆಕ್ಟಿನಲ್ಲೇ ಅವಕಾಶಮಾಡಬೇಕಾದದ್ದು ಅಗತ್ಯ. ಅಲ್ಲದೆ ಕಾಫಿ ಬೋರ್ಡಿನ ಜನರಲ್ ಫಂಡನ್ನೂ ಮತ್ತು ಪೂಲ್ ಫಂಡನ್ನೂ ಪ್ರಚಾರ ಕಾರ್ಯಗಳಿಗೂ ಮತ್ತು ಬೆಳೆಯುವವರ ಹಿತವನ್ನು ಸಾಧಿಸಲಿಕ್ಕೂ ಉಪಯೋಗಿಸಬೇಕೆಂದು ಹೇಳುತ್ತೇನೆ. ಈಗ ಏನಾಗಿದೆಯೆಂದರೆ, ಕಾಫಿ ಬೆಳೆಗಾರರ ಕಷ್ಟನಿಷ್ಠೂರಗಳು ಅನೇಕರಿಗೆ ವಾಸ್ತವವಾಗಿ ಗೊತ್ತಿಲ್ಲ. ಮೈಸೂರು ಸಂಸ್ಥಾನದಲ್ಲಿ ಕಾಫಿಯನ್ನು ಬೆಳೆಯುವವರಲ್ಲಿ ಸಣ್ಣಸಣ್ಣ ರೈತರೇ ಜಾಸ್ತಿ. ಅಂಕಿ ಅಂಶಗಳನ್ನು ನೋಡುವುದಾದರೆ, 5 ಎಕರೆಗಳಿಗೆ ಕಮ್ಮಿ ಕಾಫಿ ತೋಟವಿರುವವರು 22614 ಜನರಿದ್ದಾರೆ. 5 ರಿಂದ 10 ಎಕರೆಗಳೊಳಗೆ ತೋಟವಿರುವವರು 2,300 ಜನ; 10 ಎಕರೆಗಳಿಂದ 15 ಎಕರೆಗಳವರೆಗಿರುವವರು 1774 ಜನ; 250 ಎಕರೆಗಳಿಗೆ ಮೇಲ್ಪಟ್ಟಿರುವವರು 1578 ಜನ ಮಾತ್ರ. ಜನರಿಗೆ, ' ಈಗ ಕಾಫಿ ಬೆಲೆ ಏರಿದೆ, ಆದ್ದರಿಂದ ಕಾಫಿ ಬೆಳೆಗಾರರ ಮೇಲೆ ಬಹಳ ಕಣ್ಣಿರಬಹುದು, ಕಾಫಿ ಬೆಳೆಯುವವರಿಗೆ ಬಹಳ ಸುಖವಾಗಿದೆ' ಯೆಂಬ ಭಾವನೆಯಿರಬಹುದು. ಅದು ತಪ್ಪು ಭಾವನೆ. ಅವರ ನಿಜವಾದ ಕಷ್ಟನಿಷ್ಠೂರಗಳು ಜನರಿಗೆ ತಿಳಿಯದು. ಕಾಫಿ ಬೆಲೆಯ ಏರಿಕೆಗೆ ಕಾರಣ ಬೇರೆಯಿದೆ. ಹೇಗೆಂದರೆ 1900ರಲ್ಲಿ ನಮ್ಮ ದೇಶದಲ್ಲಿ 1,90,000 ಎಕರೆಗಳಷ್ಟು ಇದ್ದುದು 1940ರ ಹೊತ್ತಿಗೆ 95,739 ಎಕರೆಗಳಿಗೆ ಇಳಿಯಿತು. ಈಚೆಗೆ 1951ರಲ್ಲಿ ನೋಡಿದ್ದರಲ್ಲಿ ಕಾಫಿ ವಿಸ್ತೀರ್ಣ ಇನ್ನೂ ಕಡಮೆಯಾಗಿ 73,214 ಎಕರೆಗಳಿಗೆ ಇಳಿದಿದೆ. ಇದರಿಂದ ವಾಸ್ತವವಾಗಿ ಕಾಫಿ ಕೈಗಾರಿಕೆ ಹಾಳಾಗುತ್ತಿದೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಬಹುದು. ನಮ್ಮ ದೇಶದ ಕಾಫಿ ಬೆಳೆಗೆ ಒಂದು ವೈಶಿಷ್ಟ್ಯವಿದೆ. ಎಲ್ಲಾ ದೇಶಗಳಲ್ಲೂ ಇದು ಬೆಳೆಯುವುದಿಲ್ಲ. ಅದರಲ್ಲೂ ಇಲ್ಲಿನ ಆರಾಬಿಕಾ ಕಾಫಿ ಬಹಳ ಪ್ರಸಿದ್ಧಿಯಾಗಿದೆ. ಬೇರೆ ಕಾಫಿ ಬೀಜಗಳೂ ಮಾರ್ಕೆಟ್ಟಿನಲ್ಲಿವೆ. ಆದರೆ ನಮ್ಮ ಅರಾಬಿಕಾ ಕಾಫಿ ಬೀಜದಷ್ಟು ಉತ್ತಮವಾದುದು ಯಾವುದೂ ಇಲ್ಲ. ಪರದೇಶದವರೂ ನಮ್ಮ ಕಾಫಿಗೆ ಹೆಚ್ಚಿಗೆ ಬೆಲೆ ಕೊಡುತ್ತಿದ್ದಾರೆ. ಹಾಗಿದ್ದರೂ ನಿಜವಾಗಿ ಕಾಫಿ ಬೆಳೆಯುವವರನ್ನೇ ಕೇಳುವವರಿಲ್ಲವೆನ್ನಬೇಕು.

ಅದೂ ಅಲ್ಲದೆ ಚಿಕ್ಕಮಗಳೂರು ಒಂದು ಪ್ರದೇಶದಲ್ಲಿ ಕಾಫಿ ಬೆಳೆಯುತ್ತಿದ್ದರೂ, ಅದರ ಆಸರೆಯಲ್ಲಿ ಮದ್ರಾಸಿನಿಂದ ಮತ್ತು ಮಂಗಳೂರಿನಿಂದ ಬಂದ ಸುಮಾರು 60,000 ಜನರು ಜೀವನಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಕಾಫಿ ಬೆಳೆಯುವವರಿಗಿರುವ ತೊಂದರೆಗಳನ್ನು ಹೇಳದೆ ನಿರ್ವಾಹವಿಲ್ಲ. ಸರ್ಕಾರದವರು ಲೇಬರ್ ಕಾನೂನಿನ ಪ್ರಕಾರ ಅನೇಕ ನಿಬಂಧನೆಗಳನ್ನುಮಾಡಿ ಕಾಫಿ ಬೆಳೆಯುವವರಿಗೆ ನಿರ್ಬಂಧಗಳನ್ನು ಕಲ್ಪಿಸಿದ್ದಾರೆ. ಕೂಲಿಗಾರರ ಹಿತರಕ್ಷಣೆಗಾಗಿ ಮಿನಿಮಮ್ ವೇಜ್, ವರ್ಕರ್ಸ್ ವೆಲ್ ಫೇರ್, ಕೆಲಸಗಾರರ ಮಕ್ಕಳ ವಿದ್ಯಾಭ್ಯಾಸ, ಮೆಟರ್ನಿಟಿ ಬೆನಿಫಿಟ್ಸ್ ಮುಂತಾದುವುಗಳ ವಿಷಯವಾಗಿ ಕಾನೂನುಮಾಡಿದ್ದಾರೆ. ಇವುಗಳನ್ನು ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಮಾಡಿರುವುದೇನೋ ಒಳ್ಳೆಯದೇ. ಕೆಲಸಗಾರರು ಚೆನ್ನಾಗಿರಬೇಕು. ಅವರು ಚೆನ್ನಾಗಿದ್ದರೆ ಕಾಫಿ ತೋಟವೂ ಚೆನ್ನಾಗಿರುತ್ತದೆ. ಆದರೆ ಮಿನಿಮಂ ವೇಜ್ ಗೊತ್ತುಮಾಡಿದ ಮೇಲೆ ಕಾಫಿ ಬೆಲೆಗೂ ಒಂದು ಮಿನಿಮಂ ಗ್ಯಾರಂಟಿ ಮಾಡಬೇಕು. ಇಂಗ್ಲೆಂಡಿನಲ್ಲಿ ಕಾಲದ ಬೆಲೆ, ಕೆಲಸದ ಬೆಲೆ ಎಲ್ಲವನ್ನೂ ತಿಳಿದಿದ್ದಾರೆ. ನಮ್ಮ ದೇಶದಲ್ಲಿ ಕೂಲಿಯ ಬೆಲೆಯನ್ನು ಗೊತ್ತುಮಾಡಿ, ಕಾಲದ ಬೆಲೆ ಮತ್ತು ಕೆಲಸದ ಬೆಲೆಯನ್ನು ಗೊತ್ತುಮಾಡದೇಯಿದ್ದರೆ ಕಾಫಿಯ ವ್ಯವಸಾಯ ಅಭಿವೃದ್ಧಿಗೆ ಬರುವುದು ಕಷ್ಟವಾಗುತ್ತದೆ. ಕಾಫಿ ಬೆಳೆಯುವ ರೈತರಿಗಿರುವ ಇನ್ನೊಂದು ತೊಂದರೆಯೆಂದರೆ, ಆಹಾರ ಹತೋಟಿ ಜಾರಿಗೆ ಬಂದ ಮೇಲೆ ಮೊದಲು ಬತ್ತ ಮತ್ತು ಮಿಲೆಟ್ಟಿಗೆ ಬೆಲೆಗಳನ್ನು ಪಲ್ಲಕ್ಕೆ ಇಪ್ಪತ್ತೊಂದು ಸರ್ಕಾರದವರು ಗೊತ್ತುಮಾಡಿದರು. ಈಗಲೂ ಅದೇ ದರದಲ್ಲಿ ಕೆಲಸಗಾರರಿಗೆ ರೂಪಾಯಿಗೆ ಆರು ಸೇರಿನಂತೆ ಕಾಫಿ ತೋಟದವರು ಒದಗಿಸಬೇಕಾಗಿದೆ. ಎರಡನೆಯದಾಗಿ ಸೀಮೆಗೊಬ್ಬರದ ಬೆಲೆ 250 ರೂಪಾಯಿಗಳಿಂದ 450ರೂಪಾಯಿಗಳಿಗೆ ಹೆಚ್ಚಿದೆ. ಆಳುಗಳ ಸಂಬಳ ಇತರ ದಿನಚರಿಯ ಖರ್ಚುಜಾಸ್ತಿಯಾಗುತ್ತಾ ಬರುತ್ತಿರುವುದರಿಂದ ಕಾಫಿ ಬೆಳೆಗಾರರು ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ಹೀಗಿರುವಾಗ ಇಂಡಿಯಾ ಸರ್ಕಾರದವರು ಕಾಫಿಯಲ್ಲಿ ಶೇಕಡ 50ರಷ್ಟು ಸೊಸೈಟಿಗಳಿಗೆ, 25ರಷ್ಟು ಸಣ್ಣ ವ್ಯಾಪಾರಸ್ಥರಿಗೆ, ಇನ್ನುಳಿದ 25ರಷ್ಟನ್ನು ಕಾಫಿ ಬೋರ್ಡು ಪ್ರಚಾರಕ್ಕಾಗಿ ಕೊಡಬೇಕೆಂದು ಗೊತ್ತುಮಾಡಿದ್ದಾರೆ. ಇಂಡಿಯಾ ಸರ್ಕಾರದವರು ಹೀಗೆ ಮಾಡುತ್ತಿರುವುದರಿಂದ ಕಾಫಿ ಬೆಳೆಗಾರರಿಗೆ ಬಹಳ ತೊಂದರೆಯಾಗಿದೆ. ಮೂರು ಸಾವಿರ ಟನ್‌ಗಳಷ್ಟು ಕಾಫಿಯನ್ನಾದರೂ ಹೊರಗೆ ಕಳುಹಿಸಿ ಎಂದು ಹೇಳಿದರೆ, ಒಂದು ಮಣವನ್ನೂ ಹೊರಗೆ ಕಳುಹಿಸುವುದಿಲ್ಲವೆಂದು ಹೇಳುವುದರಲ್ಲಿ ಅರ್ಥವೇನು? ಆಹಾರವಾಗಿದ್ದರೆ ಹಾಗೆ ಮಾಡುವುದರಲ್ಲಿ ಅರ್ಥವಿದೆ. ಕಾಫಿಗೇಕೆ ಹೀಗೆ ಮಾಡಬೇಕು? ತಮ್ಮ ದೇಶಗಳಿಗೆ ಡಾಲರುಗಳನ್ನು ಸಂಪಾದನೆಮಾಡಬೇಕೆಂದು ಇಂಗ್ಲೆಂಡು ಅಮೆರಿಕಾ ದೇಶಗಳು ಪ್ರಯತ್ನಪಡುತ್ತಿದ್ದಾರೆ. ಹೀಗಿರುವಾಗ ನಮ್ಮ ದೇಶದಲ್ಲಿ ಬೆಳೆದುದನ್ನೆಲ್ಲಾ ನಾವೇ ಇಟ್ಟುಕೊಳ್ಳೋಣ ಎಂದರೆ ಹೇಗೆ? ಇದರಿಂದ ಬಹಳ ಅನ್ಯಾಯವಾಗುತ್ತದೆ. ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ಈ ವಿಷಯದಲ್ಲಿ ತಕ್ಕ ಸಲಹೆಕೊಡಬಹುದು. ಕಾಫಿಯನ್ನು ಕೊಡಗಿನಲ್ಲಿಯೂ ಬೆಳೆಯುತ್ತಿದ್ದಾರೆ, ಅವರಿಗೂ ತೊಂದರೆಯಾಗುತ್ತಿದೆ. ಮೈಸೂರು ಸಂಸ್ಥಾನಕ್ಕೂ ಕೊಡಗಿಗೂ ತಕ್ಕಷ್ಟು ಸ್ಥಾನಗಳನ್ನು ಆ ಸಮಿತಿಯಲ್ಲಿ ಕೊಡಬೇಕು.

ಇನ್ನು ಕಾಫಿ ಹರಾಜಿನ ವಿಚಾರ. ಮೊದಲು ಪಬ್ಲಿಕ್ ಸೇಲ್ ಇತ್ತು. ಆಗ ರೀಟೇಲ್ ವ್ಯಾಪಾರಗಾರರೂ ಹರಾಜಿಗೆ ಬರಬಹುದಾಗಿತ್ತು. ಈಗ ಹೋಲ್ ಸೇಲಿನವರು 5,000 ರೂಪಾಯಿ deposit ಕಟ್ಟಬೇಕು. ಹೀಗೆ ಹೋಲ್ ಸೇಲಿನವರಿಗೊಂದು ನ್ಯಾಯ, ರೀಟೇಲ್‌ನವರಿಗೊಂದು ನ್ಯಾಯವೆಂದು ಹೇಳುವುದರಲ್ಲಿ ನ್ಯಾಯವಿಲ್ಲ. ಸೊಸೈಟಿಯವರಿಗೂ ಈ ರೂಲ್ಸು ಅನ್ವಯಿಸದೆ ಸುಮ್ಮನೆ ಕೊಡುತ್ತಿದ್ದಾರೆ. ಇದೂ ಸರಿಯಲ್ಲ. ಯಾರೇ ಆಗಲಿ ಹರಾಜಿನಲ್ಲಿ ಬಿಡ್‌ಮಾಡಿ ತೆಗೆದುಕೊಳ್ಳಬೇಕು.

ಕಾಫಿ ಮಾರಾಟದ ಸಂಬಂಧದಲ್ಲಿ ಒಂದು ಹಂಡ್ರೆಡ್ ವೇಟಿಗೆ ಸರ್ಕಾರಕ್ಕೆ ಎಕ್ಸೈಜು ಸುಂಕ 21 ರೂಪಾಯಿ, ಸೇಲ್ಸ್‌ಟ್ಯಾಕ್ಸ್ 3 ರೂಪಾಯಿ, ಎಸ್ಟ್ಯಾಬ್ಲಿಷ್‌ಮೆಂಟ್ ಖರ್ಚು 8 ರೂಪಾಯಿ—ಇಷ್ಟು ಖರ್ಚು ಬೀಳುತ್ತದೆ. ಅಲ್ಲದೆ ಮೊದಲು ಹೋಲ್ ಸೇಲರ್ ತೆಗೆದುಕೊಂಡು ರೀಟೇಲರಿಗೆ ಕೊಡುವುದು, ಆಮೇಲೆ ಸೊಸೈಟಿಗೆ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ.)

ಕೊಡುವುದು, ಅಮೇಲೆ ಕೊಳ್ಳುವವರಿಗೆ; ಹೀಗೆ ಹನ್ನೆರಡು ಸಾರಿ ಕೈ ಬದಲಾಯಿಸುವ ಹೊತ್ತಿಗೆ 12 ರೂಪಾಯಿ ಬೀಳುತ್ತದೆ. ಇದೆಲ್ಲವೂ ಪ್ಲಾಂಟರಿಗೆ ಸಿಕ್ಕುತ್ತದೆಂದು ಜನರ ಭಾವನೆ. ಖಂಡಿತವಾಗಿಯೂ ಹಾಗಿಲ್ಲವೆಂದು ಹೇಳುತ್ತಿದ್ದೇನೆ. ಸೊಸೈಟಿಗಳಿಗೆ 2-4-0 ಗೆ ಕೊಡಬೇಕೆಂದು ಗೊತ್ತುಮಾಡುತ್ತಾರೆ. ಇದು ಸರಿಯಲ್ಲ. ರೀಟೇಲರ್ಸ್, ಹೋಲ್‌ಸೇಲರ್ಸ್ ಹೇಗೆ ಬಿಡ್ಡು ಮಾಡುತ್ತಾರೋ ಹಾಗೆಯೇ ಸೊಸೈಟಿಗಳೂ ಬಿಡ್ಡು ಮಾಡುವ ಹಾಗೆ ಮಾಡಬೇಕು. ಹೀಗೆ ನಿರ್ಬಂಧಗಳನ್ನು ಹಾಕುವುದರಿಂದ ಕಾಫಿ ಬೆಳೆ ಹಾಳಾಗುತ್ತದೆ. ಇಪ್ಪತ್ತೆಕರೆ ವಿಸ್ತೀರ್ಣವಿರುವ ಲಾಲ್‌ಬಾಗನ್ನು ಸರಿಯಾಗಿಡಬೇಕಾದರೆ ಎಷ್ಟೋ ಕಷ್ಟ, ಎಷ್ಟೋ ಸಿಬ್ಬಂದಿಯ ಖರ್ಚು. ಹೀಗಿರುವಾಗ ಸುಮಾರು ಎರಡು ಲಕ್ಷದ ಮೂವತ್ತು ಸಾವಿರ ಎಕರೆ ಕಾಫಿ ತೋಟವನ್ನು ಸರಿಯಾಗಿಟ್ಟು ವ್ಯವಸಾಯ ಮಾಡಬೇಕಾದರೆ ಎಷ್ಟು ಕಷ್ಟವಿದೆ ಎಂಬುದನ್ನು ಯೋಚನೆ ಮಾಡಬೇಕು. ಇಂಡಿಯಾ ಸರ್ಕಾರದವರು ಸಣ್ಣ ಸಣ್ಣ ಪ್ಲಾಂಟೇಷನ್‌ಗಳನ್ನು ತಾವೇ ವಹಿಸಿಕೊಂಡು ಅವರ ಸಾಲಗಳನ್ನೂ ಅವರೇ ವಹಿಸಿಕೊಂಡರೆ, ಅವರು ಬಿಟ್ಟು ಬಿಡಲು ಸಿದ್ಧವಾಗಿದ್ದಾರೆ. ಏಕೆಂದರೆ, ಅವರು ಈಗ ಅಷ್ಟು ಕಷ್ಟವನ್ನನುಭವಿಸುತ್ತಿದ್ದಾರೆ. ಹೆಚ್ಚು ತೋಟವಿದ್ದವರಿಗೆ ಹೆಚ್ಚಿನ ಪ್ರಯೋಜನವೇ ವಿನಾ, ಸ್ವಲ್ಪ ಸ್ವಲ್ಪ ಇರುವವರಿಗೆ ಲಾಭವಿಲ್ಲ. ಉದಾಹರಣೆಗೆ, 25 ರಿಂದ 50 ಎಕರೆ ತೋಟವಿದ್ದರೆ 1·15 ಹಂಡ್ರೆಡ್‌ವೇಟ್ ಕಾಫಿ ಬರುತ್ತದೆ. 150-200 ಎಕರೆಗೆ ಸರಾಸರಿ 1·54, 200 ಎಕರೆಗೆ ಮೇಲ್ಪಟ್ಟಿದ್ದರೆ 2·13 ಹಂಡ್ರೆಡ್‌ವೇಟ್ ಬರುತ್ತದೆ. ಹೀಗೆ ಜಾಸ್ತಿ ಇದ್ದಷ್ಟೂ ಅನುಕೂಲ. ಚಿಕ್ಕ ಚಿಕ್ಕ ಪ್ಲಾಂಟರುಗಳಿಗೆ ಕಷ್ಟ ಹೆಚ್ಚು, ಪ್ರತಿ ಫಲ ಕಡಮೆ. ಈ ರೂಲ್ಸ್ ಬಂದ ಮೇಲೆ ಹೊಸ ತೋಟವನ್ನು ಮಾಡುತ್ತಿಲ್ಲ. ಉತ್ಪತ್ತಿ ಹೆಚ್ಚುತ್ತಿಲ್ಲ; ಇರುವ ಸಂಗತಿ ಹೇಳುತ್ತಿದ್ದೇನೆ. ಕಾಫಿ ಬೆಳೆಯಲು ಪೌಂಡಿಗೆ 2-7-1 ಖರ್ಚಾಗುತ್ತದೆ. ಕಾಫಿ ಬೋರ್ಡಿನವರು ರೂ. 2-4-0 ರಂತೆ ಗೊತ್ತು ಮಾಡಿದ್ದಾರೆ. ಇದರಿಂದ 3 ಆಣೆ 1 ಕಾಸು ನಷ್ಟವಾಗುತ್ತದೆ. ಐವರ್‌ಬುಲ್ ಎಂಬ ಒಬ್ಬರು ಪ್ಲಾಂಟರಿದ್ದಾರೆ. ಅವರು 19 ನೆಯ ಮಾರ್ಚಿಯ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಈ ವಿವರಗಳನ್ನೆಲ್ಲಾ ತಿಳಿಸಿದ್ದಾರೆ ಮತ್ತು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾವು 20 ಸಾವಿರ ಟನ್ ಬೆಳೆಯುವುದರಲ್ಲಿ 4 ಸಾವಿರ ಟನ್ ಆದರೂ ಹೊರದೇಶಗಳಿಗೆ ಕಳುಹಿಸಬೇಕು. ಈ ವಿಷಯವನ್ನು ಶಿಫಾರಸು ಮಾಡಬೇಕು. ಖಂಡಿತವಾಗಿ ಹೀಗೆ ಮಾಡಬೇಕೆಂದು ಕೇಂದ್ರವನ್ನು ಒತ್ತಾಯ ಮಾಡಬೇಕು. ಹೀಗೆ ಅನುಮತಿ ಕೊಟ್ಟರೆ, ಆ ಹಣ ಬಂದರೆ, ನಮ್ಮ ಸರ್ಕಾರಗಳಿಗೇ ವರಮಾನ ಹೆಚ್ಚು ಬರುತ್ತದೆ. ಇದರಿಂದ ಕಾಫಿ ಬೆಳೆಯುವವರೇನೂ ದೊಡ್ಡವರಾಗುವುದಿಲ್ಲ. ಪರದೇಶಗಳ ಬೆಲೆಗೂ ನಮ್ಮ ಬೆಲೆಗೂ 140 ರೂಪಾಯಿಗಳ ವ್ಯತ್ಯಾಸವಿದೆ, ಇದರಲ್ಲಿ 40 ರೂಪಾಯಿಗಳಾದರೂ ನಮ್ಮ ರೈತರಿಗೆ ಬರುತ್ತದೆ. ಹೀಗೆ ಹೇಳಿದರೆ, ಪರದೇಶಗಳಿಗೆ ಕಳುಹಿಸಲೇ ಬಾರದೆಂದು ಹೇಳುತ್ತಾರೆ. ಇಂಡಿಯಾ ಸರ್ಕಾರದವರು ಕಾಫಿ ಕುಡಿಯುವವರ ಹಿತವನ್ನು ರಕ್ಷಣೆ ಮಾಡುತ್ತಾರೆಯೇ ಹೊರತು ಬೆಳೆಯುವವರ ಹಿತವನ್ನು ನೋಡುವುದಿಲ್ಲ. ಕಾಫಿ ತೋಟಗಳಿಗೆ ಗೊಬ್ಬರವನ್ನೊದಗಿಸುವುದಕ್ಕೆ ಏನೂ ಸಹಾಯ ಮಾಡುತ್ತಿಲ್ಲ. ಸಿಂದ್ರಿ ಕಾರ್ಖಾನೆಯವರು ರಿಯಾಯ್ತಿ ಬೆಲೆಯಲ್ಲಿ ಗೊಬ್ಬರವನ್ನು ಕಾಫಿ ಬೆಳೆಗೆ ಕೊಡುವಂತೆ ಸರ್ಕಾರ ಶಿಫಾರಸು ಮಾಡಬೇಕು. ಕಾಫಿಯ ಸಾಗಾಣಿಕೆಗೆ ಅನುಕೂಲ ಕಡಮೆ. ನಮ್ಮ ಜಿಲ್ಲೆ ಕಾಫಿ ಬೆಳೆಯುವ ಜಿಲ್ಲೆ, ಅಲ್ಲಿಗೆ ರೈಲು ಸೌಕರ್ಯ ಕೊಟ್ಟು ಅನುಕೂಲ ಪಡಿಸಿಕೊಡಬೇಕೆಂದು ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ತಿಳಿಸಬೇಕೆಂದು ಅನೇಕ ಸಾರಿ ಸಭೆಯ ಮುಂದೆ ಇಟ್ಟಿದ್ದೇನೆ. ಈ ವಿಷಯವನ್ನು ಒತ್ತಾಯಮಾಡಲು ಹಿಂದೆ ಈ ಸಭೆಯಲ್ಲಿ ಪ್ಲಾಂಟರುಗಳ ಪ್ರತಿನಿಧಿಗಳಿರುತ್ತಿದ್ದರು. ದುರ್ದೈವದಿಂದ ಈ ಸಾರಿ ಅವರಿಲ್ಲದ ಕಾರಣ, ನಾನೇ ಅವರ ಪ್ರತಿನಿಧಿಯಾಗಬೇಕಾಗಿದೆ. ನಾನೇ ಮಹಿಳೆಯರ ಪ್ರತಿನಿಧಿಯೂ ಸಾರ್ವಜನಿಕರ ಪ್ರತಿನಿಧಿಯೂ ಆಗಬೇಕಾಗಿದೆ. ಸರ್ಕಾರದವರು ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥಿಸಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಪ್ಲಾಂಟರುಗಳ ಪರವಾಗಿಯೂ ನನ್ನ ಪರವಾಗಿಯೂ ಚಿರಋಣಿಯಾಗಿದ್ದೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮತಿ ಸುಬ್ಬಮ್ಮನವರ ಭಾಷಣವನ್ನು ಕೇಳಿದಮೇಲೆ ಇದನ್ನು ವಿರೋಧ ಮಾಡುವುದಕ್ಕೆ ಬಹಳ ಕಷ್ಟ. ಅವರು ಕಾಫಿ ಪ್ಲಾಂಟರುಗಳಿಗಿರುವ ಕಷ್ಟವನ್ನು ಬಹಳ ಚೆನ್ನಾಗಿ ತಿಳಿಸಿದ್ದಾರೆ. ನಾನಾದರೂ ಇಷ್ಟು ಹೇಳಬೇಕಾಗುತ್ತದೆ: ಅವರು ಹೇಳಿದ ಹಾಗೆ, ನಮ್ಮ ಸಂಸ್ಥಾನದಲ್ಲಿ ಒಟ್ಟು ಇಂಡಿಯಾ ದೇಶದಲ್ಲಿರತಕ್ಕ ಕಾಫಿ ಎಸ್ಟೇಟುಗಳಲ್ಲಿ ಶೇಕಡ 52 ರಷ್ಟು ಭಾಗ ಇದೆ. ಅಂದಮೇಲೆ ಕಾಫಿ ಬೆಳೆಗಾರರ ವಿಚಾರದಲ್ಲಿ ನಮಗೆ ಎಷ್ಟು ಆಸಕ್ತಿಯಿದೆಯೆಂಬುದು ಇದರಿಂದಲೇ ಅರ್ಥವಾಗುತ್ತದೆ. ಶ್ರೀಮತಿ ಸುಬ್ಬಮ್ಮನವರು ಹೇಳಿದ ಹಾಗೆ, ಈಗ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾಗಿದೆ. ಇಂಡಿಯಾ ಕಾಫಿ ಬೋರ್ಡ್ ಇದೆ, ಆದರಲ್ಲಿ ಮೈಸೂರಿನ ಪ್ರತಿನಿಧಿಗಳಿದ್ದಾರೆ. ವ್ಯವಸಾಯ ಮಂತ್ರಿಗಳು ಎಕ್ಸ್ ಅಫಿಷಿಯೋ ಚೇರ್‌ಮನ್ ಆಗಿದ್ದಾರೆ. ಮೈಸೂರು ಸರ್ಕಾರಕ್ಕೂ ಅಲ್ಲಿ ಪ್ರಾತಿನಿಧ್ಯವಿದೆ. ಅಲ್ಲದೆ ಬಾಳೆಹೊನ್ನೂರು ಫಾರಮ್ಮನ್ನು ಕೇಂದ್ರ ಸರ್ಕಾರಕ್ಕೆ ವಹಿಸಿದಮೇಲೆ ಒಂದು ಒಪ್ಪಂದವಾಗಿದೆ. ಆ ಒಪ್ಪಂದದ ಪ್ರಕಾರ ನಮಗೆ ಪ್ರಾತಿನಿಧ್ಯವಿದೆ. ಅಲ್ಲದೆ ಈಗ ಇಂಡಿಯಾ ಸರ್ಕಾರದವರು ಒಂದು ಹೊಸ ಮಸೂದೆಯನ್ನು ತರಬೇಕೆಂದಿದ್ದಾರೆ. ಆದರ ಪ್ರಕಾರ ಬಹಳ ಬದಲಾವಣೆ ಮಾಡಬೇಕೆಂದಿದ್ದಾರೆ. ಅದು ನನ್ನ ಗಮನಕ್ಕೆ ಬಂದಮೇಲೆ, ಈ ವಿಷಯದಲ್ಲಿ ಅವರೊಡನೆ ಮಾತನಾಡುವ ಸಂದರ್ಭದಲ್ಲಿ ಒಂದು ವಿಷಯ ವ್ಯಕ್ತವಾಯಿತು. ಇಂಡಿಯಾ ಸರ್ಕಾರದ ಮಂತ್ರಿಗಳಿಗೆ 'ಕಾಫಿ ಉಪಯೋಗಿಸುವವರಿಗೆ ಬಹಳ ಕಷ್ಟವಾಗಿದೆ, ಅವರ ಹಿತವನ್ನು ನೋಡುವವರಿಲ್ಲ, ಕಾಫಿಯ ಬೆಲೆ ಗಗನಕ್ಕೇರಿ ಕಾಫಿ ಕುಡಿಯುವವರಿಗೆ ತೊಂದರೆಯಾಗಿದೆ' ಎಂಬ ಅಭಿಪ್ರಾಯವಿರುವಂತೆ ತೋರಿತು.

ಕಾಫಿ ಬೆಳೆಯುವವರ ವಾದ ಇದಕ್ಕೆ ವಿರುದ್ಧವಾದ ಅನೇಕಕಷ್ಟವಿದೆಯೆಂದು. ನಾನೂ ಒಂದೆರಡು ಎಸ್ಟೇಟ್ ನೋಡಿದ್ದೇನೆ; ಬಹಳ ಕಷ್ಟಪಟ್ಟು ಕೆಲಸಮಾಡಬೇಕು. ಕಷ್ಟ ಎಂದು ಅವರು ಹೇಳುತ್ತಾರೆ. ಆದರೆ ನಮ್ಮ ಸರ್ಕಾರದ ದೃಷ್ಟಿಯಿಂದ ಶ್ರೀಮತಿ ಬಿ. ಎಲ್. ಸುಬ್ಬಮ್ಮನವರಿಗೆ ಹೇಳುವುದೇನೆಂದರೆ, ಈಗ ನಮ್ಮ

ದೇಶದಲ್ಲಿ ಕಾಫಿ ಬೆಲೆ ಬಹಳ ಹೆಚ್ಚಾಗಿದೆ. ಇದರಲ್ಲಿ ನಮ್ಮ ಇಂಟರೆಸ್ಟ್ ಬಹಳವಾಗಿದೆ. ನಾವೂ ಬಿಲ್ ಮಾಡಬೇಕಾದರೆ, ಸೆಲೆಕ್ಟ್ ಕಮಿಟಿ ಮೂಲಕ ನಮ್ಮ ಅಭಿಪ್ರಾಯ ತಿಳಿಸುವುದಕ್ಕೆ ತಯಾರಾಗಿದ್ದೇವೆ. ಈ ರೀತಿ ಮಾಡಬೇಕಾದರೆ ನಮ್ಮ ದೇಶದ ಕಾಫಿ ಬೆಳೆಯುವವರ ಹಿತ ಲಕ್ಷಿಸದೆ ಅಲಕ್ಷ್ಯ ಮಾಡಿ ಏನೂ ಮಾಡುವುದಿಲ್ಲ. ಈಗಾಗಲೇ ಸುಮಾರು 15ದಿವಸಗಳ ಕೆಳಗೆ ವಿಷಯ ಗೊತ್ತಾದ ಕೂಡಲೇ ಇಂಡಿಯಾ ಸರ್ಕಾರಕ್ಕೆ ಬರೆದು ನಮ್ಮ ಸರ್ಕಾರದ ಪರವಾಗಿ ತಿಳಿಸಿದ್ದೇವೆ. ಮುಂದೆಯೂ ಅವರ ಹಿತಕ್ಕೆ ಧಕ್ಕೆ ಬಾರದಹಾಗೆ ಏನು ಮಾಡುವುದಕ್ಕೆ ಸಾಧ್ಯವೊ ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ. ಈ ವಿಷಯ ಪಾರ್ಲಿಮೆಂಟ್ ಮುಂದೆ ಒಂದು ಬಿಲ್ಲಿನ ರೂಪದಲ್ಲಿ ಬಂದಾಗ ಯೋಚನೆ ಮಾಡೋಣ. ಒಟ್ಟಿನಲ್ಲಿ ಅವರು ಹೇಳಿರುವ ವಿಷಯ ಅಲ್ಲಗಳೆಯುವ ಹಾಗಿಲ್ಲ. ಇಷ್ಟು ಭರವಸೆಯಿಂದ ಈ ಖೋತಾ ನಿರ್ಣಯವನ್ನು ಮಾನ್ಯ ಸೂಚಕರು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ನನ್ನ ಖೋತಾ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—Next cut motion stands in the name of Sri U. M. Madappa. This refers particularly to Mysore District. Already two members have spoken and Sri Imam has exhaustively dealt with this subject. The next cut motion, No. 5 stands in the name of Sri S. R. Nagappa Setty. There are two more cut motions, Nos. 25 and 26 in the name of the same Hon'ble Member. If he gets an opportunity to speak on them he can speak. Cut motions 6 and 7 stand in the name of Sri M. Linganna and the Hon'ble Member can select one of them. With a view to help members I am adopting this procedure.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—25 ಮತ್ತು 26ನೆಯ ಖೋತಾ ಸೂಚನೆಗಳ ಮೇಲೆ ಮಾತನಾಡಲು ನನಗೆ ಅವಕಾಶ ಕೊಡಬೇಕು.

Mr. SPEAKER.—I said, if you get an opportunity.

Constitution of a Committee to suggest measures to legalise Bhoodan.

Sri M. LINGANNA (Nanjangud).—Sir, I beg to move:

"That the demand under the head "40. Agriculture (except Botanical and other Public Gardens)" for Rs. 50,27,000 be reduced by Rs. 100 (to raise a debate on the need to set up a Committee of this House to investigate and suggest a legislative measure to legalise Bhoo Dan in the State)."

Sir, the main object with which this particular cut motion is moved is to bring home to the Treasury Benches the absolute necessity of applying their mind in this behalf. No doubt.

ಶ್ರೀ ಎಂ. ಮಾದಯ್ಯ.—ತಮಗೆ ಕನ್ನಡ ಗೊತ್ತಿದೆಯೇ ಸ್ವಾಮಿ?

ಶ್ರೀ ಎಂ. ಲಿಂಗಣ್ಣ.—All right ಈ ಒಂದು ವಿಷಯವನ್ನು ನಾನು ಪ್ರಸ್ತಾಪಮಾಡುತ್ತಾ ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಆಸೆಪಡುತ್ತೇನೆ. ಮಹಾತ್ಮಗಾಂಧೀಜೀಯವರು ಬದುಕಿದ್ದಷ್ಟು ಕಾಲವೂ ಅವರು ಅನೇಕ ಮಹತ್ತರವಾದ ಚಳವಳಿ ನಡೆಸಿದರು.

Sri S. R. NAGAPPA SETTY.—On a point of order. How does this question arise out of this head?

Sri M. LINGANNA.—You please listen to my speech.

Mr. SPEAKER.—Are you very serious about the point of order Sri Nagappa Setty? There is some force in what you say. It must come under some other head; strictly speaking, not under this Head. But, you are too late. I did not observe it. So, Sri Linganna may be as brief as possible.

Sri M. LINGANNA.—All right Sir.

ಗಾಂಧೀಜಿಯವರು ಹರಿಜನರ ಉದ್ಧಾರಕ್ಕಾಗಿ ನಮ್ಮ ದೇಶದಲ್ಲಿ ಚಳವಳಿ ನಡೆಸಿದಾಗ ಅವರ ಕುಂದು ಕೊರತೆ ನೀಗಿಸಲು ಅವರ ಅಂತಸ್ತನ್ನು ಮೇಲ್ಮಟ್ಟಕ್ಕೆ ತಂದು ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನವನ್ನು ದೊರಕಿಸಬೇಕೆಂದು ಪ್ರಯತ್ನಪಟ್ಟರು. ನನ್ನ ಅಭಿಪ್ರಾಯದಲ್ಲಿ ಅವರು ಸ್ವಾತಂತ್ರ್ಯ ಚಳವಳಿಗೆ ಎಷ್ಟು ಪ್ರಾಮುಖ್ಯತೆ ಕೊಟ್ಟರೋ ಅಷ್ಟೇ ಪ್ರಾಮುಖ್ಯತೆಯನ್ನು ಹರಿಜನರ ಉದ್ಧಾರಕ್ಕಾಗಿ ಆ ಸಂಬಂಧವಾದ ಒಂದು ಚಳವಳಿಗಾಗಿ ಕೊಟ್ಟರು. ರಾಜಕೀಯ ಸ್ವಾತಂತ್ರ್ಯ ಪಡೆದಮೇಲೆ ಮಹಾತ್ಮರು ವಿಧಿವಶರಾದುದರಿಂದ ಅವರನ್ನು ಪ್ರತಿನಿಧಿಸುವ ಯಾವ ಮಹನೀಯರಾದರೂ ಅವರ ಕೆಲಸ ಮುಂದುವರಿಸುವರೋ ಇಲ್ಲವೋ ಎಂಬ ಅನುಮಾನವಿತ್ತು. ಆದರೆ ಈಗ ಈ ಅನುಮಾನ ಮಾಯವಾಗಿದೆ. ಏಕೆಂದರೆ ಈಗಲೇ ಗಾಂಧಿ ಶಿಷ್ಯರಾಗಿ ಅವರ ಆಶ್ರಯದಲ್ಲಿದ್ದ ಶ್ರೀ ವಿನೋಬಾ ಭಾವೆಯವರು ಮಹಾತ್ಮರ ಮೇಲ್ಪಂಕ್ತಿಯನ್ನನುಸರಿಸಿ ಭೂದಾನಯಜ್ಞ ಚಳವಳಿಯನ್ನು ದೇಶದ ಮುಂದಿಟ್ಟಿದ್ದಾರೆ. ಈ ಭೂದಾನ ಯಜ್ಞದ ವಿಷಯದಲ್ಲಿ ಕೆಲವು ವಿಚಾರಗಳನ್ನು ಈ ಸಭೆಯ ಮುಂದೆ ತಿಳಿಸಬೇಕೆಂಬ ಆಸೆಯಿದೆ. ಈಗ ಹೊರದೇ

(ಶ್ರೀ ಎಂ. ಲಿಂಗಣ್ಣ.)

ವಾತಾವರಣ ನೋಡಿದರೆ, ಇಡೀ ರಷ್ಯಾದೇಶ ಕಮ್ಯೂನಿಸ್ಟ್ ದೇಶವಾಗಿದೆ. ಅದರ ಜೊತೆಗೆ ಚೈನಾ ಸಹ ಕಮ್ಯೂನಿಸ್ಟ್ ದೇಶವಾಗಿವೆ. ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಭೂವ್ಯವಸ್ಥೆಯನ್ನು ತಮ್ಮ ಒಂದು ಪೊಲಿಟಿಕಲ್ ಐಡಿಯಲ್ಲಿಗೆ ತಕ್ಕಂತೆ, ರಾಜನೀತಿಗೆ ಸಂಬಂಧಪಟ್ಟ ಹಾಗೆ, ಮಾರ್ಪಾಡು ಮಾಡಿಕೊಂಡಿದ್ದಾರೆ. ಈ ರೀತಿ ಪ್ರಪಂಚದ ಬಹುಭಾಗ ಕಮ್ಯೂನಿಸ್ಟ್ ತತ್ವಕ್ಕೆ ಒಳಗಾಗಿ ತನ್ನದೇ ಆದ ಒಂದು ಸಾಮಾಜಿಕ ಕಟ್ಟುನಿಟ್ಟನ್ನು ಬೆಳೆಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ತುಲನೆ ಮಾಡುವುದಾದರೆ, ಇಡೀ ಹಿಂದೂಸ್ಥಾನದಲ್ಲಿ ಈ ಚಳವಳಿ ಬಹಳ ಪ್ರಾಮುಖ್ಯವಾದುದು. ಗಾಂಧೀಜಿ ಹೂಡಿದ ಸ್ವಾತಂತ್ರ ಚಳವಳಿಯೊಡನೆಯೇ ಇದೂ ಬಂದಿರುವುದರಿಂದ ಭೂದಾನ ಯಜ್ಞ ಇಡೀ ಹಿಂದೂಸ್ಥಾನದಲ್ಲಿರುವ ಪ್ರತಿಯೊಂದು ಸಂಸ್ಥಾನದ ಸರ್ಕಾರದಲ್ಲೂ ಹೆಚ್ಚು ಪ್ರಾಮುಖ್ಯತೆ ಪಡೆಯುವಂತೆ ಆಯಾ ಸರ್ಕಾರದವರು ಹೆಚ್ಚು ನಿಗ ಕೊಡಬೇಕು. ಆದರೆ ನಮ್ಮ ಸಂಸ್ಥಾನದಲ್ಲಿ ಮಾತ್ರ ಈ ಚಳವಳಿ ಅಷ್ಟಾಗಿ ಒಂದು ಹೆಚ್ಚಿನ ಮಟ್ಟಕ್ಕೆ ಬಂದಿಲ್ಲ. ಅದೇ ಬೇರೆ ಸಂಸ್ಥಾನಗಳವಿಚಾರ ತೆಗೆದುಕೊಂಡರೆ ಹೈದರಾಬಾದು ಬೊಂಬಾಯಿ, ಬಿಹಾರ್, ಒರಿಸ್ಸಾ, ಮುಂತಾದ ಕಡೆ ಸಹಸ್ರಾರು ಏಕರೆಗಳನ್ನು ವಿನೋಬಾ ಭಾವೆಯವರಿಗೆ ಅನುಕೂಲಸ್ಥರು ಮುಂದೆ ಬಂದು ಧಾರೆಯೆರೆದು ಕೊಟ್ಟಿದ್ದಾರೆ. ಆದರೆ ಈ ಭೂಮಿಯನ್ನು ತೆಗೆದುಕೊಂಡು ಅವರು ಹಂಚುವ ಹಾಗಿಲ್ಲ ಕಾಲುನಡಿಗೆಯಲ್ಲೇ ದೇಶಗಳಿಗೆಲ್ಲಾ ಹೋಗಿ ಜನರ ಕಷ್ಟವನ್ನು ನೀಗಲು ಈ ರೀತಿಯಾಗಿ ವಿನೋಬಾ ಭಾವೆಯವರು ಕಂಕಣ ಕಟ್ಟಿದ್ದಾರೆ; ಈ ಭೂದಾನ ಯಜ್ಞದ ಚಳುವಳಿಯ ಪ್ರತಿಫಲವಾಗಿ ಅಲ್ಲಲ್ಲಿರುವ ಐಶ್ವರ್ಯವಂತರಿಂದ, ಹೆಚ್ಚಾಗಿ ಭೂಮಿಯಿರುವ ಹಣವಂತರಿಂದ ಭೂಮಿ ಪಡೆದು ಶೇಖರಿಸಿದ್ದಾರೆ. ಹೀಗೆ ಶೇಖರಿಸಿದ್ದರೂ ಸಾಮಾನ್ಯವಾಗಿ ಆಯಾ ಪ್ರದೇಶಗಳಲ್ಲಿರುವ ಹಳ್ಳಿಗಾಡಿನ ಬಡವರಿಗೆ ಹಂಚುವ ವಿಧಾನಕ್ಕೆ ಮಾತ್ರ ಅವರು ಕೈ ಹಾಕಲು ಕಷ್ಟವಾಗುತ್ತದೆ. ಅಲ್ಲದೆ ಕಾನೂನು ಈ ಕೆಲಸಕ್ಕೆ ಕೈ ಹಾಕಬೇಕಾಗುತ್ತದೆ.

2-30 P. M.

ಈ ಕೆಲಸವನ್ನು ನಮ್ಮ ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ನನ್ನ ಆಶೆ, ಉದಾಹರಣೆಗಾಗಿ ಈಗ ಬಿಹಾರಿನಲ್ಲಿ ಭೂದಾನ ಯಜ್ಞ ಚಳವಳಿಯು ಯಶಸ್ವಿಯಾಗಿ ನಡೆಯಲು ಸಹಾಯವಾಗಲು ಅಲ್ಲಿಯ ಸರ್ಕಾರಧವರು ಒಂದು ಕಾನೂನು ಜಾರಿಗೆ ತಂದಿರುತ್ತಾರೆ. ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಧಾನ್ಯರೂಪವಾಗಿ ಬಂದಿರತಕ್ಕ ಜಮಿೀನನ್ನು ಯಾವರೀತಿ ಹಂಚಬೇಕೆಂಬ ಬಗ್ಗೆ ಒಂದು ಕಾನೂನು ಮಾಡಿರುತ್ತಾರೆ. ಇಂಥ ಕೆಲಸಕ್ಕೆ ಕಾನೂನಿನ ಬಲವಿಲ್ಲದಿದ್ದರೆ, ಅಡಚಣೆಗಳು ಬರುತ್ತವೆ.

ಶ್ರೀ ಕೆ. ವಿ. ಶಂಕರಗೌಡ (ಮಂಡ್ಯ).—On a point of clarification, Sir. ಜಮೀನು ಹಂಚಿಕೆ ವ್ಯವಸ್ಥೆಗಾಗಿ ಅಲ್ಲಿ ಸಮಿತಿ ರಚಿತವಾಗಿಲ್ಲ, ಆ ಜಮೀನಿನ ಸಾಗುವಳಿ ಕಾರ್ಯವನ್ನು ಹೇಗೆ ಕೈಕೊಳ್ಳಬೇಕೆಂಬ ಬಗ್ಗೆ ನಿರ್ಧರಿಸಲು ಅದು ರಚನೆಯಾಗಿದೆ.

Mr. SPEAKER.—The Hon'ble Member may speak on this cut motion afterwards.

ಶ್ರೀ ಎಂ. ಲಿಂಗಣ್ಣ.—ಈ ದೃಷ್ಟಿಯಿಂದ ಕಾನೂನು ಮಾಡಿ ಬಿಹಾರ್ ಸಂಸ್ಥಾನದಲ್ಲಿ ಅಲ್ಲಿಯ ಸರ್ಕಾರದವರು ಜಾರಿಗೆ ತಂದಿರುತ್ತಾರೆ. ಇದೇ ರೀತಿ ಅನೇಕ ಸಂಸ್ಥಾನಗಳಲ್ಲಿಯೂ ಸಹ ಕಾನೂನು ಮಾಡಬೇಕೆಂದಿದ್ದಾರೆ. ಈ ಬಗ್ಗೆ ನಾನೇ ಒಂದು non-official bill ತರಬೇಕೆಂದು ಉದ್ದೇಶಿಸಿ, ಅಲ್ಲಿಯ ಸರ್ಕಾರಕ್ಕೆ ಈ ವಿಚಾರದಲ್ಲಿ ಪೂರ್ಣ ವಿವರಗಳನ್ನು ಒದಗಿಸಲು ಪತ್ರ ವ್ಯವಹಾರ ನಡೆಸಿದ್ದೆ. ಆದರೆ ಈ ವಿವರಗಳು ನನಗೆ ಸಕಾಲದಲ್ಲಿ ದೊರಕಲಿಲ್ಲ. ವಾದ್ದರಿಂದ ನಾನು ಆ ರೀತಿ ಕಾರ್ಯಕ್ರಮವನ್ನು ಕೈ ಕೊಳ್ಳಲಿಲ್ಲ: ಆದ ಪ್ರಯುಕ್ತ ಈ ಖೋತಾ ನಿರ್ಣಯದ ಮೂಲಕ ಸಭೆಯ ಅವಗಾಹನೆಗೆ ಈ ವಿಚಾರವನ್ನು ತಂದಿದ್ದೇನೆ. ಸರ್ಕಾರದವರು ಈ ಬಗ್ಗೆ ಆಸಕ್ತಿ ವಹಿಸಿ, ಸಂಬಂಧ ಪಟ್ಟ ಅಂಕಿ ಅಂಶಗಳನ್ನು ಮತ್ತು ಸಾಹಿತ್ಯವನ್ನೂ ತರಿಸಿ, ಬೇಗ ಒಂದು ಕಾನೂನು ಜಾರಿಗೆ ತರಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಇದಕ್ಕೆ ಮೊದಲು ಸಮಿತಿಯೊಂದನ್ನು ರಚಿಸಿ ಅದರ ಮೂಲಕ ಈ ಸಮಸ್ಯೆಯ ಸಾಧಕ ಬಾಧಕಗಳನ್ನೆಲ್ಲಾ ಪರಿಶೀಲಿಸಿ ಯಾವ ರೀತಿ ಈ ಭೂದಾನದ ಮೂಲಕ ಬರತಕ್ಕ ಜಮೀನನ್ನು ಹಂಚಬೇಕೆಂಬ ವಿಷಯವನ್ನು ಇತ್ಯರ್ಥಗೊಳಿಸಿ ಅನಂತರ ಕಾನೂನು ಭಾಗದಲ್ಲಿ ಅದನ್ನು ಅಡಕ ಮಾಡಬೇಕೆಂದು ಸೂಚಿಸುತ್ತೇನೆ. ಈ ವಿಚಾರದಲ್ಲಿ ತೀವ್ರ ಕಾರ್ಯಕ್ರಮ ಕೈ ಕೊಂಡು ಮುಂದಿನ ಅಧಿವೇಶನಕ್ಕೆ ಈ ಬಗ್ಗೆ legislative measures ತಂದರೆ ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಕಾನೂನು ಯಾವ ರೀತಿ ತರಬೇಕೆಂಬುದನ್ನು ಸೂಚಿಸಿ.

Mr. SPEAKER.—There is no time. He will bring a Bill next time.

Sri D. DEVARAJ URS.—Then there is no need to take up this now.

Mr. SPEAKER.—If the Government do not bring forward the Bill.

ಶ್ರೀ ಎಂ. ಲಿಂಗಣ್ಣ.—ಕಾನೂನು ಯಾವ ರೀತಿ ಮಾಡಬೇಕೆಂಬುದನ್ನು ನಿರ್ಧರಿಸತಕ್ಕದ್ದು ಸರ್ಕಾರದಲ್ಲಿ ಕಾನೂನು ರಚನೆ ಮಾಡುವ ಇಲಾಖೆಗೆ ಸಂಬಂಧಪಟ್ಟ ವಿಚಾರ. ಈ ರೀತಿ ದಾನವಾಗಿ ಬಂದ ಜಮೀನನ್ನು ತೆಗೆದುಕೊಳ್ಳುವವರು ಯಾರು ಎಂಬುದನ್ನು ಮೊಟ್ಟಮೊದಲು ನಿರ್ಧರಿಸ ಬೇಕಾಗುತ್ತದೆ. ಅಲ್ಲೇನೋ ವಿನೋಬಾ ಭಾವೆಯವರ ಈ ಭೂದಾನ ಚಳವಳಿಗೆ ತೆಲಂಗಣಾ ಪ್ರದೇಶದ ಜನರುಕೂಡ ತಮ್ಮ ಪೂರ್ಣ ಸಹಕಾರ ನೀಡಿದ್ದಾರೆ. ನಮ್ಮ ಸರ್ಕಾರದಲ್ಲ ಈ ವಿಚಾರದಲ್ಲಿ ಯಾವ ರೀತಿ ವ್ಯವಸ್ಥೆ ಮಾಡಬೇಕೆಂಬ ಬಗ್ಗೆ ಬೀಹಾರ್ ಸರ್ಕಾರದಿಂದ ಪೂರ್ಣ ವಿವರ ಪಡೆದು, ಅವರು ಯಾವರೀತಿ ಮುಂದುವರಿದಿದ್ದಾರೆಂಬುದನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ವಿಚಾರದಲ್ಲಿ ನಮ್ಮ ಸಂಸ್ಥಾನಕ್ಕೆ ಸರಿಹೋಗುವ ರೀತಿಯಲ್ಲಿ ಮಾರ್ಪಾಡುಮಾಡಿಕೊಂಡು ಸೂಕ್ತ ಕಾರ್ಯ ಕ್ರಮವನ್ನು ಕೈಕೊಳ್ಳಬೇಕೆಂದು ಬಿನ್ನವಿಸಿಕೊಂಡು ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಬಿ ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿಬಂಡೆ).—ಈ ನಿರ್ಣಯದ ಸೂಚಕರು ಉದ್ದೇಶಿಸಿರುವಂತೆ ದಾನಕೊಟ್ಟು, ಭಿಕ್ಷೆ ಬೇಡಿ ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಹಿಂದೆ ಬಂದು ಬಾರಿ Russian foodgrains ಬಂದಾಗ ಸಹ ಆಹಾರ ಸಚಿವರು we are not going to accept the principle of begging ಎಂದು ಹೇಳಿದ್ದಾರೆ. ಆದುದರಿಂದ ಈ ದಾನ ಬೇಕಿಲ್ಲ. ಆದರೆ ಭೂಸುಧಾರಣೆ ಎಂಬುದು ನಮ್ಮ birth right ಎಂದು ಹೇಳುತ್ತೇನೆ. ಈಗ ಕಾಂಗ್ರೆಸ್ ಪಕ್ಷದವರು ಯಾವ ರೀತಿ agrarian reforms of land ಆಗ ಬೇಕೆಂದು ಕಾತರರಾಗಿದ್ದಾರೋ ಆ ಉದ್ದೇಶ ಈ ರೀತಿ ಭೂದಾನದಿಂದ ಆಗುವುದಿಲ್ಲ. ಈ ಬಗ್ಗೆ ಒಂದು ಕಾನೂನು ಆಗಲೇ ಬೇಕು. ಈಗ ಯಾರ ಹತ್ತಿರ ಎಷ್ಟೆಷ್ಟು ಭೂಮಿಯಿದೆ, ಎಂಬುದನ್ನು ಗೊತ್ತುಮಾಡಿ, ಅವರ ಸ್ವಂತ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಬಿಟ್ಟು ಉಳಿದುದಕ್ಕೆ ceiling price ಗೊತ್ತುಮಾಡಿ-dry landಗೆ ಎಕರೆಗೆ ಇಷ್ಟು wet landಗೆ ಎಕರೆಗೆ ಇಷ್ಟು ಎಂದು ಗೊತ್ತುಮಾಡಿ-ಎಲ್ಲವನ್ನೂ ಸರಿಯಾಗಿ ಹಂಚಬೇಕು.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಹಾಗಾದರೆ ಆ ಬಗ್ಗೆ ಈಗಿರತಕ್ಕ Constitution ಬದಲಾವಣೆ ಆಗಬೇಕಾಗುತ್ತದೆ!

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅದು ಆಗಬೇಕಾದ ಅಗತ್ಯವಿದ್ದರೆ ಬದಲಾವಣೆ ಆಗಲೇ ಬೇಕು.

ಒಬ್ಬ ಸದಸ್ಯರು.—ನಿಮಗೆಷ್ಟು ಭೂಮಿ ಇದೆ?

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನನಗೂ ತಕ್ಕ ಮಟ್ಟಿಗೆ ಜಮೀನಿದೆ. ಆದರೆ ದಾನ ಕೇಳಿದರೆ ನಿಮ್ಮಪ್ಪರಾಣೆಗೂ ಕೊಡುವುದಿಲ್ಲ. (ನಗು!) ಈಚೀಚೆಗೆ ನಮ್ಮ ದೇಶದಲ್ಲಿ ಕೈಗಾರಿಕಾಭಿವೃದ್ಧಿಯ ಕಡೆಗೆ ಜನರ ಗಮನವು ಹೆಚ್ಚಿಗೆ ಸೆಳೆಯಲ್ಪಡುತ್ತದೆ. ಆದರೆ ನಮ್ಮ ದೇಶವು ವ್ಯವಸಾಯದ ದೇಶ. ಶೇಕಡಾ 80 ರಷ್ಟು ಮಂದಿ ವ್ಯವಸಾಯದಿಂದಲೇ ಜೀವನ ಜರುಗಿಸುತ್ತಿದ್ದಾರೆ. ಆದಕಾರಣ ತಾವು agrarian reforms of lands ಬಗ್ಗೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುವುದು ಸೂಕ್ತವಾದುದು. ಅಲ್ಲದೆ ನಮ್ಮ ದೇಶದ ವ್ಯವಸಾಯಾಭಿವೃದ್ಧಿಯ ಬಗ್ಗೆ ತಕ್ಕ ಸೌಕರ್ಯವನ್ನು ಕಲ್ಪಿಸಿಕೊಡುವುದು, ಗೊಬ್ಬರ, ಉತ್ತಮ ಜಾತಿಯ ಬೀಜ, ವ್ಯವಸಾಯಕ್ಕೆ ಅಗತ್ಯವಾಗಿ ಬೇಕಾದ ಸಲಕರಣೆಗಳು ಇವುಗಳನ್ನೆಲ್ಲಾ ಅತಿಜರೂರಾಗಿ ಹೆಚ್ಚಿನ ಪ್ರಮಾಣದಲ್ಲಿ ಒದಗಿಸುವ ಬಗ್ಗೆ ತಕ್ಕ ಕಾರ್ಯಕ್ರಮ ಕೈಕೊಳ್ಳುವುದು ಉತ್ತಮ.

Sri M. LINGANNA.—He is off the point, Sir.

ಶ್ರೀ ಬಿ. ವಿ. ನಾರಾಯಣರೆಡ್ಡಿ.—No, Sir, I am in the point. ಈ ಬಗ್ಗೆ ಎಲ್ಲಾ ವಿಚಾರವನ್ನೂ ಕೂಲಂಕಷವಾಗಿ ಪರಿಶೀಲನೆಮಾಡಲು ಈ ಖೋತಾ ನಿರ್ಣಯದ ಸೂಚಕರು ಹೇಳಿದಂತೆ ಒಂದು ಸಮಿತಿಯನ್ನು ರಚಿಸಿ ತನ್ಮೂಲಕ ಸೂಕ್ತಕಾರ್ಯ ಕ್ರಮಗಳನ್ನು ಕೈಕೊಳ್ಳಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಅಧ್ಯಕ್ಷರೇ, ಇಂಥ ಮುಖ್ಯವಾದ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ಲಿಂಗಣ್ಣನವರು ತಂದಿರುವುದಕ್ಕಾಗಿ ವಂದಿಸುತ್ತೇನೆ. ಆದರೆ ಅವರ ಕತ್ತರಿ ನಿರ್ಣಯದಲ್ಲಿ ಅವರು ಉಪಯೋಗಿಸಿರುವ ಪದಸಂಯೋಜನೆ ಅಷ್ಟು ಸಮರ್ಪಕವಾಗಿಲ್ಲವೆಂದು ವಿಷಾದದಿಂದ ತಿಳಿಸುತ್ತೇನೆ. ಬಹುಶಃ ಅವರ ಖೋತಾ ನಿರ್ಣಯದ ಉದ್ದೇಶ ಹೀಗಿರಬಹುದು: ಈ ಭೂದಾನ ಯಜ್ಞದ ಕಾರ್ಯಕ್ರಮದ ಪ್ರಕಾರ, ಯಾರು ಉದಾರವಾಗಿ ಜಮೀನು ಕೊಡುತ್ತಾರೋ ಆ ಜಮೀನನ್ನು ಒಬ್ಬರಿಂದ ಮತ್ತೊಬ್ಬರಿಗೆ ಬದಲಾಯಿಸುವಾಗ Transfer of property Act ಪ್ರಕಾರ, ಅದಕ್ಕಾಗಿ ಶುಲ್ಕ ಕೊಡಬೇಕಾಗುತ್ತದೆ; ಹಾಗೆ ಕೊಡಬೇಕಾಗಿ ಬಂದರೆ ಇದನ್ನು ಯಾರು ಕೊಡಬೇಕು, ಎಂಬ ಇವೇ ಮುಂತಾದ ವಿಚಾರಗಳೆಲ್ಲಾ ನಿರ್ಧರವಾಗಲು ನ್ಯಾಯ ವಿಮರ್ಶಾತ್ಮಕ ದೃಷ್ಟಿಯಿಂದ ಇವುಗಳನ್ನೆಲ್ಲಾ ಒಳಗೊಂಡ ಒಂದು ಕಾನೂನು ಜಾರಿಗೆ ಬರಬೇಕಾದುದು ಅಗತ್ಯವೆಂಬುದು ಅವರ ಉದ್ದೇಶವಾಗಿರಬಹುದು.

ಈ ಸಭೆ ಮಾಡಬೇಕಾಗಿರತಕ್ಕ ಕೆಲಸವಾದರೂ ಇಷ್ಟೆ. ಜಮೀನುಕೊಡುವ ಏರ್ಪಾಡನ್ನು ಈ ಸಭೆಮಾಡುವುದಕ್ಕಾಗುವುದಿಲ್ಲ. ಜಮೀನು ಕೊಡುವಂತೆ ಮಾಡಬೇಕಾದದ್ದು ಸದಸ್ಯರಿಗೆ ಮತ್ತು ಸಭೆಯ ಹೊರಗಿರತಕ್ಕ ಅನೇಕ ಮಹನೀಯರಿಗೆ ಸೇರಿದ್ದು. ಜನರಲ್ಲಿ ಪ್ರಾರ್ಥನೆಮಾಡಿ ಆ ಕೆಲಸಮಾಡಬೇಕು. ದೇಶದಲ್ಲಿ ಇದು ಒಂದು ಮುಖ್ಯವಾದ ಪ್ರಶ್ನೆ. ಈ ಭೂ ಸಮಸ್ಯೆ ಪರಿಹಾರವಾಗದೇ ಇದ್ದರೆ ದೇಶದಲ್ಲಿರತಕ್ಕ ಶೇಕಡ 80 ಭಾಗದ ಜನರ ಕಷ್ಟ ಪರಿಹಾರವಾಗುವುದಿಲ್ಲ. ಹೆಚ್ಚು ಜಮೀನು ಇರತಕ್ಕವರೆಲ್ಲಾ ಉದಾರವಾಗಿ ಜಮೀನು ಕೊಡಿರಿ ಎಂಬುದು ಅಷ್ಟಾಗಿ ಈ ಸಭೆಯ ಕರ್ತವ್ಯ ವಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಆದರೆ ಬಂದಂಥ ಜಮೀನನ್ನು ಕಾನೂನಿನ ತೊಂದರೆ ಬರದಂತೆ, ಕಷ್ಟವಾಗದ ರೀತಿಯಲ್ಲಿ, ಹೆಚ್ಚು ಖರ್ಚಾಗದ ರೀತಿಯಲ್ಲಿ ಹಂಚುವುದಕ್ಕೆ ಏನೇನು ಕಾನೂನು ಬೇಕೋ ಅದನ್ನು ಮಾಡಿ, ಹಂಚಿ. ಜಮೀನನ್ನು ರೈತರಿಗೆ ಕೊಟ್ಟಾಗ ಕಾನೂನಿನಿಂದ ಕಷ್ಟ ಬರದಂತೆ ಇರಬೇಕು ಎಂಬ ಅವರ ಅಭಿಪ್ರಾಯದಂತೆ ಕಾನೂನುಮಾಡಬೇಕು; ಅದನ್ನು ಮಾಡೋಣ ಈ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಸದಸ್ಯರೊಬ್ಬರು, ಕಾನೂನು ಮುಖಾಂತರವೇ ಎಲ್ಲವೂ ಆಗಲಿ, ದಾನಕೊಡುವುದು ಬೇಕಾಗಿಲ್ಲ ಎಂದು ಹೇಳಿದರು. ಒಂದು ವಿಷಯ ತಿಳಿದುಕೊಳ್ಳಬೇಕು. ಕಾನೂನು ಬಂದೇ ಬರುತ್ತದೆ; ಬೇಡ ಎಂದು ಯಾರೂ ಹೇಳುವುದಿಲ್ಲ. ಕಾನೂನು ಬರುವುದಕ್ಕಿಂತ ಮುಂಚೆ ಮನುಷ್ಯರ ಮನಸ್ಸನ್ನು, ಹೃದಯವನ್ನು ಕೂಡ ಪರಿವರ್ತನೆಮಾಡಬೇಕಾದದ್ದು ಮುಖ್ಯವಾದ ವಿಷಯ. ಕಾನೂನನ್ನು ಮಾಡಿ ಕಾನೂನಿನ ಪ್ರಯೋಗದಿಂದಲೇ ಎಲ್ಲರಿಂದಲೂ ಜಮೀನನ್ನು ಕಿತ್ತುಕೊಳ್ಳುವುದು ಅಸಾಧ್ಯವಾದ ಮಾತಲ್ಲ. ಮಾನ್ಯ ಸದಸ್ಯರು ಬಹಳ ವೇಗವಾಗಿ ಹೋಗುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಅದು ತಪ್ಪು ತಿಳಿವಳಿಕೆ. ಮಹಾತ್ಮ ಗಾಂಧೀಜಿಯವರು ಹೇಳಿದ್ದಾರೆ, ಪ್ರೇಮದಿಂದ ಕೆಲಸಗಳನ್ನು ಸಾಧನೆಮಾಡಿ, ವಿರಸಕ್ಕೆ ಅವಕಾಶಕೊಡಬೇಡಿ, ತಿಕ್ಕಾಟಕ್ಕೆ ಅವಕಾಶಕೊಡಬೇಡಿ ಎಂದು. ಆದ್ದರಿಂದ ಹೆಚ್ಚಿಗೆ ಭೂಮಿ ಇರತಕ್ಕ ಮಹನೀಯರ ಮನಸ್ಸನ್ನು ಪರಿವರ್ತನೆಮಾಡಿ, ಹೃದಯವನ್ನು ಪರಿವರ್ತನೆಗೊಳಿಸಿ ಅವರಿಗೆ ಬೇಕಾದ್ದಕಿಂತ ಹೆಚ್ಚಿಗೆ ಇರತಕ್ಕದನ್ನು ಮತ್ತೊಬ್ಬರಿಗೆ ಕೊಡುವಂತೆ ಮಾಡಬೇಕಾದದ್ದು ನಮ್ಮ ಕರ್ತವ್ಯ. ಅದು ಜನರ ಮನಸ್ಸಿನಲ್ಲಿ ಬರುವಂತೆಮಾಡಿ; ಆ ಮೇಲೆ ಕಾನೂನನ್ನು ತರುತ್ತೇವೆ. ಆ ರೀತಿ ಮನಸ್ಸಿನ ಮೇಲೆ ಪರಿಣಾಮವಾಗುವುದಕ್ಕೆ ಭೂದಾನ ಮಾಡಿ, ಜಮೀನು ಹೆಚ್ಚಾಗಿಲ್ಲದಿರುವ ಬಡವರಿಗೆ ಜಮೀನುಕೊಟ್ಟು ಮಾರ್ಗದರ್ಶಕರಾಗಬೇಕು ಎಂಬುದನ್ನು ತಿಳಿದುಕೊಂಡ ಮೇಲೆ ಈ ಕಾನೂನು ತರೋಣ ಎಂಬುದು ನನ್ನ ಅಭಿಪ್ರಾಯ. ಕಾನೂನನ್ನು ತೆಗೆದು

(ಶ್ರೀ ಬಿ. ವಿ. ನಾರಾಯಣರೆಡ್ಡಿ.)

ಕೊಂಡು ಬನ್ನಿ ಎಂದು ಆರ್ಬಿಟ್ರೆರಿಯಾಗಿ ಮಾಡುವುದರಿಂದ ಪ್ರಯೋಜನವಿಲ್ಲ. ಜನರನ್ನು ತಯಾರುಮಾಡಿ ಆ ರೀತಿ ಜನರನ್ನು ತಯಾರುಮಾಡುವ ದೃಷ್ಟಿಯಿಂದ ಭೂದಾನ ಯಜ್ಞವನ್ನು ಪ್ರಾಮುಖ್ಯವನ್ನಾಗಿ ಮಾಡಬೇಕಾಗುತ್ತದೆ. ಅದರಿಂದ ಈ ಕ್ಷೇತ್ರ ವಿಸ್ತಾರವಾಗುತ್ತದೆ, ದಾರಿ ಸುಗಮವಾಗುತ್ತದೆ. ಇಲ್ಲದೆ ಇದ್ದರೆ ಹಿಂಸೆಗೆ ಅವಕಾಶವಾಗುತ್ತದೆ. ನಾವು ಹಿಂಸೆ ಕೊಡುವ ಮನುಷ್ಯರಲ್ಲ. ನಮ್ಮ ಸಂಸ್ಕೃತಿ ಬೆಳೆಯಬೇಕು, ಪ್ರೇಮದಿಂದ ಕೆಲಸ ಸಾಧನೆಮಾಡಬೇಕು ಎಂದು ಹೇಳಿ ಆ ಸಾಧನೆಗೆ ಈ ಕೆಲಸ ಕಾರ್ಯಗಳನ್ನು ಪ್ರಾರಂಭಮಾಡಿದ್ದೇವೆ. ಆದ್ದರಿಂದ ಇದಕ್ಕೆ ಅವರು ಅಷ್ಟಾಗಿ ಪ್ರತಿಭಟಿಸುವುದು ಸಾಧುವಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇಷ್ಟು ದಾನಮಾಡಿ ಬಂದಿರತಕ್ಕ ಜಮೀನನ್ನು ಮುಂದೆ ಜಮೀನು ಇಲ್ಲದೇ ಇರುವವರಿಗೆ ಹಂಚಬೇಕಾಗುತ್ತದೆ. ಅದನ್ನು ಯಾವ ರೀತಿ ಕಾನೂನು ಪ್ರಕಾರ ಮಾಡಬೇಕು ಎಂಬುದಕ್ಕೆ ಒಂದು ಕಾನೂನುಮಾಡಬೇಕಾದದ್ದು ಅತ್ಯವಶ್ಯಕ. ಆ ವಿಚಾರದಲ್ಲಿ ಈಗಲೇ ಅಷ್ಟು ಯೋಚನೆಮಾಡಬೇಕಾಗಿಲ್ಲವೆಂದು ಭಾವಿಸುತ್ತೇನೆ. ನಮ್ಮ ದೇಶದಲ್ಲಿ ಇದುವರೆಗೆ 1500 ಎಕರೆ ಮಾತ್ರ ಬಂದಿರಬಹುದು. ಇನ್ನೂ ಹೆಚ್ಚು ಜಮೀನು ಬಂದ ಮೇಲೆ ಅನೇಕ ಪ್ರಾಂತ್ಯಗಳಲ್ಲಿ ಕಾನೂನುಮಾಡಿದ್ದಾರೆ. ಅದೇ ರೀತಿ ನಾವೂ ಒಂದು ಕಾನೂನುಮಾಡಿ ಹಂಚತಕ್ಕ ಕೆಲಸವನ್ನು ಸಮಿತಿಯವರಿಗೆ ಬಿಡೋಣ. ಆ ಸಮಿತಿಯವರು ಆ ಕಾರ್ಯ ಕೈಕೊಂಡ ಮೇಲೆ ಕಾನೂನು ಮಾಡಬಹುದು. ಬಂದ ಜಮೀನನ್ನು ಹಂಚುವುದಕ್ಕೆ ಒಂದು ಸಮಿತಿ ಏರ್ಪಾಡುಮಾಡಬೇಕೆಂಬ ಅಭಿಪ್ರಾಯ ಬರುವ ರೀತಿಯಲ್ಲಿ ಮಾನ್ಯ ಸದಸ್ಯರಾದ ಲಿಂಗಣ್ಣನವರು ಮಾತನಾಡಿದರು. ಹಂಚುವುದಕ್ಕೆ ನಮಗೆ ಅಧಿಕಾರವಿಲ್ಲ. ಭೂದಾನ ಯಜ್ಞ ಸಮಿತಿ ಎಂದು ಇದೆ. ಇದು ಅವರಿಗೆ ಸೇರಿದ ವಿಷಯ. ಅವರು ಹಂಚುತ್ತಾರೆ. ಜಮೀನು ಯಾರಿಗೆ ಕೊಡಬೇಕು ಎಂಬುದನ್ನು ತಿಳಿದುಕೊಂಡು ಆ ಮೇಲೆ ಕಾನೂನು ಮಾಡುವುದು ನಮ್ಮ ಕರ್ತವ್ಯ. ಅದಕ್ಕೆ ಅವಕಾಶವಿದೆ. ಆ ಸಮಿತಿಯು ಬಂದಾಗ ಕಾನೂನನ್ನು ಸಹ ಖಂಡಿತವಾಗಿ ಮಾಡುವುದರಲ್ಲಿ ಅಭ್ಯಂತರವಿಲ್ಲ, ಮಾಡಿನುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಶ್ರೀಮಾನ್ ಲಿಂಗಣ್ಣನವರು ತಂದಿರತಕ್ಕ ಈ ಖೋತಾ ನಿರ್ಣಯದ ವಿಷಯದಲ್ಲಿ ಶ್ರೀಮಾನ್ ಶಂಕರೇಗೌಡರು ಮತ್ತು ಲಿಂಗಣ್ಣನವರು ಬಹಳ ಚೆನ್ನಾಗಿ ಪ್ರತಿಪಾದಿಸಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ಇಡೀ ಹಿಂದೂಸ್ಥಾನದ ತುಂಬ ಪ್ರಚಾರ ಕಾರ್ಯ ನಡೆಯುತ್ತಾ ಇದೆ. ಇದರ ಪ್ರಾಮುಖ್ಯತೆಯನ್ನು ಕಂಡು —ನಾನು ಮೊನ್ನೆತಾನೆ 23–3-53ನೇ ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ನೋಡಿದೆ—27 3-53ರಲ್ಲಿ ಪ್ರೈಮ್ ಮಿನಿಸ್ಟರ್‌ರವರು ಡೆಲ್ಲಿಯಲ್ಲಿ All Party Conference ಕರೆದಿದ್ದಾರೆ. ಚಳವಳಿಯನ್ನು ಹೇಗೆ ಮುಂದುವರಿಸಬೇಕು, ಆದಷ್ಟು ಜಾಗ್ರತೆ ಇದರ ಪ್ರಯೋಜನ ದೇಶಕ್ಕೆ ಹೇಗೆ ಉಂಟುಮಾಡಬೇಕು ಎಂಬ ದೃಷ್ಟಿಯಿಂದ ಪ್ರಾಯಶಃ ಅವರು ಕಾನ್ಫರೆನ್ಸ್ ಕರೆದಿದ್ದಾರೆ ಎಂದು ತಿಳಿದಿದ್ದೇನೆ. ಈ ಕಾನ್ಫರೆನ್ಸ್ ನಡೆದಮೇಲೆ ಯಾವ ರೀತಿ ಆಗುತ್ತದೆ ಎಂಬುದನ್ನು ನೋಡಿಕೊಂಡು ಸರಾಕ್ಕರ ಏನು ಕಾರ್ಯಕ್ರಮ ಕೈಕೊಳ್ಳಲಿಕ್ಕೆ ಸಾಧ್ಯ, ಸರ್ಕಾರ ಇದರಲ್ಲಿ ಬರುತ್ತದೆಯೋ ಎಂಬುದನ್ನು ಆಲೋಚನೆಮಾಡಬೇಕು. ಶ್ರೀಮಾನ್ ಲಿಂಗಣ್ಣನವರ ಅಭಿಪ್ರಾಯಕ್ಕೆ ನನ್ನ ಮನ್ನಣೆ ಇದೆ. ಆದರೆ ಕಾನೂನು ಅಲ್ಲ ಹೇಗೆ ಬರುತ್ತಿದೆ ಏನು ಎಂಬುದನ್ನು ನೋಡಿಕೊಂಡು ಮುಂದೆ ಆಲೋಚನೆಮಾಡೋಣ. ಜಮೀನು ತೆಗೆದುಕೊಳ್ಳಬೇಕು, ಸಮಾನತೆ ಬರಬೇಕು, ಬಡವನಿಗೆ ಅನುಕೂಲವಾಗಬೇಕೆಂಬ ತತ್ವ ಮೇಲಿದೆಯೋ ಅದು ತಪ್ಪಲ್ಲ. ಇಷ್ಟರ ಭರವಸೆಯಮೇಲೆ ಮಾನ್ಯ ಸ್ನೇಹಿತರಾದ ಲಿಂಗಣ್ಣನವರು ಈ ಖೋತಾ ನಿರ್ಣಯವನ್ನು ವಾಪಸುತೆಗೆದು ಕೊಳ್ಳುತ್ತಾರೆಂದು ನಂಬಿದ್ದೇನೆ.

Sri M. LINGAPPA.—I seek leave to withdraw my cut motion.

The cut motion was, by leave, withdrawn.

Propagation of the Japanese method of paddy cultivation.

Sri K LAKKAPPA (Channarayapatna).—Sir, I beg to move:

"That the demand under the head "40. Agriculture except (Botanical and other public gardens) for Rs. 50,27,000 be reduced by Rs. 100 (to impress on the Government regarding the need for propagating the Japanese method of paddy cultivation in the State)."

ಗಾಂಧಿಟ್ರಸ್ಟ್ ಬೋರ್ಡಿನವರು ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಎತ್ತಿರತಕ್ಕ ಹಣವನ್ನು ದೇಶಕ್ಕೆ ಯಾವರೀತಿ ಸದ್ವಿನಿಯೋಗಪಡಿಸಬಹುದು ಎಂಬುದನ್ನು ಚರ್ಚೆಮಾಡಿ ಆ ಟ್ರಸ್ಟ್ ಬೋರ್ಡ್‌ನಿಂದ ಕೆಲವರು ಜಪಾನ್‌ದೇಶಕ್ಕೆ ಹೋಗಿ ಅಲ್ಲಿ ಕೆಲವುಕಾಲ ನಿಂತು ಪೂರ್ಣ ಅನುಭವವನ್ನು ಪಡೆದು ಅಲ್ಲಿಂದ ಇಂಡಿಯಾ ದೇಶಕ್ಕೆ ವಾಪಸುಬಂದು ಆ ಪ್ರಯೋಗವನ್ನು ಕೆಲವು ಕ್ಷೇತ್ರಗಳಲ್ಲಿ ತಾವೇ ಖುದ್ದಾಗಿ ನಡೆಸಿ, ಆ ಪ್ರಯೋಗದ ಫಲಿತಾಂಶವನ್ನು ಚೆನ್ನಾಗಿ ಅರಿತುಕೊಂಡು, ಈಗ ದೇಶದ ನಾನಾ ಮೂಲೆ ಮೂಲೆಗಳಿಗೆ ಹೋಗಿ ಪ್ರಚಾರ ಮಾಡುತ್ತಾ ಇರುವುದು ನಮಗೆಲ್ಲರಿಗೂ ಗೊತ್ತಿದೆ. ಮೊನ್ನೆ ನಮ್ಮ ಹಾಸನ ಜಿಲ್ಲೆಗೂ ಸಹ ಬಂದು ತಾವರೇಕೆರೆ ಗ್ರಾಮದಲ್ಲಿ ಪ್ರಚಾರ ನಡೆಸಿದರು. ಆ ಸಂದರ್ಭದಲ್ಲಿ ಅಲ್ಲಿ ನಾನೂ ಸಹ ಇದ್ದು ತಿಳಿದುಕೊಳ್ಳತಕ್ಕ ಅವಕಾಶ ದೊರಕಿತು. ಅವರು ವಿವರವಾಗಿ ಎಲ್ಲವನ್ನೂ ತೋರಿಸಿ ಕೊಟ್ಟಮೇಲೆ ನನಗಂದರೂ ಅನ್ನಿಸಿತು, ಆ ಪದ್ಧತಿಯನ್ನು ನಾವು ಇಲ್ಲಿ ಕಡ್ಡಾಯವಾಗಿ ಜಾರಿಗೆ ತರುವ ಪ್ರಯತ್ನಪಟ್ಟಲ್ಲಿ ಖಂಡಿತವಾಗಿಯೂ ದೇಶದಲ್ಲಿ ಅದರಿಂದ ಈಗಿರತಕ್ಕ ಹಣದ ಅಭಾವನೀಗಿ, ಜನಗಳ ಆರ್ಥಿಕ ಮಟ್ಟವೂ ಸಹ ಅಭಿವೃದ್ಧಿಯಾಗಲು ಒಂದು ಅವಕಾಶ ಇದೆ ಎಂಬುದು ಮನದಟ್ಟಾಯಿತು. ನಮ್ಮಲ್ಲಿ ಸಹ ಅಲ್ಲಲ್ಲಿ ಕೆಲವು ರೈತರು ಒಂದು ಎಕರೆಗೆ ಸುಮಾರು 30-40 ಪಲ್ಲದವರೆಗೂ ಬೆಳೆದಿದ್ದಾರೆ. ಆದರೆ ಅದನ್ನು ಒಂದು ಶಾಸ್ತ್ರೀಯವಾದ ರೀತಿಯಲ್ಲಿ ಅವರು ಬೆಳೆದಿಲ್ಲ. ಹೆಚ್ಚು ಗೊಬ್ಬರ ಹಾಕಿದೆಯೋ ಅಥವಾ ಇನ್ನಾವುದಾದರೂ ಒಂದು ರೀತಿಯಲ್ಲೋ ಬೆಳೆದಿದ್ದಾರೆಯೇ ಹೊರತು

ಶಾಸ್ತ್ರೀಯವಾಗಿ ಎಲ್ಲರೂ ಅನುಸರಿಸಬಹುದಾದ ರೀತಿಯಲ್ಲಿ ಅಷ್ಟು ದವಸವನ್ನು ಬೆಳೆದಿಲ್ಲ. ಜಪಾನ್ ಪದ್ಧತಿಯನ್ನು ಅನುಸರಿಸುವುದೆಂದರೆ, ಎಕರೆಗೆ ಸುಮಾರು 40 ಪಲ್ಲಗಳಿಂದ 60 ಪಲ್ಲಗಳವರೆಗೂ ಬೆಳೆಯ ಬಹುದೆಂದು ಅವರ ಅನುಭವವಿದೆ. ಅದರಲ್ಲಿ ಮುಖ್ಯವಾಗಿ ಅವರು ಸೀಡ್ಸ್ ಮತ್ತು ಸೀಡ್‌ಲಿಂಗ್ಸ್ ಇವುಗಳನ್ನು ನಾವು ಯಾವಕಾಲದಲ್ಲಿ ಎಷ್ಟು ಶಾಸ್ತ್ರೀಯವಾಗಿ ಹಾಕಬೇಕೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಜೊತೆಗೆ ವ್ಯವಸಾಯ ಮಾಡತಕ್ಕ ಕಾಲದಲ್ಲಿ Inter-culture ವ್ಯವಸ್ಥೆಯನ್ನು ಮತ್ತು ರಸಾಯನಿಕ ಗೊಬ್ಬರ ಉಪಯೋಗಿಸಿ ಎಷ್ಟು ಹೆಚ್ಚು ಆಹಾರವನ್ನು ಬೆಳೆಯಬಹುದೆಂಬುದನ್ನು ಅವರು ವಿವರವಾಗಿ ಪ್ರಚಾರ ಮಾಡುತ್ತಾ ಇದ್ದಾರೆ. ದೊಡ್ಡ ದೊಡ್ಡ ಪುಸ್ತಕಗಳನ್ನು ಸಹ ಪ್ರಿಂಟ್‌ಮಾಡಿ ಹಂಚುತ್ತಾ ಇದ್ದಾರೆ. ನಮ್ಮವರು ಒಂದು ಎಕರೆಗೆ ಬತ್ತದ ನಾಟಿ ಹಾಕಬೇಕಾದರೆ ಸೀಡ್‌ಲಿಂಗ್ಸ್ ಬೆಳೆಸುವ ಕಾಲದಲ್ಲಿ ಸುಮಾರು 40 ಸೇರುಗಳವರೆಗೂ ಬೀಜವನ್ನು ಬಿತ್ತನೆಮಾಡುತ್ತಾರೆ. ಆದರೆ ಅವರು ಹೇಳುವ ಪ್ರಕಾರ ಒಂದು ಎಕರೆಗೆ ಕೇವಲ 6 ಸೇರಿನಷ್ಟು ಮಾತ್ರ ಬೀಜದ ಬಿತ್ತನೆಹಾಕಿದರೆ ಸಾಕು. ಆ ರೀತಿ ಮಾಡುವುದು ಒಂದರಿಂದಲೇ ದೇಶದಲ್ಲಿ ಬೇಕಾದಷ್ಟು ಆಹಾರವನ್ನು ಬೆಳೆಯಬಹುದು ಎಂದು ಹೇಳುತ್ತಾರೆ. ಇದು ನಿಜವಾಗಿಯೂ ಸತ್ಯವಾದ ಅಂಶವೆಂಬುದು ನಮಗೆ ಮನದಟ್ಟಾಗುತ್ತಾ ಇದೆ. ಇದರಿಂದ ಒಂದು ಎಕರೆಗೆ ಸುಮಾರು 30 ಸೇರು ಭತ್ತವನ್ನು ಉಳಿತಾಯಮಾಡಿದಂತಾಗುತ್ತದೆ. ಆದರೆ ನಮ್ಮ ದೇಶದ ರೈತರಿಗೆ ವ್ಯವಸಾಯದ ಅನುಭವ ಬರಬರುತ್ತ ಕಡಮೆಯಾಗಿ ಈಗ ಅದರಿಂದ ಹೆಚ್ಚು ಆಹಾರ ಬೆಳೆಯುತ್ತಿದ್ದುದು ನಿಂತುಹೋಗಿದೆ. ಈ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂಬ ದೃಷ್ಟಿಯಿಂದ ಆ ಯೋಜನೆಗಾಗಿ ನಮ್ಮ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿರತಕ್ಕದು ನಮಗೆಲ್ಲರಿಗೂ ಗೊತ್ತೇಇದೆ. ಎಕ್ಸ್‌ಟೆನ್ಸೀವ್ ಕಲ್ಟಿವೇಷನ್ ಬಗ್ಗೆ ನಮ್ಮ ಸರ್ಕಾರ ಹೆಚ್ಚುಹಣವನ್ನು ಖರ್ಚುಮಾಡಿದೆ. ಆದರೆ ಇಷ್ಟು ಹಣವನ್ನು ಈ ಹಳೇ ವ್ಯವಸಾಯ ಮಾಡತಕ್ಕ ಪದ್ಧತಿಗಾಗಿ ಖರ್ಚುಮಾಡದೆ, ಈ ಹೊಸ ಜಪಾನ್ ಮಾದರಿಯ ವ್ಯವಸಾಯಕ್ಕಾಗಿ ನಮ್ಮ ಸರ್ಕಾರ ಆ ಹಣವನ್ನೆಲ್ಲಾ ಈ ನಾಲ್ಕಾರು ವರ್ಷಗಳಲ್ಲಿ ಖರ್ಚು ಮಾಡಿದ್ದಿದ್ದರೆ, ಅದರಿಂದ ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಆಹಾರ ಬೆಳೆದು, ಇಂದಿನ ಅಭಾವಪರಿಸ್ಥಿತಿ ತಪ್ಪಿ ಹೋಗಲು ಒಂದು ಅವಕಾಶವಾದರೂ ಅಗುತ್ತಿತ್ತೇನೊ ಎಂದು ನನ್ನಗೆನ್ನಿಸುತ್ತಿದೆ. ಈ ಹೊಸ ಮಾದರಿಯ ವ್ಯವಸಾಯಕ್ಕೆ ನಿಗಾಕೊಟ್ಟಿದ್ದರೆ, ಈ ಜಿ. ಎಂ. ಎಫ್. ಯೋಜನೆ, ಪರದೇಶಗಳಿಂದ ಆಹಾರ ಧಾನ್ಯಗಳನ್ನು ತರಿಸಿಕೊಳ್ಳುವುದು ಇತ್ಯಾದಿ ಬಾಬುಗಳಿಗೆ ನಾವು ಖರ್ಚುಮಾಡಿರತಕ್ಕ ಹಣವನ್ನುಳಿಸಬಹುದಾಗಿತ್ತು. ಈ ದೃಷ್ಟಿಯನ್ನೇ ಸರ್ಕಾರದವರು ತಮ್ಮ ಗಮನದಲ್ಲಿಟ್ಟುಕೊಂಡು, ಒಂದು ಸರಿಯಾದ ವ್ಯವಸ್ಥೆ ಮಾಡಿ, ಪ್ರಚಾರನಡೆಸಿ, ಈ ಕಾರ್ಯವನ್ನು ಕೂಡಲೇ ಕೈಕೊಳ್ಳಬೇಕೆಂದು ಒತ್ತಿತಿಳಿಸುವ ಉದ್ದೇಶದಿಂದ ನಾನೀಗ ಈ ಖೋತಾ ಸೂಚನೆಯನ್ನು ಸಭೆಯಮುಂದೆ ತಂದಿದ್ದೇನೆ.

Mr. SPEAKER.—Cut motion moved :

"That the demand be reduced by Rs. 100."

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈಗತಾನೆ ಶ್ರೀಮಾನ್ ಕೆ. ಲಕ್ಕಪ್ಪನವರು ಸಭೆಯ ಮುಂದೆ ಇಟ್ಟಿರತಕ್ಕ ಖೋತಾ ಸೂಚನೆಯನ್ನು ಸಮರ್ಥಿಸುತ್ತ ನಾನು ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಜಪಾನ್‌ದೇಶದ ಮಾದರಿಯ ವ್ಯವಸಾಯ ವಿಧಾನದಲ್ಲಿ ಭತ್ತ ಬೆಳೆಯತಕ್ಕ ಬಗ್ಗೆ ಸರ್ಕಾರದವರು ಪ್ರಯೋಗಾರ್ಥವಾಗಿ ಇದನ್ನು ಜಾರಿಗೆ ತರಬೇಕೆಂಬ ಅಭಿಪ್ರಾಯ ಹೊಂದಿದ್ದಾರೆ. ಆದರೆ ಈ ವಿಚಾರವನ್ನು ಈ ಮಾನ್ಯ ಸಭೆಯ ಸದಸ್ಯರ ಗಮನಕ್ಕಾಗಲಿ ಅಥವಾ ಸಾರ್ವಜನಿಕರ ಗಮನಕ್ಕಾಗಲಿ ಅಷ್ಟರಮಟ್ಟಿಗೆ ಪ್ರಕಟಣೆ ಮಾಡಿರುವುದಿಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ. ಕಳೆದವಾರದ 'ಬಾಂಬೆಕ್ರಾನಿಕಲ್' ಪ್ರತ್ರಿಕೆಯಲ್ಲಿ ಈ ಬಗ್ಗೆ ಕೆಲವು ವಿಚಾರಗಳು ಪ್ರಕಟವಾಗಿವೆ. ಆ ಲೇಖವನ್ನು ಒದಿದ್ದರಲ್ಲಿ ಈ ಪದ್ಧತಿ ಕೂಡ ನಮಗೇನೂ ಅಷ್ಟು ಹೊಸದಲ್ಲ ವೆಂಬುದಾಗಿ ಹೇಳಬಹುದು. ಈ ಚಿತ್ರದಲ್ಲಿ ಕೆಲವು ವಿಚಾರಗಳನ್ನು ಎಂದರೆ, ನಾಟೀ ಮಾಡತಕ್ಕ ಕ್ರಮ, ಬೀಜ ಹಾಕತಕ್ಕ ಕ್ರಮ, ತಳೇ ಕೀಳತಕ್ಕ ಕ್ರಮ ಇತ್ಯಾದಿ ಕೆಲಸಗಳನ್ನು ಒಂದು ಸೈಂಟಿಫಿಕ್ ಆಗಿ ಮಾಡುತ್ತಿರುವುದಾಗಿ ತಿಳಿಸಿದ್ದಾರೆ. ಆದರೆ ಇಂಥ ಸೈಂಟಿಫಿಕ್ ಕೆಲಸಗಳೆಲ್ಲವನ್ನೂ ನಮ್ಮ ಮಲೆನಾಡಿನವರು ಅವರ ಸ್ವಂತ ಅನುಭವದಿಂದಲೇ ಕಂಡು ಕೊಂಡು ಅದನ್ನು ಆಚರಿಸುತ್ತಿದ್ದಾರೆ ಎಂದು ಹೇಳಬಹುದು. ಈ ಸಂದರ್ಭದಲ್ಲಿ ನನಗೆ ಏನು ತೋಚುತ್ತಿದೆಯೆಂದರೆ- ಈ ಹೊಸ ಹೊಸ ಯೋಜನೆಗಳಿಗೇ ನಾವು ಹೆಚ್ಚಿಗೆ ಮಹತ್ವ ಕೊಡುವುದಕ್ಕಿಂತ ಹಣ ಖರ್ಚು ಮಾಡತಕ್ಕದ್ದನ್ನು ಮಿಗಿಸುವುದಕ್ಕೆ ಹೆಚ್ಚಿನ ಮಹತ್ವ ಕೊಡಬೇಕಾದುದು ಒಳ್ಳೆಯದೆಂದು ನನಗೆ ತೋಚುತ್ತದೆ. ಅನೇಕ ಪ್ರಯೋಗ ಕ್ಷೇತ್ರಗಳನ್ನು ಅನೇಕ ಯೋಜನೆಗಳ ಬಗ್ಗೆ ಎಂದರೆ ಈ ಜಿ. ಎಂ. ಎಫ್. ಸ್ಕೀಮು ಇತ್ಯಾದಿಗಳ ಬಗ್ಗೆ ನಾವು ಇಲ್ಲಿಯತನಕ ಏರ್ಪಡಿಸಿಕೊಂಡು ಬಂದಿದ್ದೇವೆ. ಇವುಗಳನ್ನೆಲ್ಲಾ ನೋಡವುದಾದರೆ, ಈಗ ನಮ್ಮ ರೈತರು ಅನುಭವ ಪಡೆದುಕೊಂಡು ಅನುಸರಿಸುತ್ತಾ ಬಂದಿರುವ ಪದ್ಧತಿಯನ್ನೇ ನಾವು ಮುಂದುವರಿಸಿಕೊಂಡು ಹೋದರೆ ಅದರಿಂದಲೇ ನಮಗೆ ಹೆಚ್ಚಿನ ಪ್ರಯೋಜನವಾಗುತ್ತದೆಂದರೆ ಅದು ತಪ್ಪಾಗಲಾರದು. ಬೀಜದ ಭತ್ತ ಕಮ್ಮಿ ಪ್ರಮಾಣದಲ್ಲಿ ಉಪಯೋಗ ಮಾಡತಕ್ಕದ್ದು, ಹೆಚ್ಚು ಬೆಳೆ ಬೆಳೆಯುವಂತೆ ವ್ಯವಸಾಯ ಮಾಡತಕ್ಕ ವಿಧಾನ, ನಾಟೀ ಹಾಕತಕ್ಕ ಕ್ರಮ ಮತ್ತು ಕಳೆ ಕೀಳುವುದನ್ನು ಕಾಲಕ್ಕೆ ಸರಿಯಾಗಿ ಮಾಡಬೇಕೆಂಬ ವಿಚಾರ ಇತ್ಯಾದಿಗಳನ್ನೇ ಇದರಲ್ಲಿ ತಿಳಿಸಲಾಗಿದೆ. ಇದಕ್ಕಿಂತಲೂ ಹೆಚ್ಚಿನ ವಿವರಗಳು ನನಗೆ ದೊರೆತಿಲ್ಲ. ನಾನು ತಿಳಿದುಕೊಂಡಿರುವಂತೆ ಈ ಯೋಜನೆ ಅಷ್ಟರಮಟ್ಟಿಗೆ ಫಲಕಾರಿಯಾಗುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಹಾಗೆ ಸರ್ಕಾರದವರು ಇದನ್ನು ಕೈಕೊಳ್ಳಬೇಕೆಂದು ಇಷ್ಟಪಡುವುದಾದರೆ ಕೆಲವು ಕಡೆಗಳಲ್ಲಿ ಇದನ್ನೇ ಪ್ರಾಯೋಗಿಕವಾಗಿ ಪ್ರಾರಂಭಮಾಡಿ, ಇದು ನಮ್ಮ ರೈತರಪದ್ಧತಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆಂಬುದನ್ನು ನೋಡಿಕೊಂಡು, ಅನಂತರ ಇದನ್ನು ಮುಂದುವರಿಸಿದರೆ ಅನುಕೂಲವಾಗುತ್ತದೆಯೆಂದು ಮಾತ್ರ ಸಲಹೆ ಮಾಡಬಯಸುತ್ತೇನೆ. ಆದುದರಿಂದ ನಾನು ಈ ಬಗ್ಗೆ ಸರ್ಕಾರದವರು ಹೆಚ್ಚಿಗೆ ಹಣವನ್ನು ಖರ್ಚುಮಾಡುವುದು ಅಷ್ಟು ಉಪಯುಕ್ತ ಹಾಗೂ ವಿವೇಕಯುತವಾದ ಮಾರ್ಗವಲ್ಲವೆಂದು ತಿಳಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಈಗ ತಾನೇ ಮಾತನಾಡಿದ ಶ್ರೀಮಾನ್ ಗೋಪಾಲಗೌಡರು ಇಂಥಹೊಸಹೊಸಯೋಜನೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ, ಇದರಿಂದ ಕೇವಲ ಹಣ ಮಾತ್ರ ಖರ್ಚಾಗಲು ಅವಕಾಶವಾಗುತ್ತದೆಯೆಂದು ಹೇಳಿದರು. ಆದರೆ ಈ ಜಪಾನ್ ಪದ್ಧತಿಯಿಂದ ಅವರು ಅಲ್ಲಿ ಹೇಗೆ ಯಾವ ರೀತಿಯಾಗಿ ಉತ್ತಮ ಬೆಳೆಯನ್ನು ತೆಗೆಯುತ್ತಿದ್ದಾರೆಂಬುದನ್ನು ನಾವು ಇಲ್ಲಿಯೂ ಅನುಸರಿಸಿ, ಅದೇ ರೀತಿ ನಡೆದರೆ ಇಲ್ಲಿಯೂ ಕೂಡ ಆ ಉತ್ತಮ ರೀತಿ ಬೆಳೆಯಾಗುತ್ತದೆಯೇ ಎಂಬುದನ್ನು ಪರ್ಯಾಲೋಚನೆ ಮಾಡಬೇಕಾದದ್ದು ಒಂದು ಮುಖ್ಯ ವಿಷಯ. ಮೈಸೂರು ಅಗ್ರಿಕಲ್ ಚರಲ್ ಜರ್ನಲ್ ಎಂಬ ಒಂದು ಪುಸ್ತಕವಿದೆ, ಆ ಪುಸ್ತಕವನ್ನು ಎಲ್ಲಾ ಮಾನ್ಯ ಸದಸ್ಯರೂ ಅಗತ್ಯವಾಗಿ ಓದಬೇಕೆಂದು ಹೇಳುತ್ತೇನೆ. ಅದರಲ್ಲಿ ಬಹಳ ಮಹತ್ವವಾದ ಅನೇಕ ವಿಷಯಗಳಿವೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ನಮ್ಮ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿನವರು ಆ ಬಗ್ಗೆ ಏನಾದರೂ ಪರೀಕ್ಷೆ ಈಗಾಗಲೇ ನಡೆಸಿರುತ್ತಾರೆಯೇ?

ಶ್ರೀ ಎಚ್. ಸಿದ್ಧವೀರಪ್ಪ.—ಇನ್ನೂ ಒಂದು ಮುಖ್ಯವಾದ ವಿಚಾರವೇನೆಂದರೆ, ಈ ಬಗ್ಗೆ ಜನರಿಗೆ ಸಾಕಷ್ಟು ಪ್ರಚಾರಮಾಡಲು ಮತ್ತು ಗ್ರಾಮಾಂತರ ವಾಸಿಗಳಿಗೆಲ್ಲ ಇದರ ಬಗ್ಗೆ ತಿಳುವಳಿಕೆಯುಂಟಾಗುವಂತೆ ಮಾಡಲು ಕನ್ನಡದಲ್ಲಿ ಜಾಹಿರಾತುಗಳನ್ನು ಹೊರಡಿಸಬೇಕೆಂದು ಮನಸ್ಸುಮಾಡಿದ್ದೇವೆ. ಇದನ್ನು ಸದ್ಯದಲ್ಲೇ ಜನರಿಗೆ ಹಂಚಿಸಲಾಗುತ್ತದೆ.

ಶ್ರೀ ಪಿ. ಆರ್. ರಾಮಯ್ಯನವರು ಈ ಬಗ್ಗೆ ವ್ಯವಸಾಯದ ಇಲಾಖೆಯವರು ಏನನ್ನಾದರೂ ಮಾಡಿದ್ದಾರೆಯೇ ಎಂಬುದಾಗಿ ಕೇಳಿದರು. ಆ ಇಲಾಖೆಯವರು ಬೇಕಾದಷ್ಟು ಪ್ರಯತ್ನಗಳನ್ನು ಈಗಾಗಲೇ ಮಾಡಿದ್ದಾರೆ. ಈ ಹೊಸ ಮಾದರಿಯ ವ್ಯವಸಾಯವನ್ನು ಪ್ರಾರಂಭಿಸಲಕ್ಕಾಗಿ 12 ಸಾವಿರ ಪಲ್ಲ ಒಳ್ಳೇ ಬೀಜದ ಭತ್ತವನ್ನು ಶೇಖರಿಸಿಟ್ಟುಕೊಂಡಿದ್ದಾರೆ. ನಾಳೆ ಮುಂಗಾರು ಪ್ರಾರಂಭಕ್ಕೆ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಉದ್ದೇಶಿಸಲಾಗಿದೆ. ಈ ಬೆಳೆಯ ಪ್ರಯೋಗ ನಡೆಸಲು ಅಲ್ಲಲ್ಲೇ ಸರಿಯಾದ ಸ್ಥಳಗಳಲ್ಲಿ 20 ಸಾವಿರ ಎಕರೆ ಜಮೀನನ್ನು ಈ ಜಪಾನ್ ಮಾದರಿ ವ್ಯವಸಾಯಕ್ಕಾಗಿ ಸಿದ್ಧಪಡಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೆ 2000 ಪಲ್ಲ ಸೆಣಬಿನ ಬೀಜ, 2000 ಟನ್ ಸೂಪರ್ ಫಾಸ್ಫೇಟ್ ಮತ್ತು 5000 ಟನ್ ಅಮೋನಿಯ ಸಲ್ಫೇಟ್ ಇಷ್ಟನ್ನು ಶೇಖರಣೆ ಮಾಡಿಕೊಂಡು ಕೆಲಸ ಪ್ರಾರಂಭಿಸಬೇಕೆಂದಿದ್ದೇವೆ. ಹೀಗೆ ಒಂದು ಹೆಚ್ಚಿಗೆ ಗಮನವನ್ನು ಇದಕ್ಕೆ ಕೊಡಲಾಗಿದೆ. ಈ ವ್ಯವಸಾಯವನ್ನು ಸಂಸ್ಥಾನದ ಯಾವ ಯಾವ ಭಾಗದಲ್ಲಿ ಪ್ರಾರಂಭಮಾಡಲಾಗುತ್ತದೆಯೆಂದರೆ, ಮೈಸೂರು ಜಿಲ್ಲೆಯಲ್ಲಿ 5 ಸಾವಿರ ಎಕರೆಗಳು, ಮಂಡ್ಯ ಜಿಲ್ಲೆಯಲ್ಲಿ 7½ ಸಾವಿರ ಎಕರೆಗಳು, ಹಾಸನದಲ್ಲಿ 2 ಸಾವಿರ, ವಾಣೀವಿಲಾಸ ಸಾಗರ 1 ಸಾವಿರ ಎಕರೆಗಳು, ಕಮ್ಯುನಿಟಿ ಪ್ರಾಜೆಕ್ಟ್ ಶಿರಾಳಕೊಪ್ಪದಲ್ಲಿ 1½ ಸಾವಿರ ಎಕರೆಗಳು, ಇಷ್ಟು ಪ್ರದೇಶಗಳಲ್ಲಿ ಈ ವ್ಯವಸಾಯವನ್ನು ಪ್ರಾರಂಭಿಸಬೇಕೆಂದಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಪ್ರಾಯೋಗಿಕವಾಗಿ ಈ ವ್ಯವಸಾಯ ಮಾಡಲು ಮತ್ತು ಈ ಭತ್ತದ ಬೆಳೆಯನ್ನು ಇಡತಕ್ಕ ಬಗ್ಗೆ 500 ಎಕರೆ ಜಮೀನನ್ನು ಗೊತ್ತುಪಡಿಸಿರುತ್ತೇವೆ. ವ್ಯವಸಾಯದ ಇಲಾಖಾ ಫಾರಂನವರ ಮಾರ್ಫತ್ತೂ 159 ಎಕರೆಗಳಲ್ಲಿ ಈ ಭತ್ತ ಬೆಳೆಸಬೇಕೆಂದು ತಿಳಿಸಿದ್ದೇವೆ.

3 P.M.

ಒಟ್ಟಿನಲ್ಲಿ ಇಷ್ಟು ಮಾನ್ಯಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಹೇಳಿದರು, "ಜಪಾನೀ ವ್ಯವಸಾಯ ಪದ್ಧತಿ ನಮಗೇನೂ ಹೊಸದಲ್ಲ" ಎಂದು. ಅದು ಹೊಸದಲ್ಲದಿದ್ದಮೇಲೆ ನಮ್ಮಲ್ಲಿಯೂ ಅದೇ ರೀತಿಯ yield ಏಕೆ ಬರುವುದಿಲ್ಲ ಎಂದು ನಾವು ಕೇಳಬೇಕಾಗುತ್ತದೆ. ಅಲ್ಲದೆ, ನಾನೇ ಮೊನ್ನೆ ಡೆಲ್ಲಿಯಲ್ಲಿ ಇದನ್ನು ಮಾಡಿರುವುದನ್ನು ನೋಡಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಫಿಲ್ಮ್ ಕೂಡ ಇದೆ. ಅದನ್ನು ನೋಡಿದರೆ ನಮ್ಮ ವ್ಯವಸಾಯಕ್ಕೂ ಅವರ ವ್ಯವಸಾಯಕ್ಕೂ ವ್ಯತ್ಯಾಸ ಕಾಣುತ್ತಿದೆ. ನಮ್ಮಲ್ಲಿರುವುದೇ ಒಂದು ರೀತಿ. ಆ ಫಿಲ್ಮ್ ನೋಡಿದರೆ, ಜಪಾನಿನವರು ಎಷ್ಟರ ಮಟ್ಟಿಗೆ ಉತ್ತಮ ರೀತಿಯಲ್ಲಿ ಮಾಡುತ್ತಿದ್ದಾರೆಂಬುದು ಗೊತ್ತಾಗುತ್ತದೆ. ಬೇಕಾದರೆ, experimental ಆಗಿ ತಾವಿಲ್ಲಿ ಇದ್ದ ಹಾಗೆಯೇ ತೋರಿಸಲು ಏರ್ಪಾಡುಮಾಡುತ್ತೇನೆ. ತಾವು ಬರುತ್ತೇವೆನ್ನುವುದಾದರೆ ತಮಗೆ ತೋರಿಸುವುದರಲ್ಲಿ ಅಭ್ಯಂತರವಿಲ್ಲ. ಇದರ ಮೇಲೆ ಮಾನ್ಯ ಸದಸ್ಯರು ಈ ಸೂಚನೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri K. LAKKAPPA.—I beg leave of the House to withdraw my cut motion.

The cut motion was, by leave, withdrawn.

Mr. SPEAKER.—The question is :

"That a sum not exceeding Rs. 50,27,000 be granted to the Government to defray the charges which will come in course of payment during the year ending 31st day of March 1954, in respect of 'Agriculture (except Botanical and other Public Gardens)'."

The motion was adopted.

Mr. SPEAKER.—The House will now rise for lunch and meet again at 3-30.

(*The Assembly adjourned for Lunch at One Minute past Three of the Clock and reassembled at Thirty Minutes past Three of the Clock.*)

(Mr. Speaker in the Chair.)

DEMAND NO. 23—RURAL DEVELOPMENT.

40-A. RURAL DEVELOPMENT.

Mr. SPEAKER.—Motion moved :

"That a sum not exceeding Rs. 31,52,000 be granted to the Government to defary the charges

which will come in course of payment during the year ending 31st day of March 1954, in respect of 'Rural Development'."

Construction of an I. V. C. Road between Chinkurli and Melkote.

Sri B. Y. NEELE GOWDA (Pandavapura) :—Sir, I beg to move :

> "That the Demand under the head '40-A. Rural Development' for Rs. 31,52,000 be reduced by Rs. 100 (to raise a debate on the need for construction of inter-village road between Chinakenhalli village and Melkote)."

ಇದರ ಅವಶ್ಯಕತೆಯನ್ನು ವಿವರಿಸುವುದಕ್ಕೆ ಮೊದಲು ಈ ಸೂಚನೆಯಲ್ಲಿ ಒಂದು ಪದ ತಪ್ಪಾಗಿ ಮುದ್ರಿತವಾಗಿರುವುದನ್ನು ತಿಳಿಸಬಯಸುತ್ತೇನೆ. ಇಲ್ಲಿ ಚಿನಕೇನಹಳ್ಳಿ ಎಂದಿದೆ ಇದು ಚಿನಕುರಳಿ ಎಂದಿರಬೇಕಾಗಿತ್ತು ಈ ತಪ್ಪಿಗಾಗಿ ಕಾರ್ಯದರ್ಶಿಯವರೇನೂ ವ್ಯಥೆಪಟ್ಟುಕೊಳ್ಳಬೇಕಾಗಿಲ್ಲ. ಅದಕ್ಕೆ ನಾನೇ ಬಹಳ ಜವಾಬ್ದಾರನೆಂದು ಕಾಣುತ್ತದೆ.

ಸ್ವಾಮಿ, ಚಿನಕುರಳಿ ಮತ್ತು ಮೇಲುಕೋಟೆ–ಇವೆರಡು ಊರುಗಳನ್ನು ಸೇರಿಸುವ ರಸ್ತೆ ಚಿನಕುರಳಿ ಹೋಬಳಿ, ಮತ್ತು ಮೇಲುಕೋಟೆ ಹೋಬಳಿಗಳಿಗೆ ಸೇರಿದ ಹಾಗೂ ಪಾಂಡವಪುರಕ್ಕೆ ಸೇರಿದ ಸುಮಾರು 20 ಹಳ್ಳಿಗಳಿಗೆ ಅವಶ್ಯಕವಾದ ರಸ್ತೆಯಾಗಿದೆ. ಪಾಂಡವಪುರದ ಕೆಲವು ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿಯಿದೆಯೆಂಬದನ್ನು ಮಾನ್ಯ ಮಂತ್ರಿಗಳೂ ಸಹ ಒಪ್ಪಿಕೊಂಡಿದ್ದಾರೆ. ಅದೇ ಭಾಗವೇ ಇದು. ಮೇಲುಕೋಟೆ ಒಂದು ಯಾತ್ರಾಸ್ಥಳ ಮತ್ತು ಪುಣ್ಯಸ್ಥಳವೆಂಬುದು ಗೊತ್ತಿದೆ. ಅಲ್ಲಿಗೆ ಹೋಗಿಬರುವವರು ಜಾಸ್ತಿ. ಅಷ್ಟೇ ಅಲ್ಲದೆ ಅಲ್ಲಿನ ಅನೇಕ ಗ್ರಾಮಗಳು ಕ್ಷಾಮ ಪರಿಸ್ಥಿತಿಗೆ ಈಡಾಗಿರುವುದರಿಂದ, ಜನರು ಕೇವಲ ವ್ಯವಸಾಯದಿಂದಲೇ ಜೀವನಮಾಡುವುದು ಕಷ್ಟವಾಗಿದೆ. ವ್ಯವಸಾಯದ ಜೊತೆಗೆ ಅರ್ಧ ಎಕರೆ ಪ್ರದೇಶದಲ್ಲಿ ತರಕಾರಿ ಬೆಳೆದುಕೊಂಡು ಜೀವನ ನಡೆಸಬೇಕಾಗಿದೆ. ಆದರೆ ಬೆಳೆದ ತರಕಾರಿಯನ್ನು ಮಾರಲಿಕ್ಕೆ ಮೈಸೂರಿಗೇ ಹೋಗಬೇಕು, ಬೇರೆ ಕಡೆಯಲ್ಲಿ ಮಾರುವುದಕ್ಕೆ ಅವಕಾಶವಿಲ್ಲ. ಹೀಗಿರುವಾಗ ಅವರಿಗೆ ಗಾಡಿ ಸಂಚಾರಕ್ಕೆ ತಕ್ಕುದಾದ ಯಾವ ರಸ್ತೆಯೂ ಅಲ್ಲಿಲ್ಲದೆ 6-7 ಮೈಲಿಗಳ ದೂರ ತರಕಾರಿ ಹೊರೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಬೇಕಾಗಿದೆ. ಆದ್ದರಿಂದ ಈ ರೈತಾಪಿ ಜನರ ಹಿತ ದೃಷ್ಟಿಯಿಂದ ಈ ರಸ್ತೆಯನ್ನು ಮಾಡಿಸಿಕೊಡುವುದರ ಅವಶ್ಯಕತೆ ಅತ್ಯಗತ್ಯವಾಗಿದೆ. ಈ ರಸ್ತೆಯನ್ನು ಎಸ್ಟಿಮೇಟ್ ಮಾಡಿಸಿಯೂ ಸುಮಾರು 3 ವರ್ಷಗಳ ಮೇಲಾಗಿದೆ. ಮೊದಲು 20,000 ರೂಪಾಯಿಗಳಿಗೆ ಮಾಡಿದ ಈ ಅಂದಾಜಿನಲ್ಲಿ ಮೊಹರಿಗಳಿಗೆ ಅವಕಾಶ ಮಾಡಿರಲಿಲ್ಲವೆಂದು ವಾಪಸಾಯಿತು. ಅದರ ಮೇಲೆ ಮೊಹರಿಗಳಿಗೂ ಏರ್ಪಾಡುಮಾಡಿ ಪುನಃ ಒಂದು ಅಂದಾಜನ್ನು ತಯಾರುಮಾಡಿದ್ದರೆಂದು ಗೊತ್ತಾಗಿದೆ. ಇದಾಗಲೇ ಸರ್ಕಾರಕ್ಕೆ ಬಂದು ನಾಲ್ಕೈದು ತಿಂಗಳಾಗಿದೆಯೆಂದು ತಿಳಿದು ಬಂದಿದೆ. ಸ್ವಲ್ಪ ಹೆಚ್ಚು ಹಣವಾದರೂ ಯೋಚನೆಮಾಡದೆ, ಸರ್ಕಾರದವರು ಉದಾರ ಮನಸ್ಸುಮಾಡಿ ಈ ವರ್ಷವೇ ಇದನ್ನು ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—Cut motion moved :

> "That the demand be reduced by Rs. 100."

Sri T. CHANNIAH (Minister for Public Health and Local Self-Government).—My friend Sri Neele Gowda has pointed out that an estimate for opening an inter-village communication road from Chinkurli to Melkote at a cost of Rs. 20,000 has been prepared. It is true that a resolution was passed in the District Development Committee on the 6th February 1952 in this connection and the estimate was thereupon prepared. This road connects about 12 villages. An enquiry is being made to find out whether the Village Panchayets of the villages which benefit by this road can make any contributions by way of money or labour. I assure the Hon'ble Member that the matter will be pursued and action taken as expeditiously as possible. With this assurance, I request the Hon'ble mover of the cut motion to kindly withdraw it.

ಶ್ರೀ ಬಿ. ವೈ. ನೀರೇಗೌಡ.—ಈ ಭರವಸೆಯ ಮೇಲೆ, ನಾನು ನನ್ನ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The cut motion was, by leave, withdrawn.

Construction of an I.V.C. Road between Krishnarajpet and Sravanabelagola via *Koratikere.*

Sri S. M. LINGAPPA (Krishnarajpet).—I beg to move :

> "That the demand under the head '40-A. Rural Development' for Rs. 31,52,000 be reduced by Rs. 100 (To raise a debate on the necessity of laying out an Inter-Village Communication Road between Krishnarajpet *via* Koratikere."

ಸ್ವಾಮಿ, ಈಗ ನಾನು ಈ ನಿರ್ಣಯದಲ್ಲಿ ಸೂಚಿಸಿರ ತಕ್ಕ ಪ್ರದೇಶದಲ್ಲಿ ಸುಮಾರು 20 ಗ್ರಾಮಗಳು ಸೇರಿವೆ. ಇವುಗಳ ಜನಸಂಖ್ಯೆ 10-12 ಸಾವಿರಕ್ಕೂ ಮೀರಿದೆ.

(ಶ್ರೀ ಎಸ್. ಎಂ. ಲಿಂಗಪ್ಪ.)

ಈ ಪ್ರದೇಶ ತಾಲ್ಲೂಕು ಕೇಂದ್ರ ಹಾಗೂ ವೈದ್ಯಕೀಯ ಸಹಾಯವಿರತಕ್ಕ ಕೃಷ್ಣರಾಜ ಪೇಟೆ ಮತ್ತು ಶ್ರವಣ ಬೆಳಗೊಳಗಳಿಗೆ ಮಧ್ಯದಲ್ಲಿರತಕ್ಕ ಗ್ರಾಮಗಳಾಗಿವೆ. ಅವರು ಯಾವ ವೈದ್ಯಕೀಯ ಸಹಾಯಕ್ಕಾದರೂ ಈ ಊರುಗಳಿಗೇ ಹೋಗಬೇಕು. ಅಲ್ಲದೆ, ನನ್ನ ಮಿತ್ರ ರಾದ ನೀಲೇಗೌಡರು ತಮ್ಮ ಖೋತಾ ನಿರ್ಣಯವನ್ನು ಮಂಡಿಸುತ್ತಾ ದೇಶದಲ್ಲಿ ಇಂದು ಕ್ಷಾಮಕ್ಕೆ ಗುರಿಯಾಗಿರ ತಕ್ಕ ಪ್ರದೇಶಗಳೆಂದು ಯಾವುದನ್ನು ಹೇಳಿದರೋ ಅದ ರಲ್ಲಿ ಈ ಪ್ರದೇಶವೂ ಒಂದು ಎಂದು ನಾನು ಹೇಳಬಯ ಸುತ್ತೇನೆ. ಇಲ್ಲಿಯೂ ಕೂಡ ರೈತರು ಅಲ್ಲಲ್ಲೇ ಸಣ್ಣ ತೋಟಗಳನ್ನು ಮಾಡಿಕೊಂಡು ತರಕಾರಿ ಬೆಳೆಯನ್ನು ಮಾಡಿ ಅವುಗಳನ್ನು ಪಟ್ಟಣಗಳಿಗೆ ತೆಗೆದುಕೊಂಡು ಹೋಗಿ ಮಾರುವುದರ ಮೂಲಕ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇದಕ್ಕಾಗಿ ಈ ಪ್ರದೇಶದಲ್ಲಿ ಒಂದು ರಸ್ತೆಯ ಅವಶ್ಯಕತೆಯಿದೆಯೆಂದು ಈಗ ಹತ್ತಾರು ವರ್ಷ ಗಳಿಂದಲೂ ಸರ್ಕಾರದವರ ಗಮನಕ್ಕೆ ತಂದರೂ ಕೂಡ 'ಮಾಡಿಸಿಕೊಡುತ್ತೇವೆ, ಮಾಡಿಸಿಕೊಡುತ್ತೇವೆ' ಎಂದು ಭರವಸೆ ನೀಡುವುದರಲ್ಲೇ ಇಲ್ಲಿಯ ತನಕ ಬಂದಿದೆಯೇ ಹೊರತು ಮತ್ತೇನೂ ಮಾಡಿಲ್ಲ. ಆದಕ್ಕಾಗಿ ಹಿಂದೆಯೇ ಒಂದು ಅಂದಾಜು ಕೂಡ ತಯಾರಾಗಿ ಅದನ್ನು ಸರ್ಕಾ ರದ ಮಂಜೂರಾತಿಗೆ ಕಳುಹಿಸಲಾಗಿದೆಯೆಂದು ತಿಳಿದಿ ದ್ದೇನೆ. ಆದರೆ ಸರ್ಕಾರದವರು ಈ ತಹಲುವರೆಗೂ ಅದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಆ ಪ್ರದೇಶದ ರೈತಾಪಿ ಜನರಲ್ಲಿ, ನಮ್ಮ ಜನತಾ ಸರ್ಕಾರ ನಮ್ಮ ಆಶೋತ್ತರಗಳನ್ನು ಬೇಗ ಬೇಗನೆ ಈಡೇರಿಸಿಕೊಡುತ್ತದೆಂಬ ಒಂದು ಭಾವನೆ ಮೂಡಿತ್ತು. ಈಚೆಗೆ ಆ ಪ್ರದೇಶಕ್ಕೆ ಮಂತ್ರಿಗಳು ಬಂದಾಗ ಕೂಡ ಅದನ್ನು ಮಾಡಿಕೊಡುವುದಾಗಿ ಭರವಸೆ ಕೊಟ್ಟರೂ ಇದುವರೆಗೂ ಮಾಡದಿರುವುದನ್ನು ನೋಡಿ, ಹಿಂದೆ ಬ್ರಿಟಿಷರು ನಮ್ಮ ದೇಶವನ್ನು ಆಳುತ್ತಿದ್ದಾಗ ಹಳ್ಳಿಗಾಡಿನ ರೈತಾಪಿ ಜನರ ವಿಷಯದಲ್ಲಿ ಯಾವ ಉಪೇಕ್ಷೆಯನ್ನಿಟ್ಟುಕೊಂಡಿದ್ದರೋ ಅದೇ ರೀತಿಯ ಉಪೇಕ್ಷಾಮನೋಭಾವನೆ ನಮ್ಮ ಜನತಾ ಸರ್ಕಾರ ದಲ್ಲಿಯೂ ತುಂಬಿದೆಯೆಂಬ ಭಾವನೆ ಮೂಡುತ್ತಿದೆ. ಅಂಥ ಭಾವನೆ ಬರುವುದಕ್ಕೆ ನಮ್ಮ ಜನತಾ ಸರ್ಕಾರ ಅವ ಕಾಶಕೊಡುವುದು ಸೂಕ್ತವಲ್ಲ. ಆದ್ದರಿಂದ ಈ ರಸ್ತೆಯ ನಿರ್ಮಾಣದ ಕಾರ್ಯವನ್ನು ಕೂಡಲೆ ಕೈಕೊಳ್ಳಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಒತ್ತಾಯಪಡಿಸು ತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

Sri T. CHANNIAH (Minister for Public Health and Local Self-Government).—Sir, the Hon'ble mover of the cut motion urged the necessity for forming an inter-village road from Krishnarajpet to Sravanabelagola *via* Koratikere. I wish to point out to my friend that there is already a road from Krishnarajpet to Sravanbelagola *via* Kikkeri and Chennarayapatna. There is also a proposal to improve the road from Krishnarajpet to Sravanabelagola *via* Krishnarajapura and it is under the consideration of Government. The necessity for the road now suggested by the Hon'ble member will be examined.

Sri S. M. LINGAPPA.—I seek leave to withdraw my cut motion.

The cut motion was, by leave, withdrawn.

Mr. SPEAKER.—The next cut motion stands in the name of Sri Shivarudrappa. I think in the interests of the others he may not move the cut motion.

ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ—ಹೆಗ್ಗಡದೇವನಕೋಟೆ).—ನಾನು ಬೇರೊಂದು ನಿರ್ಣ ಯವನ್ನು ಕಳುಹಿಸಿದ್ದೆ. ಅದನ್ನು ಈ 'ಹೆಡ್' ನಲ್ಲಿ ತೆಗೆದುಕೊಳ್ಳುವುದಾಗಿ ಅಧ್ಯಕ್ಷರು ಹೇಳಿದ್ದರು. ಆದುದ ರಿಂದ ಅದನ್ನು ಈಗ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—At the end you may take a chance of speaking.

The next cut motion. It stands in the name of Sri Madiah. He has got two cut motions. He may select one of them. I think the second one is wide enough.

Schemes for the Advancement of the Scheduled Castes.

ಶ್ರೀ ಎಂ. ಮಾದಯ್ಯ (ನಂಜನಗೂಡು-ಅನುಸೂಚಿ ಜಾತಿಗಳು).—ನನ್ನ ಖೋತಾ ನಿರ್ಣಯ ಹೀಗಿದೆ :—

"40-A ಗ್ರಾಮಾಭಿವೃದ್ಧಿ (ಅಭಿವೃದ್ಧಿ ಯೋಜನೆಗಳು) 6, ಷೆಡ್ಯೂಲ್ಡ್ ಪಂಗಡಗಳಿಗೆ ಸೇರಿದವರ ಮತ್ತು ಆ ಬುಡಕಟ್ಟಿನ ಅಭಿವೃದ್ಧಿ ಯೋಜನೆಗಳು" ಎಂಬ ಬಾಬಿನಲ್ಲಿ ಕೋರಿರತಕ್ಕ 2,00,000 ರೂಪಾಯಿಗಳ 'ಡಿಮ್ಯಾಂಡ್' ಮನ ವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆಮಾಡಬೇಕು. (ಸಂಸ್ಥಾನದ ಷೆಡ್ಯೂಲ್ಡ್ ಪಂಗಡಗಳಿಗೆ ಸೇರಿದವರ ಅಭಿವೃದ್ಧಿಗೂ, ಆ ಜನ ಗಳಿಗೆ ಸಾಮಾಜಕ, ಆರ್ಥಿಕ, ವಿದ್ಯಾರ್ಜನೆ ಮೊದ ಲಾದ ವಿಷಯಗಳಲ್ಲಿ ಅವರಿಗೆ ನ್ಯಾಯವಾಗಿ ಸಲ್ಲ ಬೇಕಾದುದನ್ನು ಒದಗಿಸಿಕೊಡುವುದಕ್ಕೂ ತಮ್ಮ ಕೈಲಾದ ಮಟ್ಟಿಗೂ ಸಹಾಯ ಮಾಡಬೇಕೆಂದು ಸರ್ಕಾರದವರಿಗೆ ಒತ್ತಿ ಹೇಳುವುದಕ್ಕಾಗಿ).

ಸ್ವಾಮಿ,ನಿಮ್ಮ ತರಗತಿಯವರ ಅಭಿವೃದ್ಧಿಗೆ ಸಂಬಂಧ ಪಟ್ಟ ವಿಚಾರ ನಮ್ಮ ಮಂತ್ರಿ ಮಂಡಲದಲ್ಲಿ ಮುಖ್ಯ ಮಂತ್ರಿಗಳಿಗೆ ಸೇರಿದೆ. ಈಗ ಅವರು ಸಭೆಯಲ್ಲಿ ಹಾಜ ರಿಲ್ಲ, ಒಟ್ಟು ಜವಾಬ್ದಾರಿಯುಳ್ಳ ಮಂತ್ರಿ ಮಂಡಲದಲ್ಲಿ ಯಾರೇ ಇದ್ದರೂ ಒಂದೇ ಆದರೂ ಅವರಿದ್ದಿದ್ದರೆ ಚೆನ್ನಾಗಿತ್ತೆಂದು ಆಶಿಸುತ್ತೇನೆ.

ಸ್ವಾಮಿ, ನನ್ನ ಜೊತೆಗೆ ಸೂಚನೆಯಲ್ಲಿ ಕೇಳಿರುವುದು, ನಿಮ್ನ ತರಗತಿಯವರಿಗೆ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಅವರ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರದವರು ಮಾಡಬೇಕಾದುವನ್ನೆಲ್ಲಾ ಮಾಡಬೇಕೆಂಬುದು. ಇದನ್ನು ಒತ್ತಾಯ ಪಡಿಸುವುದಕ್ಕಾಗಿ ಈ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇನೆ. ಯಾವ ಸರ್ಕಾರವೇ ಆಗಲಿ ಈ ವಿಷಯದಲ್ಲಿ ಪ್ಲಾನಿಂಗ್ ಕಮಿಷನ್ ತಯಾರಿಸಿರತಕ್ಕ ಪಂಚವಾರ್ಷಿಕ ಯೋಜನೆಯ ಪ್ರಕಾರ ಕೆಲಸ ಮಾಡಬೇಕಾಗಿದೆ. ಈ ವಿಷಯ ಅವರ ಕಾರ್ಯಕ್ಷೇತ್ರಕ್ಕೊಳಪಟ್ಟಿರಬೇಕೆಂದು ಕಾಣುತ್ತದೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬೇಕಾಗಿದೆ. ಹರಿಜನರ ವಿಷಯದಲ್ಲಿ ನಾವೇನಾದರೂ ಹೇಳಿದರೆ ಈ ಶಾಸನ ಸಭೆಗಳಲ್ಲಿ ಯಾವ ಯಾವ ಕಾಲದಲ್ಲಿ ಏನೇನು ವಿಷಯಗಳನ್ನು ಹೇಳುತ್ತೇವೆಂಬುದನ್ನು ಪರಿಶೀಲಿಸಿ ಎಲ್ಲವನ್ನೂ ಕ್ರೋಢೀಕರಿಸಿ ಕಾರ್ಯರೂಪಕ್ಕೆ ತರತಕ್ಕದ್ದು ಮುಖ್ಯ ವಿಷಯ. ಇದಕ್ಕಾಗಿ ಒಬ್ಬ ಸ್ಪೆಷಲ್ ಆಫೀಸರು ಬೇಕಾಗುತ್ತದೆಂದು ಹೇಳುತ್ತೇನೆ. ಕಳೆದ ಒಂದು ದಶವರ್ಷದಿಂದ ಶಾಸನ ಸಭೆಗಳಲ್ಲಿ ನಿಮ್ನ ತರಗತಿಗಳ ಅಭಿವೃದ್ಧಿಯ ವಿಷಯದಲ್ಲಿ ಅನೇಕ ವಿಚಾರಗಳನ್ನು ಹೇಳುತ್ತಿದ್ದೇವೆ. ಸರ್ಕಾರದವರೂ ಮಾಡುವುದನ್ನು ಮಾಡುತ್ತಿದ್ದಾರೆ. ಆದರೆ ನಾವು ಏನೇನು ಹೇಳುತ್ತಿದ್ದೇವೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಸರಿಯಾಗಿ ಕಾರ್ಯಗತ ಮಾಡಬೇಕು. ಯಾವುದಾದರೂ ಒಂದು ವ್ಯಾಧಿಗೆ ಔಷಧಕೊಡುವುದಕ್ಕಿಂತ ಮುಂಚೆ ಸರಿಯಾಗಿ ವ್ಯಾಧಿಯನ್ನು ಡಯಾಗ್ನೋಸ್ ಮಾಡಿ ಔಷಧ ಕೊಡದಿದ್ದರೆ ಕೊಡತಕ್ಕ ಔಷಧದಿಂದ ವ್ಯಾಧಿ ಪರಿಹಾರವಾಗುವುದಿಲ್ಲ. ಇದನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ರಚನಾತ್ಮಕ ಸಲಹೆಯನ್ನು ಕೊಡುತ್ತಿದ್ದೇನೆ. ಸರ್ಕಾರದವರು ಮಾಡಬೇಕಾದುದನ್ನೆಲ್ಲಾ ಮಾಡಬೇಕೆಂದು ಕೇಳಿದ್ದೇನೆ. ಕಳೆದ ತಲೆಮಾರಿನಿಂದಲೂ ಈ ನಿಮ್ನ ತರಗತಿಯ ಅಭಿವೃದ್ಧಿ ಕೆಲಸಗಳಿಗೇ ಒಬ್ಬರು ಮೊಖ್ತೇಸರರು ಬೇಕೆಂದು ಕೇಳುತ್ತಿದ್ದೇವೆ. ಈ ಹೊತ್ತು ನಿಮ್ನ ತರಗತಿಗಳ ವಿಷಯದಲ್ಲಿ ಭಾರತ ರಾಜ್ಯಾಂಗದಲ್ಲಿ ಏನೇನು ಬರೆದಿದ್ದಾರೋ ಅವುಗಳನ್ನೆಲ್ಲಾ ಮೈಸೂರಿನ ಪ್ರತಿನಿಧಿಗಳಾದ ನಾವು ಮೊದಲಿನಿಂದಲೂ ಕೇಳುತ್ತಿದ್ದೇವೆಂದು ಹೇಳಿದರೆ ತಪ್ಪಾಗಲಾರದು. ನಾವು ಹೇಳಿದುದನ್ನು ಇತರ ಪ್ರಾಂತಗಳವರು ಕಾಪಿಮಾಡಿಕೊಂಡಿದ್ದಾರೆಂದು ಮನವಿ ಮಾಡುತ್ತೇನೆ. ಸ್ಪೆಷಲ್ ಅಧಿಕಾರಿಗಳನ್ನು ನೇಮಕಮಾಡಬೇಕೆಂದು ಕೇಳುತ್ತಿದ್ದೇವೆ. ಅವರು ಇತರ ಹಿಂದುಳಿದ ಪಂಗಡದವರ ಕೆಲಸಗಳನ್ನೂ ಮಾಡಬಹುದು. ಒಬ್ಬರು ಅಧಿಕಾರಗಳನ್ನು ಈ ಮಟ್ಟದಲ್ಲಿ ನಿಯಮಿಸಬೇಕೆಂದು ಕಳೆದ ಡಿಪ್ರೆಸ್ಡ್ ಕ್ಲಾಸ್ ಪಾಲಿಸಿ ಸಮಿತಿಯಲ್ಲಿಯೂ ಹೇಳಿದೆವು. ಆ ಸಮಿತಿಗೆ ಮುಖ್ಯ ಮಂತ್ರಿಗಳು ಅಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಮಂತ್ರಿಗಳು ಉಪಾಧ್ಯಕ್ಷರು. ಇವರೆಲ್ಲರೂ ಆ ಪ್ರಮುಖ ಸಭೆಯಲ್ಲಿ ಒಪ್ಪಿದರೂ ಇನ್ನೂ ಇದನ್ನು ಕಾರ್ಯರೂಪಕ್ಕೆ ತಾರದೇಯಿರುವುದನ್ನು ನೋಡಿದರೆ, ಅಷ್ಟು ಉತ್ಸಾಹಜನಕವಾಗಿಲ್ಲ. ನಾವು ಏನೇನು ಸಲಹೆಗಳನ್ನು ಕೊಟ್ಟಿದ್ದೇವೆಯೋ ಅವೆಲ್ಲವನ್ನೂ ಕಾರ್ಯಗತಮಾಡಿದರೆ ದೇಶದ ಪ್ರಗತಿ ನಾಗಾಲೋಟದಿಂದ ಹೋಗುತ್ತದೆ. ಇದನ್ನು ಮಾಡದಿದ್ದರೆ ನಾವು ನಿರೀಕ್ಷಿಸಿದಷ್ಟು ಕೆಲಸವಾಗುವುದಿಲ್ಲವೆಂಬುದನ್ನು ಸರ್ಕಾರದವರು ಅರಿಯಬೇಕು.

ಸಾಮಾಜಿಕ ಅಭಿವೃದ್ಧಿಯ ವಿಚಾರದಲ್ಲಿ ಅನುಕೂಲ ಮಾಡಬೇಕೆಂದು ಕೇಳಿದ್ದೇನೆ. ರಾಜ್ಯಾಂಗದ ಪ್ರಕಾರ ಜನ ಜೀವನದಲ್ಲಿ, ನಿತ್ಯ ಜೀವನದಲ್ಲಿ, ಸಮಾಜದಲ್ಲಿ ಕೆಲವು ನ್ಯೂನತೆಗಳಿರುವುದು ತೊಡೆದು ಹೋಗಿವೆಯೆ ಎಂಬುದನ್ನು ನೋಡಬೇಕು. ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನು ಮಾಡಿದ್ದಾರೆಂಬುದನ್ನು ಪ್ರಶ್ನೆಮಾಡಬೇಕಾಗಿದೆ. ಇವರ ಅಭಿವೃದ್ಧಿಗೆ ಸಂಬಂಧಪಟ್ಟ ಸಲಹೆಗಳನ್ನು ಕೇಳಬೇಕೆಂದು ರೆವಿನ್ಯೂ ಕಮಿಷನರನ್ನು ನೇಮಿಸಿದ್ದಾರೆ. ಆದರೆ ಅವರ ಬಾಕಿ ಕೆಲಸಗಳ ಜೊತೆಗೆ ಇದನ್ನೂ ನೋಡುವುದಕ್ಕಾಗುವುದಿಲ್ಲ. ಆಯಾ ಜಿಲ್ಲಾ ಡೆಪ್ಯುಟಿ ಕಮೀಷನರು ಕಳುಹಿಸುವ ಸಲಹೆಗಳು ವಿನಾ ಇನ್ನಾವ ವಿಚಾರದಲ್ಲಿಯೂ ಅವರು ಯೋಚನೆಮಾಡುವುದಿಲ್ಲ. ಹೀಗೆ ಮಾಡಲು ಅವರಿಗೆ ಕಾಲವೂ ಇರುವುದಿಲ್ಲ. ಇವನ್ನು ಗಮನಿಸಬೇಕಾದುದು ಸರ್ಕಾರದ ಮುಖ್ಯ ಕರ್ತವ್ಯ.

ಹೌಸಿಂಗ್ ಸ್ಕೀಂ ವಿಚಾರವನ್ನು ನಾನು ಹತ್ತು ವರ್ಷದಿಂದಲೂ ಹೇಳುತ್ತಿದ್ದೇನೆ. 1945 ನೆಯ ಇಸವಿ ಜನವರಿಯಲ್ಲಿ ಈ ಯೋಜನೆಯನ್ನು ಸರ್ಕಾರ ಮಂಜೂರುಮಾಡಿತು. ಡಿಪ್ರೆಸ್ಡ್ ಕ್ಲಾಸ್ ಸ್ಕೀಂ ಎಂದು ಅವರ ಅಭಿವೃದ್ಧಿಗಾಗಿ ಆಲೋಚಿಸಿದೆ. ಮಾನ್ಯ ಸಭೆಗೆ ಇದು ಮುಖ್ಯ ವಿಚಾರವೆಂದು ಹೇಳಿದರೆ ತಪ್ಪಲ್ಲ, ಈ ದಿವಸ ನಿಮ್ನ ವರ್ಗದವರ ಮನೆ ವಸತಿಗೆ ಬಡ್ಜೆಟ್ಟಿನಲ್ಲಿ ಒದಗಿಸಿರುವ 19 ಲಕ್ಷ ರೂಪಾಯಿಗಳು ಅವರ ಸಮಸ್ತ ಅಭಿವೃದ್ಧಿಗೂ ಸಾಕೇ ಎಂಬುದನ್ನು ಯೋಚಿಸಬೇಕು. ಸರ್ಕಾರದವರು ಕಮಿಷನ್ ಒಂದು ಏರ್ಪಾಡು ಮಾಡುವುದು ಅತ್ಯಾವಶ್ಯಕವಾಗಿದೆ. ಹೌಸಿಂಗ್ ಸ್ಕೀಮಿನಲ್ಲಿ ಮೈಸೂರಿನಲ್ಲಿ ಕೆಲವು ಬಾಬುಗಳನ್ನು ಬಿಟ್ಟಿದ್ದಾರೆ. ಆರ್ಥಿಕ ವಿಚಾರ ಹೇಳುವುದಾದರೆ, ಲ್ಯಾಂಡ್ ರೆವಿನ್ಯೂ ನೀತಿ ಮತ್ತು ಗೃಹ ಕೈಗಾರಿಕೆ ವಗೈರೆಗಳಲ್ಲಿ ಹೇಳಿರುವುದನ್ನು ಕಾರ್ಯರೂಪಕ್ಕೆ ತರುವುದಕ್ಕೆ, ಪ್ರತಿಯೊಂದು ಬಾಬಿನಲ್ಲೂ ಅಭಿವೃದ್ಧಿಪಡಿಸುವುದಕ್ಕೆ, ಪಾಂಚವಾರ್ಷಿಕ ಯೋಜನೆಯಲ್ಲಿ ಹಿಂದುಳಿದ ಪಂಗಡದವರನ್ನು ಎಲ್ಲರ ಮಟ್ಟಕ್ಕೆ ತರಲು ಏನು ಖರ್ಚು ಮಾಡುತ್ತೇವೆಂದು ಇಡೀ ಸಂಸ್ಥಾನಕ್ಕೆ ಅನ್ವಯಿಸುವಂತೆ ಯಾವ ರೀತಿ ಹೇಳಿದೆಯೋ ಅದನ್ನು ಪ್ರತಿಯೊಂದು ಬಾಬಿನಲ್ಲೂ ಯಾವ ರೀತಿಯಾಗಿ ಮಾಡಬೇಕೆಂದು ಯೋಚನೆ ಮಾಡಬೇಕಾದದ್ದು ಅತ್ಯಾವಶ್ಯಕ. ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಬೇಕಾದರೆ ಅವರಿಗೆ ಬೇಕಾದಷ್ಟು ಸಹಾಯ ಕೊಡಬೇಕು, ಜಮೀನನ್ನು ವಿಶಾಲವಾಗಿ ಕೊಡಬೇಕು. ಮುಖ್ಯವಾಗಿ, ಒಂದು ಸುವ್ಯವಸ್ಥೆ ಮಾಡಿ ಮೈಸೂರು ಸಂಸ್ಥಾನದಲ್ಲಿರುವ 25-30 ಲಕ್ಷ ಎಕರೆ ಜಮೀನನ್ನು ಕೊಡುವುದಕ್ಕೆ ಅವಕಾಶಮಾಡಿಲ್ಲವೆಂದು ಹೇಳುತ್ತೇನೆ. ಅವರಿಗೆ ತಕಾವಿ ಸಾಲಕೊಡಬೇಕು, ಕಂತುಸಾಲ, ಉಚಿತ ಗೊಬ್ಬರ, ಹಣ, ಬೀಜ, ಎತ್ತುಗಳು ವಗೈರೆ ಕೊಡಬೇಕು. ಆಹಾರ ಪದಾರ್ಥ ಬೆಳೆಯುವ ಯೋಜನೆಯ ಅಂಕಿ ಅಂಶ ನೋಡಿದರೆ, ಆಹಾರ ಧಾನ್ಯ ಹೆಚ್ಚಾಗಿ ಬೆಳೆಯ ಬೇಕಾದದ್ದು ಅತ್ಯಗತ್ಯವೆಂದು ಕಾಣುವಾಗ, ರೈತರಿಗೆ ಎಲ್ಲ ಸೌಕರ್ಯವನ್ನೂ ಒದಗಿಸಬೇಕು. ಇದರಲ್ಲಿ ತಪ್ಪೇನೂ ಇಲ್ಲ.

Mr. SPEAKER.—I would like to bring to your notice, for your consideration, that it is highly doubtful whether this cut motion falls under this Demand in the first place. Secondly on other two occasions you have spoken on this very subject. If you kindly mention some points, that will do. Let others also have a chance.

(MR. SPEAKER.)

ಶ್ರೀ ಎಂ. ಮಾದಯ್ಯ.—ಆರ್ಥಿಕಾಭಿವೃದ್ಧಿಗಾಗಿ ಅವರಿಗೆ ನಾನಾ ವಿಧವಾದ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕು, ಈ ಸೌಕರ್ಯ ಕಲ್ಪಿಸಿಕೊಡುವಾಗ ಗ್ರ್ಯಾಂಟು ಕೊಡಬೇಕು ಮತ್ತು ಕೋ ಆಪರೇಟಿವ್ ಫಾರ್ಮಿಂಗ್ ಯೋಜನೆ ಹೆಚ್ಚಾಗಿ ಏರ್ಪಡಿಸುವುದಕ್ಕೆ ಅವಕಾಶ ಮಾಡಬೇಕು. ಸೊಸೈಟಿಗಳನ್ನು ಮಾಡಬೇಕು. 'Rural Indebtedness' ಸಾಲದ ಹೊರೆ ಯಾವ ರೀತಿ ನಿವಾರಣೆ ಮಾಡಬೇಕು, ಹೇಗೆ ಮಾಡಿದರೆ ಆರ್ಥಿಕ ಪರಿಸ್ಥಿತಿ ಉತ್ತಮ ಪಡುವುದು ಎಂದು ಸರ್ಕಾರದವರು ಆಲೋಚಿಸಬೇಕಾದದ್ದು ಗಮನಾರ್ಹವಾದ ವಿಚಾರ. ಇದು ಎಷ್ಟು ಮಟ್ಟಿಗೆ ಈ ಬಡ ಜನರು ಅಥವಾ ನಿಮ್ಮ ವರ್ಗದವರು ತಲೆ ಎತ್ತದಂತೆ ಭಾರವಾಗಿದೆಯೆಂಬುದು ಬಹಳ ಮುಖ್ಯವಾದ ವಿಚಾರ. ಇದಕ್ಕೆ ಪ್ರತ್ಯೇಕವಾದ ಒಬ್ಬ ಕಮಿಷನರಿದ್ದು, ಇದನ್ನೆಲ್ಲಾ ಸರ್ವೆಮಾಡಿ, ಅಂಕಿ ಅಂಶ ಶೇಖರಿಸಿ, ಸರಿಯಾದ ಯೋಜನೆ ತಯಾರಿಸಿ, ಒಂದು ಗೊತ್ತಾದ ಕಾಲದಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡಿದರೆ, ಒಂದು ಗೊತ್ತಾದ ಅವಧಿಯಲ್ಲಿ ಪ್ರೋಗ್ರೆಸ್ಸಾಗುವಂತೆ ಮಾಡಿದರೆ, ಆ ಪ್ರೋಗ್ರೆಸ್ ನಾಗಾಲೋಟದಿಂದ ಹೋಗುವಂತೆ ಆಕ್ಸಿಲರೇಟ್ ಮಾಡಿದರೆ, ಏನಾದರೂ ಪರಿಸ್ಥಿತಿ ಉತ್ತಮವಾದೀತು. ಇದಕ್ಕೆ ಸರಿಯಾದ ಯೋಜನೆ ಹಾಕಬೇಕು ಎಂದು ಸರ್ಕಾರಕ್ಕೆ ಬಹಳ ಜವಾಬ್ದಾರಿಯಿಂದ ತಿಳಿಸುತ್ತೇನೆ ಮತ್ತು ರಚನಾತ್ಮಕವಾದ ಸಲಹೆ ಮಾಡುತ್ತೇನೆ. ನೀವು ಯಾವ ಯೋಜನೆಮಾಡಿದರೂ ಒಂದು ಪ್ರೋಗ್ರಾಂ ಪ್ರಕಾರ ಕೆಲಸ ಕಾರ್ಯ ನಡೆಸುತ್ತಿಲ್ಲ. ಈ ಪ್ರೋಗ್ರಾಂ ರಚನೆಮಾಡಬೇಕಾದದ್ದು ಅಭಿವೃದ್ಧಿ ವಿಚಾರದಲ್ಲಿ ಅತ್ಯಾವಶ್ಯಕವೆಂದು ಹೇಳುತ್ತೇನೆ. ಪಾಂಚವಾರ್ಷಿಕ ಯೋಜನೆಯಲ್ಲಿ 'ಸುಮಾರು 41 ಕೋಟಿ ರೂಪಾಯಿಗಳನ್ನು ಇಡೀ ಇಂಡಿಯಾ ದೇಶಕ್ಕೆ ಕೊಟ್ಟಿದ್ದೇವೆ, ಸಂಸ್ಥಾನಗಳೂ ಸಹ ಬಹಳ ಚೆನ್ನಾಗಿ ಸಾಕಷ್ಟು ಪ್ರೋಗ್ರಾಂ ಹಾಕಿಕೊಳ್ಳಬೇಕು' ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಅಭಿವೃದ್ಧಿ ವಿಚಾರ ಹೇಳಿದ್ದಾರೋ ಅದನ್ನೆಲ್ಲಾ ಶೇಖರಿಸಿ ಕಾರ್ಯರೂಪಕ್ಕೆ ತರಲು ಏನು ಮಾಡಬೇಕೆಂಬುದನ್ನು ಆಲೋಚಿಸಬೇಕಾದದ್ದು ಮುಖ್ಯ ವಿಚಾರ. ಇದಕ್ಕಾಗಿ ಒಬ್ಬರು ಆಫೀಸರಲ್ಲ, ಒಂದು ಸಮಿತಿಯಲ್ಲ, ಸರ್ಕಾರದ ಮಂತ್ರಿಮಂಡಲದಲ್ಲಿ ಡಿಪ್ರೆಸ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಅಭಿವೃದ್ಧಿಗಾಗಿ ಒಬ್ಬರು ಮಂತ್ರಿಗಳಿರಬೇಕೆಂದು ಸೂಚಿಸುತ್ತೇನೆ. ಏಕೆಂದರೆ ಬ್ಯಾಕ್‌ವರ್ಡ್ ಕ್ಲಾಸ್ ಎಂಬುದರಲ್ಲಿ ನಿಮ್ಮ ವರ್ಗದವರು ಮಾತ್ರವಲ್ಲ, ರೈತರು ಮಾತ್ರವಲ್ಲ, ಹಿಂದುಳಿದಿರುವ ಪಂಗಡಗಳೆಲ್ಲಾ ಸೇರುವುದರಿಂದ ಆ ಪಂಗಡಗಳ ಅಭಿವೃದ್ಧಿ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕು. ಇದಲ್ಲದೆ ಕೂಡಲೆ ಈ ವಿಚಾರದಲ್ಲಿ ನಿಗಾ ತೆಗೆದುಕೊಂಡು 5 ವರ್ಷದಲ್ಲಿ ಇವರ ಪ್ರಗತಿ ಯಾವ ವಿಚಾರದಲ್ಲಿ ಹೇಗೆ ಮಾಡಬೇಕೆಂಬುದನ್ನು ತಿಳಿದು ಸಾಧಿಸದಿದ್ದರೆ ಆಸೆ ನಿರಾಸೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಗಮನವಿಟ್ಟು ಈ ಸಮಯದಲ್ಲಿ ಸರಿಯಾಗಿ ಗೊತ್ತಾದ ಪ್ರೋಗ್ರಾಂ ಹಾಕಿ ಗೊತ್ತಾದ ಅವಧಿಯಲ್ಲಿ ಪ್ರೋಗ್ರೆಸ್ಸಾಗುವಂತೆ ಮಾಡಿ, ಸಮಾಜದಲ್ಲಿ ನಿಜವಾಗಿಯೂ ಸಿಟಿಜನ್ಸ್ ಎಂದು ಹೇಳುವ ರೀತಿಯಲ್ಲಿ ಅಭಿವೃದ್ಧಿಗೆತರಲು ತನುಮನ ಧನವನ್ನು ಸೂರೆಮಾಡಿ ದುಡಿಯಬೇಕು ಎಂದು ಸಲಹೆ ಮಾಡುತ್ತೇನೆ ಎಲ್ಲಕ್ಕಿಂತಲೂ, ನಾನು ಹೇಳಿದ ಹಾಗೆ, ಮನಸ್ಸು ಮುಖ್ಯವಾದುದು. ಮನಸ್ಸಿದ್ದರೆ ಮಾರ್ಗ ತೋರಿಸುವುದು. ಮನಸ್ಸಿದೆಯೆಂದು ಹೇಳುತ್ತಿರುವುದರಿಂದ, ಆರ್ಡರ್ಸ್ ಮಾಡಿ, ಹಣ ಒದಗಿಸಿ, ಕಾರ್ಯಕ್ರಮ ಹಾಕಿ, ಅನೇಕ ಪಾಲಿಸಿ ಕಮಿಟಿಗಳಿಂದ ಬಂದಿರುವ ಬಹಳ ಉಪಯುಕ್ತವಾದ ಶಿಫಾರ್ಸುಗಳನ್ನು ಕಾರ್ಯರೂಪಕ್ಕೆ ತರಬೇಕು. 1946ರಿಂದ ನೋಡಿದಂತೆ, ಕಳೆದ ಸಾಲಿನಲ್ಲಿ ಪಾಲಿಸಿ ಕಮಿಟಿಯು ಪಾಲಿಸಿ ವಿಚಾರದಲ್ಲಿ ಅಡ್ವೈಸ್ ಮಾಡಿದಂತೆ ಕಾರ್ಯ ನಡೆಯದಿದ್ದರೆ ನಿರೀಕ್ಷೆಮಾಡಿರುವ ಕೆಲಸವಾಗುವುದಿಲ್ಲ, ಒಂದು ಉತ್ಸಾಹವಿರುವುದಿಲ್ಲ. ದಯವಿಟ್ಟು ಇದಕ್ಕೆ ಅವಕಾಶಕೊಡದೆ, ಪಾಲಿಸಿ ಸಮಿತಿಯಿಂದ ಬಂದಿರುವ ಶಿಫಾರ್ಸನ್ನು ಒಪ್ಪಿಕೊಂಡು ಇಂಪ್ಲಿಮೆಂಟ್ ಮಾಡಬೇಕು. ಇಷ್ಟುಮಾತ್ರ ಹೇಳಿ ಈ ಸೂಚನೆಯನ್ನು ಮಾನ್ಯ ಸಭೆಯವರು ಒಪ್ಪಿಕೊಳ್ಳಬೇಕೆಂದು ಸೂಚಿಸಿ, ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut Motion moved :

"That the demand be reduced by Rs. 100."

Sri T. CHANNIAH (Minister for Public Health and Local Self-Government).—Mr. Speaker, Sir, the Hon'ble Mover of this cut motion desires to urge upon the Government to do their utmost towards the advancement of the Scheduled Castes in the State and to secure to these citizens justice—social, economic, educational, etc. But, as I understand, the Hon'ble Member actually deviated from the point which he has raised in the cut motion. I wish to point out to him that Government have enacted the Removal of Civil Disabilities (Amendment) Act, 1948 and the Mysore Temple Entry Authorisation Act, 1948, to secure social justice to the members of the Depressed Classes. Again, Sir, for the economic rehabilitation of these classes, the Government has been acquiring lands for forming extensions and granting sites free of cost and also assistance in cash and in kind to build houses. Government are granting lands at concession rates and in some cases even free of upset price. In regard to disposal of Amrit Mahal Kaval and date grove lands they have reserved 20 per cent of land for granting to the needy applicants of the depressed class For the educational advancement of these classes free studentships and scholarships are being awarded to poor and deserving students. Hostels have also been opened in central places for the benefit of the students belonging to depressed classes.

4 P.M.

Again, the Government have been spending liberally for the upliftment of the depressed classes. With regard to Scheduled Tribes, a special scheme has been formulated. These tribes are mostly found in the Districts of Mysore, Bangalore and Shimoga. During 1952-53 the Government of India provided one lakh of rupees and the Mysore Government subscribed an equal amount for the amelioration of these tribes. The scheme will be worked out during 1953-54; Government have been doing all that is possible in this direction. The provision of a sum of Rs. 19 lakhs made in the State Budget in connection with measures for the upliftment of the depressed classes is a clear indication of their earnestness.

Sri H. K. SHIVARUDRAPPA.—He has raised one or two points. He pointed out that a special officer should be appointed mainly for work relating to depressed class amelioration.

Sri T. CHANNIAH.—We have appointed one special officer as Assistant to the Commissioner for Local Self-Government who is attending to the work relating to rural development and depressed classes. Sri M. Madiah pointed out that one Minister should he appointed solely for looking after the work relating to depressed and backward classes. I do not think that the work is of such nature and magnitude as to require the appointment of a Minister specially. The present arrangement has been working quite satisfactorily.

I request Sri Madiah to withdraw his cut motion.

Sri M. MADIAH.—I seek the leave of the House to withdraw the cut motion.

The cut motion was, by leave, withdrawn.

Necessity of associating non-officials with Deputy Commissioners and Amildars in drawing Rural Development Grant Scheme.

Sri T. C. BASAPPA (Tarikere).—Sir, I move my cut motion which is as follows:

"That the demand under the head '40. A. Rural Development' for Rs. 31,52,000 be reduced by Rs. 100 (to draw the attention of the Government to the necessity of associating non-officials with the Deputy Commissioners and Amildars in drawing schemes under this grant."

Sri T. CHANNIAH.—Mr. Speaker, there are 4 to 5 cut motions of a similar nature under this demand. They may all be taken up together. The motions are 37, 38, 40, 47, 49, 51 and 53.

Mr. SPEAKER.—I will see.

ಶ್ರೀ ಟಿ. ಸಿ. ಬಸಪ್ಪ.—ಈ ರೂರಲ್ ಡೆವಲಪ್‌ಮೆಂಟ್‌ಗಾಗಿ ಒದಗಿಸಿರುವ ಹಣವಲ್ಲದೆ ಸರ್ಕಾರದವರು ಡಿಸ್ಟ್ರಿಕ್ಟ್ ಬೋರ್ಡಿಗೂ ಬೇರೆ ಹಣವನ್ನು ಒದಗಿಸಿರುತ್ತಾರೆ. ಈ ರೂರಲ್ ವಾಟರ್ ಸಪ್ಲೈ, ರೂರಲ್ ಕಮ್ಯೂನಿಕೇಷನ್ ವ್ಯವಸ್ಥೆ ಬಗ್ಗೆ ಆಯಾ ಡಿಸ್ಟ್ರಿಕ್ಟ್ ಬೋರ್ಡಿನ ಜವಾಬ್ದಾರಿಯೇನೆಂದರೆ, ಅದಕ್ಕಾಗಿ ಒದಗಿಸಿರುವ ಹಣವನ್ನು ಸದ್ವಿನಿಯೋಗಮಾಡಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದು. ಸರ್ಕಾರದವರು ಅಲಾಯಿದ ಒದಗಿಸಿರುವ ಹಣವನ್ನು ಖರ್ಚುಮಾಡಲು ಬೇರೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ಈ ಪರಿಸ್ಥಿತಿಯಲ್ಲಿ ತಾಲ್ಲೂಕು ಅಮಲ್ದಾರರು ಅನುಸರಿಸುವ ಕ್ರಮವೇ ಬೇರೆ ಅಸಿಸ್ಟೆಂಟ್ ಕಮಿಷನರು ಅನುಸರಿಸುವ ಕ್ರಮವೇ ಬೇರೆ ಡೆಪ್ಯುಟಿಕಮಿಷನರು ಅನುಸರಿಸುವ ಕ್ರಮವೇ ಬೇರೆ—ಹೀಗಾಗಿ ಅವರವರು ನಿರ್ವಹಿಸುವ ಕೆಲಸ ಕಾರ್ಯಗಳಲ್ಲಿ ಒಂದು ಬಗೆಯ ಹೊಂದಾಣಿಕೆ (co-ordination) ವ್ಯವಸ್ಥೆಇಲ್ಲದೆ ಈಬಗ್ಗೆ ಕೆಲಸ ಕಾರ್ಯಗಳು ಸಮರ್ಪಕವಾದ ರೀತಿಯಲಿ ಆಗುತ್ತಿಲ್ಲ. ಹಿಂದೆ ಈಬಗ್ಗೆ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಗಳಿದ್ದವು. ಈಗ ಆ ಸಮಿತಿಗಳೆಲ್ಲಾ ವಜಾಆಗಿವೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ತೀವ್ರಗಮನಕೊಟ್ಟು, ತಾಲ್ಲೂಕು ಮಟ್ಟದಲ್ಲಿಯೂ, ಡಿಸ್ಟ್ರಿಕ್ಟ್ ಮಟ್ಟದಲ್ಲಿಯೂ ಸಲಹಾ ಸಮಿತಿಗಳನ್ನೇರ್ಪಡಿಸಿ, ಅವುಗಳು ತೀರ್ಮಾನಮಾಡುವ ನಿರ್ದಿಷ್ಟ ಯೋಜನೆಯ ಪ್ರಕಾರ ಕಾರ್ಯಕ್ರಮವನ್ನು ಕೈಕೊಳ್ಳುವ ವ್ಯವಸ್ಥೆ ಮಾಡಬೇಕಾದುದು ಅತ್ಯಗತ್ಯ. ಈಗ ಡಿಪ್ರೆಸ್ಡ್‌ಕ್ಲಾಸ್ ಹಿತಸಂರಕ್ಷಣೆಯ ಬಗ್ಗೆ ಡಿಸ್ಟ್ರಿಕ್ಟ್ ಸ್ಪೆಷಲ್ ಆಫೀಸರನ್ನೇನೋ ನೇಮಕ ಮಾಡಿದ್ದೀರಿ. ಆದರೆ ಅವರಿಂದ ಈ ಕೆಲಸವು ಅಷ್ಟು ತೃಪ್ತಿಕರವಾದ ರೀತಿಯಲ್ಲಿ ನಡೆಯುತ್ತಿಲ್ಲವೆಂಬುದೇ ನನ್ನ ಸ್ಪಷ್ಟ ಅಭಿಪ್ರಾಯ. ಅದಕಾರಣ ಈ ರೂರಲ್ ಡೆವಲಪ್‌ಮೆಂಟ್‌ಸ್ಕೀಂ ಕೆಲಸವು

(ಶ್ರೀ ಟಿ. ಸಿ. ಬಸಪ್ಪ.)

ಯಶಸ್ವಿಯಾಗಿ ನೆರವೇರಲು ನನ್ನ ಸಲಹೆಗೆ ಮಾನ್ಯತೆ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳುತ್ತೇನೆ. ಸರ್ಕಾರದವರು ಈ ಸಮಿತಿಯ ಸದಸ್ಯರಿಗೇನೂ ಟಿ. ಎ. ವೆಚ್ಚ ಕೊಡಬೇಕಾಗಿಲ್ಲ. ಇವರು ಆಯಾಸ್ಥಳದ ಹಿತದೃಷ್ಟಿಯಿಂದ ನಿರ್ವಂಚನೆಯಾಗಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಮುಂದೆ ಬರುತ್ತಾರೆ. ಇಷ್ಟುಹೇಳಿ ನಾನು ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

So far as cut motion No. 38 is concerned, it of course, relates to the same subject as this cut motion. Cut motion No. 40 does not refer to this. It simply says 'to raise a debate on the constitution of Development Committees'. In respect of the remaining cut motions, the members concerned are not present. So Sri G. Basappa may speak not on his cut motion No. 38 but in support of the present cut motion.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀ ಟಿ. ಸಿ. ಬಸಪ್ಪನವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಖೋತಾ ಸೂಚನೆಯನ್ನು ಸಮರ್ಥಿಸುತ್ತಾ ಒಂದೆರಡು ಅಂಶಗಳನ್ನು ತಿಳಿಸ ಬಯಸುತ್ತೇನೆ. ಈ ಗ್ರಾಮಾಭಿವೃದ್ಧಿ ಕಾರ್ಯವು ಯಶಸ್ವಿಯಾಗಿ ನಡೆಯಬೇಕಾಗಿದ್ದರೆ ನನ್ನ ಮಿತ್ರರು ಈಗ ತಾನೇ ಸೂಚಿಸಿದ ಹಾಗೆ ತಾಲ್ಲೂಕು ಲೆವಲ್ ನಲ್ಲಿಯೂ ಮತ್ತು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿಯೂ ಸಲಹಾ ಸಮಿತಿಗಳು ಏರ್ಪಡುವುದು ಅತ್ಯಗತ್ಯ. ಹಿಂದೆ ಈ ರೀತಿ ಸಮಿತಿಗಳು ರಚನೆಯಾಗಿದ್ದು ಈ ಕೆಲಸ ಕಾರ್ಯಗಳು ಎಷ್ಟು ಸಮರ್ಪಕವಾಗಿ ನಡೆಯುತ್ತಿದ್ದುವೆಂಬುದು ಎಲ್ಲರಿಗೂ ವೇದ್ಯವಾಗಿರುವ ಅಂಶವೇ ಆಗಿದೆ. ಕಾರಣಾಂತರಗಳಿಂದ ಈ ಸಮಿತಿಗಳನ್ನು ಸರ್ಕಾರದವರು ರದ್ದುಗೊಳಿಸಿದ್ದಾರೆ. ಗ್ರಾಮದ ಏಳಿಗೆಯ ದೃಷ್ಟಿಯಿಂದ ಅಲ್ಲಿನ ಅಭಿವೃದ್ಧಿ ಕಾರ್ಯಗಳು ಫಲದಾಯಕವಾಗಿ ನಡೆಯಲು ಇಂಥ ಸಲಹಾ ಸಮಿತಿಗಳು ಅವಶ್ಯಕ ವೆಂಬುದನ್ನು ಸರ್ಕಾರದವರು ಮನಗಾಣಬೇಕು.

ಈಗ ಹೊಸ ಯೋಜನೆ ಪ್ರಕಾರ ಸರ್ಕಾರದ ಆದಾಯದಲ್ಲಿ 25ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಪಂಚಾಯಿತಿಗಳಿಗೆ ಮೀಸಲಾಗಿಟ್ಟಿದ್ದೀರಿ. ಈ ಹಣ ಯಾವ ರೀತಿ ಖರ್ಚಾಗುತ್ತಿದೆ ಎಂಬುದನ್ನು ನೋಡಿದರೆ, ಪಂಚಾಯಿತಿಗಳಿಗೆ ಕೊಡತಕ್ಕ ಹಣವನ್ನು ಖರ್ಚುಮಾಡಲಿಕ್ಕೆ ಅವರಿಗೆ ಪೂರ್ಣ ಸ್ವಾತಂತ್ರ್ಯ ಸಿಕ್ಕಿದೆ ; ಆದರೆ ಪಂಚಾಯಿತಿಗಳು ಕೆಲಸ ಮಾಡತಕ್ಕ ರೀತಿ ನೀತಿಗಳನ್ನು ನೋಡಿದರೆ ಈ ಹಣ ಮುಂದೆ ಯಾವ ರೀತಿ ಖರ್ಚಾಗುತ್ತದೆಯೋ ಎಂಬ ಭಯ ಆಗುತ್ತಿದೆ.

ಶ್ರೀ ಎಂ. ಮಾದಯ್ಯ.—on a point of information, Sir. ಈ ಹಣ ಡಿಸ್ಟ್ರಿಕ್ಟ್ ಬೋರ್ಡಿಗೆ ಹೋಗುವುದರಿಂದ, ಇದರಿಂದ. ರೂರಲ್ ಡೆವಲಪ್ ಮೆಂಟ್ ಸ್ಕೀಮಿಗೆ ಹಣ ಉಪಯೋಗಿಸಿಕೊಳ್ಳಲು ಡೆಪ್ಯುಟಿ ಕಮಿಷನರಿಗೆ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಿದ್ದೀರಾ?

ಶ್ರೀ ಜಿ. ಬಸಪ್ಪ.—ಈಗ ಆ ಪಂಚಾಯಿತಿಗಳವರು ಖರ್ಚುಮಾಡತಕ್ಕ ವಿಧಾನ ನೋಡಿದರೆ, ಯಾವ ಪಂಚಾಯಿತಿಗಳಲ್ಲೂ ಕೂಡ ಲೆಕ್ಕ ಇರುವುದಿಲ್ಲ, ಯೋಜನೆ ಇರುವುದಿಲ್ಲ ಮತ್ತು ಖರ್ಚು ಮಾಡಿದ್ದಕ್ಕೆ ಸರಿಯಾದ ಅಕೌಂಟ್ಸ್ ಇರುವುದಿಲ್ಲ. ಅಲ್ಲದೆ ರೆಸಲ್ಯೂಷನ್ ಇಲ್ಲದೇಇದ್ದರೂ ಕೂಡ 300ರೂಪಾಯಿಗಳ ವರೆಗೂ ಪಂಚಾಯಿತಿ ಚೇರ್ಮನ್ ಖರ್ಚುಮಾಡಬಹುದು ಎಂದು ಕೊಟ್ಟಿರತಕ್ಕ ಅಧಿಕಾರವನ್ನು ಚಲಾಯಿಸಿ ಚಲನ್ನಿಗೆ ರುಜು ಹಾಕಿ ದುಡ್ಡು ಖರ್ಚು ಮಾಡತಕ್ಕ ಪರಿಸ್ಥಿತಿ ಇದೆ. ಈ ಪರಿಸ್ಥಿತಿ ಇರುವಾಗ ಸರ್ಕಾರ ಒದಗಿಸತಕ್ಕ 25 ಲಕ್ಷ ರೂಪಾಯಿಗಳಲ್ಲಿ 12½ ಲಕ್ಷ ರೂಪಾಯಿಗಳು ಯಾವರೀತಿ ಖರ್ಚಾಗುತ್ತದೆಯೋ ಎಂಬ ಭಯವಾಗುತ್ತಿದೆ. ಅದಕ್ಕೆ ನಾನು ಸಲಹೆ ಕೊಡುವುದೇನೆಂದರೆ : ತಾಲ್ಲೂಕುಗಳಲ್ಲಿರತಕ್ಕ ಮುಖಂಡರುಗಳಿಗೆ ವಿಚಾರ ಗೊತ್ತಿರುತ್ತದೆ. ಪಂಚಾಯಿತಿಯವರು ತಮ್ಮ ಚೌಕಟ್ಟಿನೊಳಗೆ ಕೆಲಸ ಮಾಡಿಕೊಂಡು ಹೋಗುತ್ತಿರುವಾಗ ಅವರಿಗಿರತಕ್ಕ ಸ್ವಾತಂತ್ರ್ಯಮೀರಿ ಹೋಗಬೇಕಾದ ಸಂದರ್ಭ ಒದಗಿದರೆ, ಆಗ ಜಿಲ್ಲಾ ಬೋರ್ಡಿನವರ ಸಹಾಯವನ್ನು ಕೇಳಬೇಕಾಗುತ್ತದೆ. ಆ ಸಮಯದಲ್ಲಿ ಅವರಿಗೂ ಇವರಿಗೂ ಎಷ್ಟೋ ಅಂತರವಿರುತ್ತದೆ. ಅದಕ್ಕೋಸ್ಕರ, ತಾಲ್ಲೂಕು ಲೆವೆಲ್ಲಿನಲ್ಲಿ ಬೇರೆ ಒಂದು ಖಾಸಗಿ ಸಮಿತಿ ಯಿದ್ದರೆ ಆ ಮುಖಾಂತರ ತಮ್ಮ ಕುಂದು ಕೊರತೆಗಳನ್ನೂ ಬೇಡಿಕೆಗಳನ್ನೂ ಕೇಳಿಕೊಳ್ಳಲಿಕ್ಕೆ ಒಂದು ಸುಗಮವಾದ ದಾರಿಯಾಗುತ್ತದೆ ಎಂಬು ನಾನು ಭಾವಿಸುತ್ತೇನೆ. ಅದೂ ಅಲ್ಲದೆ, Co-ordination ಎಂದು ಹೇಳುತ್ತೀರಲ್ಲಾ ಹಾಗೆ, ಒಂದಕ್ಕೊಂದಕ್ಕೆ ಸಂಪರ್ಕ ಇರುತ್ತದೆ. ಜಿಲ್ಲಾ ಬೋರ್ಡು ಏನು ಕಾರ್ಯಕ್ರಮ ಕೈಕೊಳ್ಳಬೇಕು, ಪಂಚಾಯಿತಿ ಏನು ಕಾರ್ಯ ಕೈ ಕೊಳ್ಳಬೇಕು, ಯಾವ ಯಾವ ಕಾರ್ಯಗಳನ್ನು ಯಾವ ಯಾವ ಅಚ್ಚುಕಟ್ಟಿನಲ್ಲಿ ಮಾಡಿದರೆ ಗ್ರಾಮಾಭಿವೃದ್ಧಿಕಾರ್ಯ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ ಎಂಬುದನ್ನು ಸಲಹೆ ಮಾಡಲಿಕ್ಕೂ ಕೂಡ ಒಂದು ಖಾಸಗಿ ಸಮಿತಿ ಏರ್ಪಡಿಸಬೇಕಾದದ್ದು ಅತ್ಯಾವಶ್ಯಕ ಎಂದು ಹೇಳಿ, ನನ್ನ ಮಾನ್ಯ ಮಿತ್ರರು ಮಂಡಿಸಿರುವ ಈ ಖೋತಾ ನಿರ್ಣಯವನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ)—ಸ್ವಾಮಿ ನಾನು ಸಭೆಯಮುಂದೆ ಇರುವ ರೂರಲ್ ಡೆವೆಲಪ್‌ಮೆಂಟ್ ಎಂಬ ವಿಷಯದಮೇಲೆ ತಂದಿರತಕ್ಕಂಥಾ ಈ ಖೋತಾ ನಿರ್ಣಯವನ್ನೂ ವಿರೋಧಿಸಬೇಕಾಗಿದೆ. ಕಾರಣ ಸರ್ಕಾರದವರು ರಚಿಸುವ ಯೋಜನೆಯ ಜೊತೆಗೆ ಖಾಸಗಿ ಜನರು ಇರಬಾರದು ಎಂಬುದು ನನ್ನಉದ್ದೇಶವಲ್ಲ. ಈ ರೂರಲ್ ಡೆವಲಪ್‌ಮೆಂಟ್ ಎನ್ನುವ ಒಂದು ಡಿಪಾರ್ಟ್‌ಮೆಂಟಿನ ಚರಿತ್ರೆಯ ಬಗ್ಗೆ ಸ್ವಲ್ಪ ನಾವು ನೋಡುವುದಾದರೆ ಅದು ತನ್ನ ಹೆಚ್ಚಿನ ಆಯುಷ್ಯವನ್ನು ಕಳೆದುಕೊಂಡು ಕೊನೆಯ ಉಸಿರಿನಲ್ಲಿದೆ ಎಂದು ಹೇಳಬಹುದು. ಇನ್ನೂ it has not been completely buried ಅಷ್ಟೇ. ಈಗ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಮತ್ತು ತಾಲ್ಲೂಕು ಸಮಿತಿಗಳಿಗೆ ಅಥವಾ ಸ್ಥಳೀಯ ಸಮಿತಿ

ಗಳಿಗೆ (Local Bodies) ಹೆಚ್ಚು ಹೆಚ್ಚಾಗಿ ಕೆಲಸ ಬಿಟ್ಟು ಕೊಟ್ಟು ಗ್ರಾಮಾಭಿವೃದ್ಧಿ ಎಂಬ ಬಾಬಿನಲ್ಲಿ ನಿಮ್ಮ ವರ್ಗದವರಿಗೆ ಮನೆ ಕಟ್ಟಿಸಿಕೊಡುವ ಕೆಲಸ ವನ್ನು ಮಾತ್ರ ಸದ್ಯಕ್ಕೆ ಇಟ್ಟುಕೊಂಡರೆ ಸಾಕು ಎಂದು ಯೋಚನೆ ಮಾಡಿದ್ದೇವೆ, ಎನ್ನುವ ಅರ್ಥದಲ್ಲಿ ಸರ್ಕಾರದವರು ಹೇಳಿಕೆಯಿತ್ತಿದ್ದಾರೆ. ಮತ್ತು ಈ ಇಲಾಖೆಯಲ್ಲಿ ಕಾಣುವ ಹಾಗೆ, ಜನರಲ್–80 ಸಾವಿರ, ಡಿಸ್ಟ್ರಿಕ್ಟ್ ಸ್ಟಾಫ್ 66,500, ತಾಲ್ಲೂಕು ಸ್ಟಾಫ್ 2,55,300, ಪಬ್ಲಿಸಿಟಿ ಅಂಡ್ ಪ್ರಾಪೊಗ್ಯಾಂಡ 20,000 ಹೀಗೆ ಖರ್ಚುಹಾಕಿದ್ದೀರಿ. ವರ್ಕ್ಸ್ ಔಟ್‌ಲೇ 24,200 ರೂಪಾಯಿ, ಆ ಮೇಲೆ scheme for upliftment of the scheduled castes and scheduled tribesಗೆ 2ಲಕ್ಷರೂಪಾಯಿ—ಹೀಗೆ ಹಣ ಹಂಚಿದ್ದೀರಿ. ಗ್ರಾಮಾಭಿವೃದ್ಧಿ ಅನ್ನುವ ಒಂದು ವಿಷಯದ ಸಂಬಂಧದಲ್ಲಿ ಮಾನ್ಯ ಮಂತ್ರಿಗಳು, ಇದು ಸಣ್ಣ ವಿಷಯ ಆದ್ದರಿಂದ ಅವರೇ, ಮಂತ್ರಿ ಗಳೇ ನೋಡಿ ಕೊಂಡು ಹೋಗುತ್ತಾರೆ ಎಂದರು. ಹಣ ಕಾಸಿನ ಪರಿಸ್ಥಿತಿ ಮತ್ತು ಈ ಸನ್ನಿವೇಶದಲ್ಲಿ ಎಷ್ಟು ಮಾಡಬಹುದೋ ಅಷ್ಟು ಮಾತ್ರಮಿತಗೊಳಿಸಬೇಕೆಂದು ಅವರು ಆ ಮಾತನ್ನು ಆಡಿರಬೇಕು. ಗ್ರಾಮಾಭಿವೃದ್ಧಿ ಯಾಗಬೇಕಾದರೆ ಬರೀ ಈಗಿರುವ ರೀತಿಯಲ್ಲಿ, ಕೆಲವು ಜನ ನಿಮ್ಮ ವರ್ಗದವರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ರೀತಿಯಲ್ಲಿ ಕಟ್ಟಿಸಿ ಕೊಟ್ಟರೆ ಗ್ರಾಮಾಭಿವೃದ್ಧಿ ಯಾಗುವುದಿಲ್ಲ. ತಾವು ಕೂಡ ಆ ರೀತಿ ಭಾವಿಸಿದಲ್ಲ ಎಂದು ನಾನು ನಂಬಿದ್ದೇನೆ. ಈ ಮನೆಕಟ್ಟುವ ವಿಷಯ ವೊಂದನ್ನೇ ಪರಿಶೀಲನೆ ಮಾಡಿದರೂ ಕೂಡ, ಅದರಲ್ಲಿ ಅನೇಕ ನ್ಯೂನತೆಗಳು ಇವೆ. ಎಷ್ಟೋ ಜನ ತಮ್ಮ ಮನೆಯ ಕೂಲಿ ಆಳುಗಳಿಗೆ ತಮ್ಮ ಮನೆಯ ಹತ್ತಿರವೇ ಮನೆ ಕಟ್ಟಿಸಿ ಕೊಟ್ಟಿದ್ದಾರೆ. ಅವುಗಳನ್ನು ಇನ್ನೂ ವಾಸಕ್ಕೂ ಕೂಡ ಬಿಟ್ಟುಕೊಡದೆ ಇರುವ ಸಂದರ್ಭಗಳು ಇವೆ. ಅದು ಇರಲಿ, ಹಿಂದಿನ ಮನೆಗಳಿಗೆ ಈಗಲೇ ಏನು ಆತುರವೆಂದು ಅವರು ಹುಲ್ಲಿನ ಮನೆಗಳಲ್ಲೇ ಇರುವ ಸಂಭವಗಳೂ ಇವೆ. ಹಿಂದಿನ ಚುನಾವಣೆಯ ಕಾಲಕ್ಕೆ ಹೋದರೆ—ಬಹುಶಃ ಯಾರಿಗಾದರೂ ಕ್ರೋಧ ಬರಬಹುದೋ ಏನೋ—ಆ ಸಂದರ್ಭದಲ್ಲಿ ನಿಮ್ಮ ವರ್ಗ ದವರನ್ನು ಎಷ್ಟು ಮಟ್ಟಿಗೆ ಪ್ರೋತ್ಸಾಹಿಸಿ ಕೆಲವುಕಡೆ ಬಲಾತ್ಕಾರವಾಗಿಯೂ ಮನೆಗೆ ಹೆಂಚುಕೊಟ್ಟು ನವ ಗೆ ಓಟು ಮೀಸಲಾಗಿರಿ ಎಂದು ಹೇಳಿದ್ದಾರೆ ಎಂಬು ದನ್ನು ಹೇಳಬೇಕಾಗಿಲ್ಲ. ಅದು ಏನೇಇರಲಿ, ಈ ವ್ಯವ ಹಾರದಲ್ಲಿ ಖರ್ಚುಮಾಡತಕ್ಕ ಹಣ ಸದುಪಯೋಗವಾಗಿ ಈ ರೀತಿ multiplicity of schemes ಯೋಜನೆ ಗಳು, ಯೋಜನೆಗಳು, ಯೋಜನೆಗಳು, ಇವುಗಳಿಗೇ ಡಿಪಾರ್ಟ್‌ಮೆಂಟುಗಳನ್ನು ಮಾಡುತ್ತಾ ಹೋಗುವುದು ಮತ್ತು ಒಂದೊಂದನ್ನೂ ಅಲ್ಲೇ ಕೈ ಬಿಡುವುದು, ಮಲ್ಟಿಪರ್‌ಪಸ್ ಕೋಆಪರೇಟೀವ್ ಸೊಸೈಟಿ ಆಯಿತು ರೂರಲ್ ಡೆವೆಲಪ್‌ಮೆಂಟ್ ಆಯಿತು......... ......

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಅವು ನಡೆಯುತ್ತಾ ಇವೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ಮಟ್ಟಿಗೆ ನಡೆಯುತ್ತಾ ಇವೆ ಎನ್ನುವುದನ್ನು ತಾವೇ ಖುದ್ದು ಪರಾಂಬರಿಸಿದರೆ ಆಗ ತಮಗೇ ಚೆನ್ನಾಗಿ ಅರ್ಥವಾಗು ತ್ತದೆ. ಅವುಗಳ ಸ್ಥಿತಿ ಏನಾಗಿದೆ ಎಂದರೆ, ಅವು ಇವೊತ್ತು scandals ಆಗಿವೆ ಎಂದು ಹೇಳಬಹುದು. ಇವು ಒಂದು ರೀತಿಯಲ್ಲಿ ಹೊಸ ಹೊಸ ಮಾದರಿಗಳು ಎಂದು ಹೇಳುತ್ತಾ ಇದ್ದೀರಿ. ಹಳ್ಳಿಯ ಬಡ ಜನ ಕೊಡುವ ಕಾಸು ಕಾಸು ಸೇರಿ ಒಂದು ಕಡೆ ಒಂದು ಕೋಟಿ ರೂಪಾಯಿ ಹಣ ಆಗುತ್ತಿದೆ. ಅದನ್ನು ಖರ್ಚು ಮಾಡಬೇಕಾದರೆ, ತಲೆ ಭಾರ ಆಗಿರತಕ್ಕ ಡಿಪಾರ್ಟ್ ಮೆಂಟ್ ಇಟ್ಟುಕೊಳ್ಳುವುದು. 1,400 ರೂಪಾಯಿನ ಒಬ್ಬ ಆಫೀಸರನ್ನು ಇಟ್ಟುಕೊಂಡು ಅವರಿಗೆ ಸಾಕಾ ಗುವಷ್ಟು ಸಿಬ್ಬಂದಿ ನೇಮಕಮಾಡುವುದು, ಹೀಗಾಗಿದೆ. ಸರಿಯಾದ ಒಂದು ಕ್ರಮದಲ್ಲಿ ವಿನಿಯೋಗಿಸಿಕೊಂಡು ಹೋಗಬೇಕೇ ಹೊರತು ಹೀಗೆಯೇ ಎಲ್ಲ ಹಣವೂ ವಿನಿ ಯೋಗವಾಗಬಾರದು. ಸ್ಪೆಷಲ್ ಆಫೀಸರುಗಳು ಬೇರೆ ಒಂದೊಂದು ಡಿಪಾರ್ಟ್‌ಮೆಂಟಿಗೂ ಕೋ ಆರ್ಡಿ ನೇಷನ್ ಹೇಗಿದೆ ಎಂದು ನೋಡುವುದಾದರೆ, ಆಕಸ್ಮಾ ತ್ತಾಗಿ ರೂರಲ್ ಡೆವೆಲಪ್ ಮೆಂಟ್ ಅಧಿಕಾರಿ ರೆವೆನ್ಯೂ ಇಲಾಖೆಯಲ್ಲಿ ಏನೋ ಒಂದು ಸಮಾಚಾರ ಅಥವಾ ಕಾಗದವನ್ನು ನೋಡಬೇಕು ಎಂದರೆ ಅವರಿಗೇ ಕಷ್ಟ ವಾಗುತ್ತದೆ. ಇನ್ನು ಖಾಸಗಿ ಜನರು ಹೋಗಿ ಸಮಾ ಚಾರ ತಿಳಿದುಕೊಳ್ಳಬೇಕೆಂದರೆ, ತಿಳಿದು ಕೊಳ್ಳುವುದು ಅಲ್ಲಿಗೇ ಉಳಿಯಿತು. ಡಿಪಾರ್ಟ್‌ಮೆಂಟ್‌ಗಳಲ್ಲೂ ಕೂಡ ಕೆಲಸ ಜಾಗ್ರತೆಯಾಗಬೇಕಾದರೆ ಅವರವರಿಗೇ ಸಹ ಕಾರವಿಲ್ಲ, ಸಂಪರ್ಕವೂ ಇಲ್ಲ. ಹೊಸ ಹೊಸ ಇಲಾಖೆ ಗಳನ್ನು ಏರ್ಪಡಿಸಿದ ಹಾಗೆಲ್ಲಾ ಅವರಲ್ಲಿ ಬಹುಶಃ ವಿರೋಧ ಬೆಳೆಯುತ್ತದೆಯೋ ಏನೋ ! ಇವನೊಬ್ಬ ಆಫೀಸರು ಬಂದ ಎಂದು ಒಂದು ಮನೋಭಾವ ಬರುತ್ತಾ ಇರಬಹುದು. ಇವೊತ್ತು ಯೋಜನೆಗಳನ್ನು ದೇಶದ ಮುಂದೆ ಅನೇಕವಾಗಿ ಇಟ್ಟಿದ್ದೀರಿ; ಕಾಂಗ್ರೆಸ್ ಸರ್ಕಾರದವರು ಇಟ್ಟಿರುವಷ್ಟು ಯೋಜನೆಗಳನ್ನು ಹಿಂದೆ ಯಾರೂ ಇಟ್ಟಿರಲಿಲ್ಲ, ಮುಂದೆ ಇಡುವವರು ಯಾರಾ ದರೂ ಬರುತ್ತಾರೆಯೇ ಎಂಬುದು ಅನುಮಾನವಾಗಿದೆ. ಏನೇ ಮಾಡಲಿ, ದೇಶವನ್ನು ಕಟ್ಟಬೇಕು ಎಂದು ಮಾತ ನಾಡುತ್ತಾ, ಮಾತನಾಡುತ್ತಾ, ನಿಮ್ಮ ವರ್ಗದವ ರನ್ನೂ ಬಡವರನ್ನೂ ಉದ್ಧಾರ ಮಾಡಬೇಕೆಂಬ ಕುತೂ ಹಲ ತೋರಿಸುತ್ತಾ ಇರುವುದು ಶ್ಲಾಘನೀಯವಾದ ದ್ದಾದರೂ ಪರಿಣಾಮದಲ್ಲಿ ಗುರಿಮುಟ್ಟುತ್ತಾರೆಯೇ ಎಂಬ ಅನುಮಾನ ಬಂದಿದೆ. At the cost of this poor country and poor people ಹಣ ಖರ್ಚಾ ಗುತ್ತಾ ಹೋದರೆ ಇದರ ಪರಿಣಾಮ ಏನು ಎಂದು ನಮಗೆ ಅನೇಕರಿಗೆ ಭಯವಾಗುತ್ತಿದೆ. ಇಲ್ಲಿ ಏನುಹೇಳ ಬೇಕೆಂದು ಆಶಿಸುತ್ತೇನೆಎಂದರೆ. ಈ ಡಿಪಾರ್ಟ್‌ಮೆಂಟು ಗಳನ್ನು ನೀವು ಹೆಚ್ಚು ಹೆಚ್ಚು ಮಾಡಿಕೊಂಡು ಅಲ್ಲಲ್ಲಿಗೆ ಕೈ ಬಿಡುವುದಕ್ಕಿಂತ ಈಗ ಸೇರುತ್ತಾ ಇರುವ ಕೋಟಿ ಗಟ್ಟಲೆ ರೂಪಾಯಿಗಳನ್ನು ವಿವೇಚನೆಯಿಂದ ಒಂದು ಕಾಸಿಗೂ ಲೆಕ್ಕ ಇಡಬೇಕು. ಒಂದು ಸಣ್ಣ ಉದಾಹ ರಣೆ ಕೊಡಬೇಕೆಂದರೆ, ಒಂದು ಚಾನಲ್ ಇದೆ; ಪಬ್ಲಿಕ್ ವರ್ಕ್ಸ್, ರೂರಲ್ ಡೆವೆಲಪ್ ಮೆಂಟ್ ಇದಕ್ಕಾಗಿ ಒಂದು ಕೋಟಿ ರೂಪಾಯಿ ಹಾಕುತ್ತೀರಿ. ಅದು ಯಾವ ಸ್ಥಿತಿಗೆ ಬರುತ್ತದೆ ಎಂದರೆ 200 ಮೈಲಿ ಸಂಸ್ಥಾನದ ಕೊನೆಗೆ ಹೋಗುವ ಹೊತ್ತಿಗೆ ಒಂದು ಕಾಸಾದರೂ ಹೋಗಿ ಅಲ್ಲಿಗೆ ಮುಟ್ಟುತ್ತದೆಯೇ ಎಂಬ ಅನುಮಾನ ಬಂದಿದೆ ಅಥವಾ ಒಂದು ಕಾಸಾದರೂ ಟಣ್ ಎಂದು ಅಲ್ಲ ಬಿದ್ದರೆ ಅದು ಸರಿಯೇ. ಕಷ್ಟ ಪಟ್ಟು ಚರ್ಚೆಮಾಡಿ ಪ್ರತಿಯೊಂದು ಕಾಸನ್ನೂ ನಿಷ್ಕರ್ಷೆ ಮಾಡಿ ಹಂಚುವುದು, ಪರಿಣಾಮದಲ್ಲಿ ಅದು ಗುರಿಯನ್ನೇ ಮುಟ್ಟುವುದಿಲ್ಲ, ಭಾವಿಗೆ ಗ್ರಾಂಟು ಕೊಡುತ್ತೀರಿ, ಭಾವಿಯೇ ಇರುವುದಿಲ್ಲ. ಯಾವ ರೀತಿಯಲ್ಲೂ ಅಲ್ಲಿ ಅನುಕೂಲವಾಗಿರುವುದಿಲ್ಲ. ಇದು ಬಹಳ ವ್ಯಸನಕರವಾದ ಸಂಗತಿ. ಇದು ಮಾನ್ಯ ಸದಸ್ಯರೂ, ಮಂತ್ರಿಗಳೂ ಮತ್ತು ಸಾರ್ವಜನಿಕರೂ ಎಲ್ಲರೂ ಬಹಳ ದೀರ್ಘವಾಗಿ ಆಲೋಚಿಸತಕ್ಕ ವಿಚಾರ.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಅಧ್ಯಕ್ಷರೇ, ನಾನು ಈ ಮಾನ್ಯ ಸದಸ್ಯರಿಗೆ ಒಂದು ಪ್ರಶ್ನೆ ಕೇಳುತ್ತೇನೆ. "ಭಾವಿ ತೆಗೆಸುವುದಕ್ಕಾಗಿ ದುಡ್ಡು ತೆಗೆದುಕೊಂಡು ಹೋಗಿರುತ್ತಾರೆ. ಆದರೆ ಅಲ್ಲಿ ಭಾವಿಯೇ ಇರುವುದಿಲ್ಲ" ಎಂದು ಹೇಳಿದರು. ಅಂಥ ಯಾವುದಾದರೂ, ಒಂದು ನಿದರ್ಶನ ಸಾಕು, ಇದ್ದಲ್ಲಿ ಅವರು ಅದನ್ನು ತಿಳಿಸಲಿ. ನಾನು ಈ ಕೂಡಲೇ ಆ ಬಗ್ಗೆ ಕಾರ್ಯಕ್ರಮವನ್ನು ಕೈಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಉದಾಹರಣೆಗಳು ಬೇಕಾದಷ್ಟಿವೆ.

Mr. SPEAKER.—You give one or two instances.

Sri KADIDAL MANJAPPA (Minister for Revenue and Public Works).—Give an instance where a channel was sanctioned and not executed and the amount was spent.

Sri S. SRINIVASA IYENGAR (T.-Narasipur).—Shall I give such instances Sir?

ಶ್ರೀ ಎಸ್. ಗೋಪಾಲಗೌಡ.—ಹೀಗೆ ಎಷ್ಟು ಕೆಲಸಗಳಿಗೆ ಹಣ ಮಂಜೂರಾಗುತ್ತದೆಯೋ ಅಷ್ಟು ಸಾರ್ಥಕವಾಗಿಲ್ಲವೆಂಬುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದನ್ನು ಪುನಃ ಪರಿಶೀಲನೆ ಮಾಡುವುದು ಸರ್ಕಾರದ ಹಿತದೃಷ್ಟಿಯಿಂದಲೂ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದಲೂ ಒಳ್ಳೆಯದೆಂದು ತಿಳಿಸುತ್ತೇನೆ. ಈ ದಿವಸ ನಾನು ತಿಳಿಸತಕ್ಕಂಥ ಪ್ರತಿಯೊಂದು ಅಂಶವೂ ದೇಶಾಭಿವೃದ್ಧಿ ಕಾರ್ಯಗಳಿಗೆ ಒಂದು ಆಧಾರವಾಗಿರುತ್ತದೆಯೆಂದು ಸೂಚಿಸುತ್ತೇನೆ.

ಕಾಂಗ್ರೆಸ್ ಸರ್ಕಾರ ಮಾಡಿರತಕ್ಕ ಇನ್ನೊಂದು ದೊಡ್ಡ ತಪ್ಪೇನೆಂದರೆ—ಅನೇಕ ಹೊಸ ಹೊಸ ಯೋಜನೆಗಳನ್ನು ಮಾಡತಕ್ಕ ನೆಪದಲ್ಲಿ ಅನೇಕ ಸಮಿತಿಗಳನ್ನು ನೇಮಕಮಾಡಿ, ಆ ಸಮಿತಿಗಳಿಗೆಲ್ಲಾ ಯಾವುದೋ ಒಂದು ಹಳೆಯ ವ್ಯಾಮೋಹವನ್ನಿಟ್ಟುಕೊಂಡು ಒಂದೇ ಪಂಗಡದ ಜನರನ್ನು ಅದಕ್ಕೆ ನೇಮಿಸುತ್ತಿದ್ದಾರೆ. ಈ ಒಂದು ವ್ಯಾಮೋಹದಿಂದ ಅನೇಕ ತಜ್ಞರಾದ ಜನರನ್ನು ಹಿಂದಕ್ಕೆ ಕೈಬಿಡಲಾಗಿದೆ. ಹೀಗೆ ಎಷ್ಟೋ ತಪ್ಪುಗಳನ್ನು ಮಾಡಿದ್ದೀರಿ, ಆದರೆ ನಿಮ್ಮ ಬೆನ್ನು ನಿಮಗೆ ಕಾಣುವುದಿಲ್ಲ. ಆದುದರಿಂದ ಬೇರೆಯವರು, "ನೀವುಮಾಡುತ್ತಿರುವುದು ತಪ್ಪು, ಅದು ಸರಿಯಾದುದಲ್ಲ" ಎಂದು ಹೇಳಿದರೆ, ಅದನ್ನು ಒಂದು ಸಹನೆಯಿಂದ ಕೇಳತಕ್ಕ ಮನೋಭಾವ ತಮ್ಮಲ್ಲಿ ಬೆಳೆಯಬೇಕು. ಆ ರೀತಿಯಾದ ಒಂದು ಮನೋಭಾವ ಬೆಳೆಯತಕ್ಕದ್ದು ದೇಶದ ಹಿತದೃಷ್ಟಿಯಲ್ಲಿ ಬಹಳ ಒಳ್ಳೆಯದೆಂದು ತೋರುತ್ತದೆ. ಈ ಕಾರಣದಿಂದ ತಾವು ಬೇರೆ ಸದಸ್ಯರು ಹೇಳತಕ್ಕದ್ದನ್ನು ಗ್ರಹಿಸುವುದು ಒಳ್ಳೆಯದು. ತಾವು ಒಂದು ಹುರುಪಿನಿಂದ ಹೊಸ ಹೊಸ ಯೋಜನೆಗಳನ್ನು ಹಾಕುತ್ತಾ ವಿಶೇಷ ಹಣವನ್ನು ಖರ್ಚು ಮಾಡಿದರೆ, ಹಾಗೆ ಖರ್ಚಾದ ಹಣವೆಲ್ಲಾ ದೇಶದಲ್ಲಿರತಕ್ಕ ಜನರ ಅನುಕೂಲಕ್ಕಾಗಿಯೇ ಖರ್ಚಾಗಿರುತ್ತದೆಯೆಂದು ಭಾವಿಸುವುದು ಸರಿಯಾದುದಲ್ಲ. ಹಾಗೆ ಹಣವನ್ನು ತಾವು ಖರ್ಚುಮಾಡಿರತಕ್ಕ ಬಗ್ಗೆ ಯಾರೂ ಟೀಕೆಮಾಡುವುದಕ್ಕೆ ಅವಕಾಶವೇ ಇಲ್ಲವೆಂದೂ, ಹಾಗೊಂದು ವೇಳೆ ಯಾರಾದರೂ ಅದನ್ನು ಟೀಕಿಸಿದರೆ, ಅಂಥ ಟೀಕೆಗಳನ್ನು ಅವರು ಬೇರೆ ಯಾವುದೋ ಒಂದು ಉದ್ದೇಶವನ್ನಿಟ್ಟುಕೊಂಡು ಹಾಗೆ ಟೀಕೆ ಮಾಡುತ್ತಿದ್ದಾರೆಂಬ ಮನೋಭಾವವನ್ನು ತಾವು ತಾಳುವುದಾದರೆ, ಮುಂದೆ ಕೈಕೊಳ್ಳುವ ಕೆಲಸಕಾರ್ಯಗಳೆಲ್ಲಾ, ನಾನಾಗಲೇ ಹೇಳಿರುವಂತೆ at the cost of the poor people of the poor country ಪೂರ್ಣವಾಗಿ ವಿಫಲವಾಗುತ್ತದೆ. ಹಾಗೆ ಹೊಸ ಹೊಸ ಯೋಜನೆಗಳನ್ನು ಮಾಡಿ ದೇಶದ ಬೊಕ್ಕಸವನ್ನು ಬರಿದುಮಾಡುವುದಕ್ಕೆ ಬದಲಾಗಿ, ತಾವು ಖರ್ಚು ಮಾಡತಕ್ಕ ಪ್ರತಿಯೊಂದು ಕಾಸಿಗೂ ಸರಿಯಾದ ಲೆಕ್ಕಗಳನ್ನಿಟ್ಟು, ವಿವೇಕದಿಂದ ಪ್ರತಿಯೊಂದು ಕಾಸನ್ನೂ ಖರ್ಚುಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಂಡು, ನನ್ನ ಈ ಎರಡು ಮಾತುಗಳನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri T. CHANNIAH.—Mr. Speaker, Sir, Sri T. C. Basappa and Sri G. Basappa have suggested that at the taluk level there must be committees to co-ordinate the work relating to Rural Development. They pointed out that after the abolition of the District and Taluk Development Committees, no one is attending to this work. This is not correct. After the abolition of the Taluk and District Development Committees the work relating to Rural Development and Amelioration of Depressed Classes has been entrusted to the Revenue Department. The work is carried out by the Revenue agency. If, as stated by the Hon'ble Members, non-official advice is now not sought for by the Revenue Officers, I may tell him that non-officials are always welcome to tender advice to the Revenue and other officers entrusted with such work. The Hon'ble Members of this House can bring to the notice of the officers the grievances and difficulties of people in rural and urban areas and see how best they could be redressed. As the Hon'ble Members know, the Taluk and District Development Committees were abolished as a measure of economy. To revive these Committees may not be feasible. However, if this House so desires, Government will consider the question of appointing a co-ordination Committee at the taluk level to deal with Rural Development and Amelioration of Depressed Classes, provided this does not involve extra expenditure.

Sri M. LINGANNA.—What about District Boards?

Sri T. CHANNIAH.—Under the Village Panchayet and District Board Act, such works come under the purview of the District Boards. The Central Depressed Class Policy Committee have resolved that a Committee at the taluk level may be constituted in connection with the work of Depressed Class Amelioration Schemes. Such Committees will be appointed very soon. The amount provided in the Budget for Schemes relating to Rural Development and Depressed Class and Scheduled Tribes Amelioration is Rs. 31.52 lakhs. So far as Rural Development work is concerned, a sum of Rs. 4 lakhs is provided for water supply, rural sanitation and rural communications. I feel that this amount is inadequate ; but in the present difficult financial position, we could not provide more funds. As I said, under Section 36 (1) of the Village Panchayet and District Board Act, it is one of the obligatory duties of the District Boards hereafter to attend to these items of work.

4-30 P.M.

My friend, Sri Gopala Gowda stated that during elections the Depressed Class people were exploited for the purposes of election.

Sri K. HANUMANTHAIYA.—Every community is being exploited.

Sri T. CHANNIAH.—It is true that the Depressed Class people were exploited because they are illiterate, economically poor and easily accessible. They labour under very many disadvantages. Because of these, they were exploited by every political party. My friend said that the amount provided in the budget for construction of houses is inadequate. I may tell him that even in these difficult days of financial stringency, we have provided Rs. 19 lakhs for construction of houses, acquisition of land for depressed class housing, etc. It is not true that the depressed class people have been neglected and that sufficient funds have not been provided for their amelioration. I am sorry that the depressed class people have not shown sufficient initiative in the matter of construction of houses for themselves. They seem to think that the entire cost of construction should be borne by Government. They should know that they should supplement the Government grant with money of their own. Further, my friend complained of lack of co-ordination beween the Revenue and Rural Development Departments. His impression is not correct. These two are allied Departments. They work hand in hand. They work in close co-operation. He charged Government of appointing their own men to certain posts in special Development Schemes and Projects. Special merit and real capacity to efficiently discharge the duties of the office have been the guiding factors in making selections to such posts. Whether the candidate belongs to this or that party is no consideration whatsoever. With this assurance, I request Sriyuths T. C. Basappa and G. Basappa to withdraw their cut motions.

Sri T. C. BASAPPA.—I seek the permission of the House to withdraw the cut motion.

The cut motion was, by leave, withdrawn.

Inactivity of the Revenue Agency about Rural Development in T.-Narsipur Taluk.

Sri S. SRINIVASA IYENGAR (T.-Narsipur).—Sir, I move :

> " That the demand under the head ' 40-A. Rural Development ' for Rs. 31,52,000 be reduced by Rs. 100 (to raise a debate on the complete inactivity of the Revenue Agency about the Rural Development in T.-Narsipur Taluk)."

ಈ ಖೋತಾ ನಿರ್ಣಯವನ್ನು ಮಂಡಿಸುತ್ತಾ ತಿರುಮಕೂಡ್ಲು ನರಸೀಪುರ ತಾಲ್ಲೂಕಿನಲ್ಲಿ ರೂರಲ್ ಡೆವಲಪ್‌ಮೆಂಟ್ ಕೆಲಸ ಎಷ್ಟರಮಟ್ಟಿಗೆ ಸಾಗಿದೆ, ಅದರಲ್ಲೂ ಡೆವಲಪ್‌ಮೆಂಟ್ ಕಮಿಟಿಗಳು ರಜಾ ಆದ ಮೇಲೆ ಅಲ್ಲಿನ ಕೆಲಸ ಕಾರ್ಯಗಳು ಹೇಗೆ ನಿಂತಿವೆ ಎಂಬುದನ್ನು ಹೇಳಬೇಕೆಂಬುದೇ ಈ ನಿರ್ಣಯದ ಉದ್ದೇಶವೆಂದು ತಿಳಿಸಬ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ಯಸುತ್ತೇನೆ. ರೂರರ್ ಡೆವಲಪ್‌ಮೆಂಟ್ ಕಮಿಟಿಗಳಿದ್ದ ಕಾಲದಲ್ಲಿ ನಮ್ಮ ತಾಲ್ಲೂಕಿನಲ್ಲಿನ ಅನೇಕ ಗ್ರಾಮಗಳಲ್ಲಿ ಬಹಳ ಹೆಚ್ಚಿನ ಕೆಲಸ ನಡೆದಿದೆ. ಏಕೆಂದರೆ, ರೂರಲ್ ಡೆವಲಪ್‌ಮೆಂಟ್ ಕಮಿಟಿಯ ಚೇರ್ಮನ್ನರಿಗೂ ಸ್ವಲ್ಪ ಅಧಿಕಾರವಿತ್ತು, ಹಣದ ಬೆಂಬಲವೂ ಇತ್ತು, ಜೊತೆಗೆ ಮಾಡತಕ್ಕ ಹುಮ್ಮಸ್ಸೂ ಇತ್ತು. ನನ್ನ ಗ್ರಾಮಕ್ಕೆ ಮುಂಚೆ ಕೆಲಸವಾಗಬೇಕು, ತನ್ನ ಗ್ರಾಮಕ್ಕೆ ಮುಂಚೆ ಕೆಲಸವಾಗಬೇಕು ಎಂದು ಪ್ರತಿಯೊಬ್ಬರೂ ಬಂದು ಸಹಾಯ ಮಾಡುತ್ತಿದ್ದರು, ಅದರಂತೆ ಕೆಲಸ ನಡೆಸುತ್ತಿದ್ದರು. ಒಂದು ಗ್ರಾಮಕ್ಕೂ ಇನ್ನೊಂದು ಗ್ರಾಮಕ್ಕೂ ಪೈಪೋಟಿಯ ಮೇಲೆ ಕೆಲಸ ನಡೆಯುತ್ತಿತ್ತು.

ಈ ರೀತಿಯಾಗಿ ಕೆಲಸಗಳು ನಡೆಯುತ್ತಿದ್ದಂಥ ತಾಲ್ಲೂಕಿನಲ್ಲಿ, ರೂರಲ್ ಡೆವಲಪ್‌ಮೆಂಟ್ ಕಮಿಟಿಯಿದ್ದು ಅನೇಕ ಕೆಲಸ ಕಾರ್ಯಗಳು ಕೈಕೊಳ್ಳಲ್ಪಟ್ಟು ಅವು ಅರ್ಧಮರ್ಧ ಮುಗಿಯುವ ವೇಳೆಗೆ ದುರದೃಷ್ಟವಶಾತ್ ಈ ಕಮಿಟಿಯು ವಜಾ ಆಯಿತು. ಈ ಕಮಿಟಿ ವಜಾ ಅಥ ಮೇಲೆ ಆ ಕೆಲಸಗಳೆಲ್ಲಾ ಅಲ್ಲಿಗೇ ನಿಂತವು. ಇನ್ನೂ ಕೂಡ ಅವು ಮುಗಿದಿಲ್ಲ. ಮಾಡಿದ ಕೆಲಸಕ್ಕೆ ಬಿಲ್ಲನ್ನು ಕೂಡ ಪಾವತಿಮಾಡಿಲ್ಲ, ಹೀಗಾಗಿದೆ ಅವುಗಳ ಸ್ಥಿತಿ. ಆ ಬಿಲ್ಲಿನ ಹಣವನ್ನಾದರೂ ಕೊಡಿಸೋಣವೆಂದು ನಾನು ಪ್ರಯತ್ನಮಾಡಿದೆ. ಆದರೆ ಆಡಳಿತ ನಡೆಸುವ ಅಮಲ್ದಾರರಿಗೆ ಸರಿಯಾಗಿ ಕೆಲಸವನ್ನು ಅಜಮಾಯಿಷಿ ಮಾಡಿಕೊಡುವಷ್ಟು ಅನುಭವವಿಲ್ಲ. ಅವರು ಟೆಕ್ನಿಕಲ್ ಮನುಷ್ಯರಲ್ಲದ್ದರಿಂದ, check measurements ಮಾಡಿಸಬೇಕಾದರೆ P. W. D. ಇಲಾಖೆಯವರನ್ನೇ ಅವಲಂಬಿಸಬೇಕು. ಈ ಕೆಲಸಗಳನ್ನು ಮಾಡಿಸುವಾಗ ರೂರಲ್ ಡೆವಲಪ್‌ಮೆಂಟ್ ಕಮಿಟಿಯ ಸಬ್ ಓವರ್ಸಿಯರ್ ಇದ್ದರು. ಅವರು ಚೆಕ್ ಮಾಡಿದ್ದನ್ನು ಸರಿಯೇ ತಪ್ಪೇ ಎಂದು ಹೇಳುವ ಶಕ್ತಿ ಕೂಡ ಅಮಲ್ದಾರರಿಗಿಲ್ಲ. ಏಕೆಂದರೆ ಅವರು ಕೇವಲ ಆರ್ಟ್ಸ್ ಗ್ರಾಜುಯೇಟೋ, ಸೈನ್ಸ್ ಗ್ರಾಜುಯೇಟೋ ಆಗಿದ್ದಾರೆಯೇ ಹೊರತು ಎಂಜಿನಿಯರಿಂಗ್ ಗ್ರಾಜುಯೇಟ್ ಅಲ್ಲ. ಹೀಗಾಗಿ ರೆವಿನ್ಯೂ ಅಧಿಕಾರಿಗಳಿಗೆ ಇಂಥ ವಿಷಯಗಳಲ್ಲಿ ಸರಿಯೇ ತಪ್ಪೇ ಎಂದು ನೋಡುವುದಕ್ಕೆ ಸಾಧ್ಯವಿಲ್ಲವೆಂಬುದು ಸಹಜ

Sri KADIDAL MANJAPPA (Minister for Revenue and Public Works).—The Public Works Ministers in Mysore are all Arts graduates.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇರಬಹುದು. ಆದರೆ ಮಂತ್ರಿಗಳಿಗಿರುವ ಶಕ್ತಿ ಅಮಲ್ದಾರರುಗಳಿಗಿರುತ್ತದೆಂದು ತಾವೂ ಕೂಡ ಒಪ್ಪುವುದಿಲ್ಲವೆಂದು ನಾನು ತಿಳಿದಿದ್ದೇನೆ.

ಹೀಗಾಗಿ ಅಲ್ಲಿ ಯಾವ ರೀತಿಯಲ್ಲಿ ಅವ್ಯವಸ್ಥೆಯಾಗಿದೆಯೆಂಬುದನ್ನು ಸ್ವಲ್ಪ ಹೇಳುತ್ತೇನೆ. ಸೋಸಲೆಯಿಂದ ಕುಲಕರಣಿಗೆ ಒಂದು ರಸ್ತೆ ಹೋಗುತ್ತದೆ. 60 ಮೈಲಿ ಉದ್ದವಿದೆ. R. R. D. ಕಮಿಟಿ ಇರುವುದರೊಳಗೆ ಈ ರಸ್ತೆಯನ್ನು ಅರ್ಧಮರ್ಧ ಮಾಡಿ ಮಧ್ಯೇ ಮಧ್ಯೇ ಸೇತುವೆಗಳಿಗೆ ತಳಪಾಯವನ್ನು ಕೂಡ ತೆಗೆದಿದ್ದರು. ಅಲ್ಲಿಗೆ ಈ ಕಮಿಟಿ ವಜಾ ಆಯಿತು. ಕೆಲಸವೂ ಅಲ್ಲಿಗೆ ನಿಂತಿತು. ಈಗ ಅಲ್ಲಿ ಬಸ್ಸೂ ಹೋಗುವುದಿಲ್ಲ. ಒಂದು ಗಾಡಿ ಕೂಡ ಹೋಗುವುದಕ್ಕಾಗುವುದಿಲ್ಲ. ಕಂಟ್ರಾಕ್ಟರಿಗೆ ದುಡ್ಡನ್ನೂ ಇನ್ನೂ ಕೊಟ್ಟಿಲ್ಲ. ಇತ್ತ ಮನೆ ಕಟ್ಟುವವರು ಅಲ್ಲಿ ಸೇರಿಸಿದ್ದ ಜಲ್ಲಿಯೆಲ್ಲವನ್ನೂ ಹೊತ್ತುಕೊಂಡು ಹೋಗುತ್ತಿದ್ದಾರೆ. R. R. D. ಕಮಿಟಿಯಿರುವಾಗ ನಾವೇ ಗ್ರಾಮ ಗ್ರಾಮಕ್ಕೆ ಸುತ್ತುತ್ತಿದ್ದೆವು. ನಾನು ಕಾಂಗ್ರೆಸ್ ಮೆಂಬರಲ್ಲದಿದ್ದರೂ ಹಳ್ಳಿಗರ ಅಭಿವೃದ್ಧಿ ದೃಷ್ಟಿಯಿಂದ ಈ ಸಹಾಯ ಮಾಡಿಕೊಡಿ ಎಂದು ಕೇಳುತ್ತಿದ್ದೆ.

ಆದರೆ ಈಗಅಲ್ಲಿ ಏನಾಗಿದೆ! R.R.D. ಕಮಿಟಿ ಇರುವವರೆಗೂ ಎಷ್ಟೋ ಹಳ್ಳಿಗಳಿಗೆ ದಾರಿ ಸೌಕರ್ಯ ಸಿಕ್ಕಿತು. ಆ ಕಮಿಟಿ ವಜಾ ಆದ ಮಾರನೆಯ ದಿವಸವೇ ಹಳ್ಳಿಗಳ ಕಡೆ ದಾರಿಗಳ ಕೆಲಸವೆಲ್ಲಾ ನಿಂತಿತು. ಅದರಲ್ಲೂ ಸೋಸಲೆ ಹೋಬಳಿಯಲ್ಲಿ ಗ್ರಾಮ ಹೇಗಿದೆಯೆಂದರೆ ಅಲ್ಲಿ ಮಳೆ ಬಂತೆಂದರೆ ಜನರೆಲ್ಲರೂ ಗ್ರಾಮಗಳಿಗೆ ಹೋಗಬೇಕಾದರೆ ಗಾಡಿ ದೋಣಿಯಲ್ಲಿ ಹೋಗುವಂತೆ ತೇಲಾಡಿಕೊಂಡು ತಿರುಗುತ್ತದೆ. ಊರ ಸುತ್ತ ನೀರಿರುತ್ತದೆ. ರಸ್ತೆ ಮಾಡಿಸಿ ಎಂದರೆ, ಯಾರನ್ನು ಹೋಗಿ ಕೇಳಬೇಕು! ಅಮಲ್ದಾರರ ಹತ್ತಿರ ಹೋದರೆ ಅವರಿಗೆ ವಿಪರೀತ ಕೆಲಸ. ಮಂತ್ರಿಗಳು ಬಂದರೂ ಅವರ ಜೊತೆಯಲ್ಲಿ ಹೋಗಬೇಕು, ಡೆಪ್ಯುಟಿ ಕಮಿಷನರ್ ಬಂದರೂ ಅವರ ಜೊತೆಯಲ್ಲಿ ಹೋಗಬೇಕು, ಗೌರ್ನಮೆಂಟ್ ಆಫ್ ಇಂಡಿಯಾದ ಒಂದು ಕಮಿಟಿಯವರು ಬಂದರೂ ಅವರ ಜೊತೆಯಲ್ಲೂ ಹೋಗಬೇಕು. ಹೀಗಾಗಿ ರೂರಲ್ ಡೆವಲಪ್‌ಮೆಂಟ್ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವ ಅಧಿಕಾರಿಗಳೇ ಇಲ್ಲವೆಂದು ಹೇಳಬೇಕಾಗಿದೆ.

ಇದು ಒಂದು ತೊಂದರೆ. ಇನ್ನೊಂದೇನೆಂದರೆ ಅಲಾಟ್‌ಮೆಂಟ್ ಕೊಡುವುದು. R.R.D. ಕೆಲಸಗಳಿಗೆ ಅಲಾಟ್‌ಮೆಂಟ್ ಬರುವುದೇ ಮಾರ್ಚಿ ಆಖೈರ್ ಹೊತ್ತಿಗೆ. ಜನವರಿ ಫೆಬ್ರುವರಿ ಒಂದನೆಯ ತಾರೀಖಿಗೆ ಅಲಾಟ ಮೆಂಟಿನ ಪಟ್ಟಿ ಬರುತ್ತದೆ. ಒಂದು ವೇಳೆ ಆ ಪಟ್ಟಿ ಮಂಜೂರಾದರೂ ಸಾಲ ಆಖೈರೊಳಗಿರುವ ಇನ್ನು ಒಂದು ತಿಂಗಳಿನಲ್ಲಿ ಟೆಂಡರ್ ಕರೆಯುವುದು ಯಾವಾಗ, ಟೆಂಡರ್ ಬಂದ ಮೇಲೆ ಅವುಗಳನ್ನು ನೋಡಿ ಟೆಂಡರ್ ಕೊಟ್ಟು ಕೆಲಸ ಮಾಡಿಸುವುದು ಯಾವಾಗ ಮತ್ತು ಆ ಸಾಲಿನಲ್ಲೇ ಆ ಅಭಿವೃದ್ಧಿ ಕಾರ್ಯಗಳು ಮುಗಿದಿರುತ್ತವೆಯೋ ಅಥವಾ ಇಲ್ಲವೇ ಎಂದು ಹೇಳುವುದು ಹೇಗೆ?

ಮೂರನೆಯದಾಗಿ, ಈಗಿನ ಆಕ್ಟ್ ಪ್ರಕಾರ ಗ್ರಾಮಾಭಿವೃದ್ಧಿ ಕೆಲಸಗಳನ್ನು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಸೇರಿಸುತ್ತೇವೆಂದು ಹೇಳಿದ್ದೀರಿ. ಮೊದಲಾದರೋ ತಾಲ್ಲೂಕಿನಲ್ಲೇ ಒಂದೊಂದು ಸಮಿತಿಯಿತ್ತು. ನಮ್ಮ ನಮ್ಮ ಗ್ರಾಮಗಳವರೇ ಆ ಸಮಿತಿಯಲ್ಲಿದ್ದು ಪಂಚಾಯಿತಿ ರಾಜ್ಯ ಎಂದು ಯಾವುದನ್ನು ಹೇಳುತ್ತಿದ್ದೀರೋ ಅದು ಒಂದು ವಿಧದಲ್ಲಿ ಚೆನ್ನಾಗಿ ನಡೆಯುತ್ತಿತ್ತು. ಇದನ್ನು ತಪ್ಪಿಸಿ ಈಗ ಡಿಸ್ಟ್ರಿಕ್ಟ್ ಬೋರ್ಡಿಗೆ ಈ ಕೆಲಸವನ್ನು ವಹಿಸಿಬಿಟ್ಟರೆಂದರೆ, ನಾವುಗಳು ಪದೇ ಪದೇ ಡಿಸ್ಟ್ರಿಕ್ಟ್ ಬೋರ್ಡಿಗೆ ಅಲೆದೂ ಅಲೆದೂ ಸಾಕಾಗುತ್ತದೆ. ಎಲ್ಲ ಗ್ರಾಮಗಳವರೂ ನಮ್ಮ ಕೆಲಸವಾಗಬೇಕು ತಮ್ಮ ಗ್ರಾಮಗಳ ಕೆಲಸವಾಗಬೇಕು ಎಂದು ನೂರೆಂಟು ಗ್ರಾಮಗಳವರು ಬಂದು ಕೇಳುತ್ತಿರುವಲ್ಲಿ, ಇಲ್ಲಿ ಹೇಗೆ ನಮ್ಮ ನಮ್ಮ cut motion ಗಳಿಗೆ 'ಕ್ಯೂ' ಸಿಸ್ಟಂ ಬಂದು ಬಿಟ್ಟಿದೆಯೋ ಹಾಗೆ, ಅಲ್ಲಿಯೂ ನಮ್ಮ turn ಬರುವುದಕ್ಕೆ ಕಾಯಬೇಕು. ಈ ತೊಂದರೆಗಳಿಂದ ತಾಲ್ಲೂಕಿನ ಕಮಿಟಿಗಳೇ ಇದಿದ್ದರೆ ಕೆಲಸಗಳು ಬೇಗ ಬೇಗ ಪೂರೈಸಿ ಕಣ್ಣಿಗೆ ಕಾಣುವಂತಾಗುತ್ತಿತ್ತು. ನಮ್ಮ ನಮ್ಮ ಗ್ರಾಮಗಳ ರಸ್ತೆಗಳನ್ನು ಬೇಗನೆ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತೆನ್ನಬಹುದು.

Sri L. SIDDAPPA (Channagiri).—Then you are for reviving the old Taluk

Development Committees and District Development Committees.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮೂರನೆಯದಾಗಿ, ಹರಿಜನರ ಉದ್ಧಾರದ ವಿಷಯ ಹೇಳಿದರು. ಸ್ವಾಮಿ, ಹಿಂದೆ ಒಂದು ನೀತಿ ಇತ್ತು. ಅದರ ಪ್ರಕಾರ ಹರಿಜನರು ತಮ್ಮ ಸ್ವಂತ ಖರ್ಚಿನಿಂದ ಗೋಡೆ ಹಾಕಿಕೊಂಡರೆ ಸರ್ಕಾರದವರು ಮೇಲ್ಛಾವಣಿಗೋಸ್ಕರ ಬೇಕಾದಹೆಂಚುಗಳು ಮುಂತಾದ ಸೌಕರ್ಯವನ್ನು ಕೊಡುತ್ತೇವೆಂದು ಹೇಳುತ್ತಿದ್ದರು. ಪ್ರತಿ ತಿಂಗಳೂ ತಾಲ್ಲೂಕು ಬೋರ್ಡಿನವರು ಇಂಥದನ್ನು ಒಂದು ಪಟ್ಟಿ ಮಾಡಿಟ್ಟುಕೊಂಡು ತಕ್ಷಣ ಕೊಡಲು ಏರ್ಪಾಡು ಮಾಡುತ್ತಿದ್ದರು. ಈಗಲಾದರೋ ವಿಪರೀತ ತಡವಾಗುತ್ತಿದೆ. ಯಡತೋರೆ ಎಂಬ ಒಂದು ಗ್ರಾಮದಲ್ಲಿ ಮನೆಕಟ್ಟಿಸುವ ಸಲಕರಣೆಗಳನ್ನು ಕೊಡಬೇಕೆಂದು ಕೇಳಿ ಮೂರು ವರ್ಷವಾಯಿತು, ಈ ಹೊತ್ತಿನವರೆಗೂ ಬಂದಿಲ್ಲ. ಮಳೆ ಬಂದರೆ ಹಾಕಿರುವ ಮಣ್ಣಿನ ಗೋಡೆ ಕರಗಿ ಹೋದೀತೆಂದು ಹೆದರಿ ಹೊಟ್ಟೆಯುರಿಯಿಂದ ಅವಸರವಸರವಾಗಿ ಮಟ್ಟೆ ಹಾಳೆ ಹಾಕಿ ಮೇಲ್ಛಾವಣಿ ಹಾಕಿಕೊಂಡರು. ಈ ವರ್ಷವಾದರೂ ಈ ವಿಷಯದಲ್ಲಿ ಕೂಗಾಡೋಣವೆಂದು ಯೋಚನೆ ಮಾಡಿದೆ. ಆದರೆ ಇದ್ದ ಗ್ರಾಂಟೆಲ್ಲವನ್ನೂ ಹರಿಜನರ ಬಡಾವಣೆಗೆ ಜಮೀನನ್ನು ಅಕ್ವೈರ್ ಮಾಡುವುದಕ್ಕಾಗಿ ಖರ್ಚುಮಾಡಿ ಬಿಟ್ಟರು. ಈ ವರ್ಷವೆಲ್ಲಾ ಕಳೆದು ಹೋಯಿತು. ಬರುವ ವರ್ಷವಾದರೂ ಯಾವ ಯಾವ ತಾಲ್ಲೂಕಿಗೆ ಕೊಡಬೇಕೆಂದಿದ್ದಾರೋ ಆ ಹಣದಲ್ಲಿ ಅರ್ಧವನ್ನು ಬಡಾವಣೆಗೂ ಇನ್ನರ್ಧವನ್ನು ಹೆಂಚುಗಳುಗಳಿಗಾಗಿಯೂ ಕೊಡಿಸಿಕೊಡಬೇಕೆಂದು ಸೂಚಿಸುತ್ತೇನೆ. ಹಿಂದಿದ್ದ ರೂರಲ್ ಡೆವಲಪ್‌ಮೆಂಟ್ ಕಮಿಟಿಗಳಾದರೂ ಇದ್ದಿದ್ದರೆ ಬಹಳ ಸೌಕರ್ಯವಾಗುತ್ತಿತ್ತು. ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹರಿಜನರ ಬಡಾವಣೆಗಳಿಗೆ ಸಂಬಂಧಪಟ್ಟ ಜಮೀನು ಅಕ್ವಿಜಿಷನ್ ರಿಕಾರ್ಡುಗಳು ವಿಲೇ ಆಗಬೇಕಾದರೆ ನಾಲ್ಕು ವರ್ಷವಾಗುತ್ತದೆ. ಇದು ಆಗಿ ಅವಾರ್ಡ್ ಆಗಬೇಕು ಎನ್ನುವಾಗ ಆ ಜಮೀನಿನಲ್ಲಿ ಜಮೀನ್ದಾರರು ಒಂದಡಿ ಮಣ್ಣನ್ನು ತೆಗೆದು ಬಿಡುತ್ತಾರೆ. ಇದರಿಂದ ಎಷ್ಟೋ ತೊಂದರೆಯಾಗುತ್ತದೆ. ಇದನ್ನೆಲ್ಲಾ ನೋಡಿಕೊಳ್ಳುವುದಿಲ್ಲ. ಆಡಳಿತದಲ್ಲಿ ಈ ರೀತಿ ಸಡಿಲವಿರಬಾರದು, ಬಿಗಿ ಇರಬೇಕು. ಸರ್ಕಾರವಿದೆ, ಹೀಗೆಲ್ಲಾ ಮಾಡಬಾರದೆಂಬ ಹೆದರಿಕೆಯಿರಬೇಕು. ನ್ಯಾಯವಾಗಿ ಅಧಿಕಾರವನ್ನು ಚಲಾಯಿಸದೇಯಿದ್ದರೆ ಆಡಳಿತವನ್ನೇಕೆ ನಡೆಸಬೇಕು ?

ಇನ್ನೊಂದು ವಿಷಯ : ರೂರಲ್ ಡೆವಲಪ್‌ಮೆಂಟ್ ಸಮಿತಿಯಿದ್ದಾಗ ಅವರು ಅಧಿಕಾರ ನಡೆಸಿದರು. ಬಿನಕನಹಳ್ಳಿ ಎಂಬ ಒಂದು ಗ್ರಾಮದಲ್ಲಿ ನಾಲೆಯ ತೂಬಿನ ಹತ್ತಿರ ಹರಿಜನರ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮಳೆ ಬಂದರೆ, ಆ ನಾಲೆಯ ನೀರೆಲ್ಲಾ ಅಲ್ಲಿ ಬಂದು ಹರಿಯುತ್ತದೆ ; ಹರಿಜನರೆಲ್ಲಾ ತಮ್ಮ ಮನೆಗಳಿಂದ ಹೊರಗೆ ಬರಬೇಕಾಗುತ್ತದೆ. ಅಗತ್ಯವಾಗಿ ಎಲ್ಲಿ ಏನು ಕೆಲಸವಾಗಬೇಕೆಂಬುದನ್ನು ಶಿಫಾರಸು ಮಾಡಿದರೆ, 'ಜಿಲ್ಲಾ ಬೋರ್ಡ್‌ನ್ನು ಪ್ರಾರ್ಥಿಸಿ ಸರ್ಕಾರವನ್ನು ಪ್ರಾರ್ಥಿಸಿ' ಎಂದು ಹೇಳುತ್ತಾರೆ. ಅವರ ಕೈಯಲ್ಲಿ ಅಧಿಕಾರವನ್ನು ಇಟ್ಟುಕೊಂಡೂ ಹೀಗೆ ಹೇಳುತ್ತಾರೆ. ತಾಲ್ಲೂಕಿನಲ್ಲಿ ಅಧಿಕಾರವಿರಬೇಕು; ಯಾವ ಯಾವ ಗ್ರಾಮಕ್ಕೆ ಮೊದಲು ಸಹಾಯ ಕೊಡಬೇಕು, ಎಷ್ಟು ಹಣ ಕೊಡಬೇಕು ಎಂಬುದನ್ನು ಅಲ್ಲಿ ಗೊತ್ತುಮಾಡಬೇಕು. ಬಾವಿಗಳ ವಿಷಯವನ್ನು ಹೇಳುತ್ತಾ ಎಷ್ಟೋ ಜನರು ಬಾವಿಗಳನ್ನು ತೋಡದೆಯೇ ಹಣವನ್ನು ತೆಗೆದುಕೊಂಡಿದ್ದಾರೆಂದು ಹೇಳಿದರು. ನಿಜ, ಎಷ್ಟೋ ಸಂದರ್ಭಗಳಲ್ಲಿ ಬಾವಿ ತೋಡಿರುವುದಿಲ್ಲ, ಹಣ ಮಾತ್ರ ತೆಗೆದುಕೊಂಡಿರುತ್ತಾರೆ. ಒಂದು ಸಮಾಧಾನ ; ಈಗಿನ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಂಥ ಅನೇಕರಿಗೆ ನೋಟೀಸ್ ಬಂದಿವೆ, ಹಣವನ್ನು ವಾಪಸು ಕೊಡಬೇಕೆಂದು ಕೇಳಿದ್ದಾರೆ, ವಸೂಲಾಗುತ್ತಿದೆ. ನಾಲಾ ಬಡಾವಣೆ ವಿಚಾರದಲ್ಲಿ ಹೇಳುವುದಾದರೆ, ಲಕ್ಷಾಂತರ ರೂಪಾಯಿ ಖರ್ಚುಮಾಡಿದ್ದಾರೆ, ನೀರು ಬಂದಿಲ್ಲ. ಇದರ ವಿಷಯವನ್ನು ವಿವರವಾಗಿ ಬೇರೆ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ನೀರೇ ಇಲ್ಲದಿದ್ದರೆ ಏನು ಮಾಡುವುದು?

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಒಂದು ವಿಷಯವನ್ನು ಮುಖ್ಯವಾಗಿ ಗಮನಿಸಬೇಕು. ಯಾವ ಹಳ್ಳಿಯ ಅಭಿವೃದ್ಧಿಗಾಗಿ ಗ್ರಾಂಟು ಕೊಡುತ್ತೀರೋ ಅದು ಅಲ್ಲಿಗೆ ಬೇಗ ತಲಪಬೇಕು. ಕೆಲಸ ಮಾಡಿ ಆ ಹಣವನ್ನು ಖರ್ಚುಮಾಡಲು ಕಾಲವಕಾಶವಿರುವಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಕೆಲಸ ಮಾಡುವಂತೆ ತಿಳಿಸಬೇಕು. ಇಲ್ಲದಿದ್ದರೆ ಕೆಲಸ ನಡೆಯುವುದಿಲ್ಲ. ಹಣವನ್ನು ಆಯಾ ತಾಲ್ಲೂಕಿಗೆ ವರ್ಗಾಯಿಸಿ, ತಾಲ್ಲೂಕಿನವರು ಹಣವನ್ನು ಸಕಾಲದಲ್ಲಿ ಕೊಡುವಂತೆ ಏರ್ಪಾಡು ಮಾಡಬೇಕು.

Mr. SPEAKER.—Cut motion moved :

"That the demand be reduced by Rs. 100."

(*Sri M. Linganna and a few other Hon'ble Members rose*).

Mr. SPEAKER.—There are fifteen minutes more. I want to give chance to two other Members to talk on the remaining cut motions.

Sri M. LINGANNA.—On a point of clarification.

Mr. SPEAKER.—Let Sri Duggappa, a Member of your district, get a chance.

Sri T. CHANNIAH (Minister for Public Health and Local Self-Government).—The charge of complete inactivity in respect of Rural Development work in T.-Narsipur Taluk cannot be sustained. The following are some of the items of development sanctioned or under progress in that taluk. A sum of Rs. 5,000 has been sanctioned during the year 1951-52 for metalling the interior roads in the taluk. The laying of a road from Bannur to Ganigarakoppal was sanctioned at a cost of about Rs. 9,500 in the year 1949. The estimate for this work has now been revised and the

(SRI T. CHANNIAH.)

revised estimate is under examination. Radio sets have been given to three villages of this taluk, *viz.*, Gargeswari, Mugur and Kanchanahalli. A sum of Rs. 22,500 has been made available for construction of 75 houses for Adi-karnatakas of Kukkur. A sum of Rs. 3,000 has been sanctioned recently for repairs to the Katte of Jodi Kupya Village for providing a drinking water well to the village. It cannot therefore be said that T.-Narsipur Taluk has not been receiving its due share of attention in Rural Development work. Out of the Rural Development grants allotted to the taluk during 1952-53, *viz.*, Rs. 18,917 a sum of Rs. 9,361-7-0 has been spent to end of February 1953. One of the reasons ascribed for this comparatively low progress is want of sufficient technical assistance. Another important factor is that the taluk is predominantly a wet area and there is scarcity for labour.

Sri S. SRINIVASA IYENGAR.—On a point of information, Sir. Are the Government in a position to state that the works sanctioned have been executed and completed ?

Sri T. CHANNIAH.—Some of them have been sanctiond and are under progress.

Sri S. SRINIVASA IYENGAR.—The allotments have been made, I agree.

Sri T. CHANNIAH.—The Hon'ble Member stated that the Taluk Boards should be constituted, and that the Taluk Development Committees should be revised.

But this is a point which has already been considered by the Legislature when the Village Panchayets and District Boards Bill came up for consideration in 1952. Government have decided that elections to the District Boards should be indirect and from electoral colleges of members of Village Panchayets. Rules for the conduct of Village Panchayet elections are being framed and I am confident that elections to the Village Panchayets could be conducted in June 1953 and that elections to the District Boards could be arranged in August 1953.

Rural Development Work is now an obligatory function of the District Boards under Section 86 (1) of the Village Panchayets and District Boards Act and they are also provided with additional revenues for taking up this work. As Government have not provided funds for fresh expenditure and as District Boards are expected to take up this work, there is no need to appoint District and Taluk Development Committees. Government are examining the feasibility of appointing Co-ordination Committees at taluk level, which does not involve any financial commitment. So far as the work of uplift of Scheduled Castes and Scheduled Tribes is concerned, the Central Depressed Class Committee has suggested the constitution of District and Taluk Committees to advise the local officers in this work. Steps are being taken to form these Committees. Distribution of Depressed Class Amelioration Grants is entrusted to the Revenue Authorities and they are expected to distribute the same to the needy and deserving applicants. They will see that such of the applicants who have constructed walls or otherwise made sincere attempts to construct houses for themselves are given tiles, building materials, etc. I have received reports that the amount provided in the budget for 1952-53 has been fully spent.

Sri S. SRINIVASA IYENGAR.—With regard to acquisition ?

Sri T. CHANNIAH.—Regarding acquisition of lands, there has been some delay and in a few cases. This is due to existence of party faction in the villages. Soon after acquisition proceedings are instituted, there will be petitions objecting to the acquisition and disposal of the matter is naturally delayed. I may assure the Hon'ble Mover of the Cut Motion that Government will see that delays in acquisition of lands for house building purposes are avoided as far as possible.

Sri S. SRINIVASA IYENGAR.—I seek leave to withdraw the cut motion.

The cut motion was, by leave, withdrawn.

Encroachment of Land in Harijan Colony at Harihar by Kirloskar Company.

Sri G. DUGGAPPA.—I beg to move :

> "That the demand under the head '40-A. Rural Development' for Rs. 31,52,000 be reduced by Rs. 100 (to raise a debate on the hardships caused to the people of Adikarnataka Colony at Harihar by the Mysore Kirloskar, Ltd., Harihar, who have encroached upon the area of the Colony by putting the compound on three sides of the Colony and thereby making the area insufficient for the inhabitants of the Colony)."

ಸ್ವಾಮಿ, ನಾನು ನನ್ನ ಕೈಲಾದ ಪ್ರಯತ್ನಗಳನ್ನೆಲ್ಲಾ ಮಾಡಿ ಕಿರ್ಲೋಸ್ಕರ್ ಕಂಪೆನಿಯಿಂದ ಆದಿಕರ್ನಾಟಕರ ಕಾಲೋನಿಯಲ್ಲಿ ವಾಸಮಾಡುವವರಿಗೆ ಯಾವರೀತಿ ತೊಂದರೆಯಾಗಿದೆಯೋ ಅದನ್ನು ನಿವಾರಿಸಲು ಪ್ರಯತ್ನಪಟ್ಟರೂ, ಸರ್ಕಾರದ ಗಮನಕ್ಕೆ ತರಲು ಅವಕಾಶವಿಲ್ಲದೆ ಹೋದದ್ದರಿಂದ ಮತ್ತು ಏನೂ ಪ್ರಯೋಜನವಾಗದ್ದರಿಂದ ಉಳಿದಿರುವ ಒಂದೇಮಾರ್ಗವನ್ನನುಸರಿಸಿ ಈ ಖೋತಾ ನಿರ್ಣಯವನ್ನು ತಂದಿದ್ದೇನೆ. ಸರ್ಕಾರದವರು ಆದಷ್ಟು ಬೇಗ ಅದನ್ನು ನೋಡಿ ತನ್ಮೂಲಕ ಮೊಟ್ಟಮೊದಲು ಅಲ್ಲಿನ ಆದಿಕರ್ನಾಟಕರಿಗೆ ಪರಿಹಾರ ಒದಗಿಸಬೇಕೆಂಬುದೇ ಇದರ ಉದ್ದೇಶ. ಈ ಮೂಲಕ ಇದಕ್ಕಾಗಿ ಪ್ರಾರ್ಥನೆಮಾಡುತ್ತೇನೆ. ಸ್ವಾಮಿ, ಹೋದಸಾರಿ ಅಕ್ಟೋಬರ್ ಅಧಿವೇಶನದಲ್ಲಿ ನಾನು ಒಂದು ಪ್ರಶ್ನೆ ಕಳುಹಿಸಿದ್ದೆ. ಅದಕ್ಕೆ ಉತ್ತರವಾಗಿ ಈ ಕಾಲೋನಿಯಲ್ಲಿ 119 ಮನೆಗಳೂ, ಸುಮಾರು 119 ಸಂಸಾರಗಳೂ ಇವೆ ಎಂದು ಉತ್ತರ ಬಂದಿದೆ. They are something like pigeon holes. ಅಲ್ಲಿ ಗೂಡುಗಳಲ್ಲಿ ಹಕ್ಕಿಗಳು ವಾಸಮಾಡಿಕೊಂಡಿರುವಹಾಗೆ ಸ್ವಲ್ಪ ಜಾಗದಲ್ಲಿ ಮಕ್ಕಳುಮರಿ ಎಲ್ಲಾ ವಾಸ ಮಾಡುತ್ತಿದ್ದಾರೆ. ಹಾಗಿರುವಾಗ ಈ ದಿವಸ ಅವರಿಗಿದ್ದ ಅಲ್ಪ ಸ್ವಲ್ಪ ಜಾಗವನ್ನು ಕಿರ್ಲೋಸ್ಕರ್ ಕಂಪೆನಿಯವರು ಎನ್‌ಕ್ರೋಚ್ ಮಾಡುವುದು ಯೋಗ್ಯವಲ್ಲ, and the most peitiable condition is that there are more than 15 houses built on the dung-pit. ಅಲ್ಲಿ ತಿಪ್ಪೆಮೇಲೆ ಮನೆಕಟ್ಟಿ ಕೊಳ್ಳುತ್ತಾರೆಂಬುದು ಅಕ್ಷರಶಃ ನಿಜವಾದ ಮಾತು. ಈ ಒಂದು ಅವಸ್ಥೆ ಆ ಜನರಿಗಿರುವುದರಿಂದ ಸುಮಾರು 25 ವರ್ಷಗಳಿಂದ ಜನರು ಹಾಗೆಯೇ ವಾಸ ಮಾಡುತ್ತಿದ್ದರೂ ಇದುವರೆಗೆ ಆದಿಕರ್ನಾಟಕ ಕಾಲೊನಿಗೆ ಸರ್ಕಾರದವರು ನಿಗದಿಯಾಗಿ ಎಷ್ಟು ಸ್ಥಳ ಅಕ್ವೈರ್ ಮಾಡಿಕೊಂಡರು ಎಂಬುದು ಎಲ್ಲೂ ಗೊತ್ತಾಗಿಲ್ಲ. ಎಷ್ಟೋ ಪ್ರಯತ್ನಮಾಡಿದರೂ ನಿಗದಿಯಾಗಿ ಖಚಿತವಾಗಿ ಅಧಿಕಾರಿಗಳಿಗೂ ಸಹ ಅದನ್ನು ಹೇಳಲು ಸಾಧ್ಯವಾಗಿಲ್ಲ. ಇದಕ್ಕೆ ಒಂದುಕಾರಣ, ಈಗ ಹರಿಹರದಲ್ಲಿ ಸ್ಥಾಪಿತವಾಗಿರುವ ಕಿರ್ಲೋಸ್ಕರ್ ಕಂಪೆನಿಯಿದೆ. ಆ ಕಂಪೆನಿಯವರು ತಾವು ಕಂಪೆನಿಯನ್ನು ಸ್ಥಾಪಿಸಿ ಬೆಳೆಸುವಾಗ ಅದರಿಂದ ಇತರರಿಗೆ ತೊಂದರೆಯಾದರೂ ಚಿಂತೆಯಿಲ್ಲ, ತಮ್ಮ ಕೆಲಸ ಸಾಗಿಸಬೇಕು ಎಂಬ ಒಂದು ಉದ್ದೇಶದಿಂದ ತಮಗೆ ಎಷ್ಟು ಸ್ಥಳಬೇಕೋ ಅದಕ್ಕಿಂತಲೂ ಹೆಚ್ಚು ಸ್ಥಳವನ್ನು ಆಕ್ರಮಿಸಿದ್ದಾರೆ, ಅಕ್ವೈರ್ ಮಾಡಿಕೊಂಡಿದ್ದಾರೆ.

This is quite against the will of the owners of the survey Nos. 20 and 21, which were within the municipal limits.

ಹೀಗಾಗಿ ಕಂಪೆನಿಯವರು ಆ ಜಾಗ ಬಿಡುವಹಾಗಿಲ್ಲ. ಕೊನೆಗೆ ಸರ್ಕಾರಿ ಅಧಿಕಾರಿಗಳ ಒತ್ತಾಯದಂತೆ ಆ ಸರ್ವೆ ನಂಬರುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಹಣವನ್ನು ಡಿಪಾಜಿಟ್ ಮಾಡಲಾಯಿತು. ಆದರೂ ಆದಿಕರ್ನಾಟಕರಿಗೆ ಅಲ್ಲಿ ಎಷ್ಟು ಜಾಗ ಬೇಕೋ ಅಷ್ಟು ದೊರೆತ್ತಿಲ್ಲ. ಬಡಾವಣೆಗೆ ಅವಕಾಶವಿಲ್ಲದಂತೆ ಕಾಲೊನಿ ಸ್ಥಳವನ್ನು ಕಿರ್ಲೋಸ್ಕರ್ ಕಂಪೆನಿಯವರು ಆಕ್ರಮಿಸಿದ್ದಾರೆ. ಇಷ್ಟೇ ಅಲ್ಲ, they have put a compound on the three sides of the Colony.

Mr. SPEAKER.—Do you not like to give a few minutes for the Minister to reply ?

Sri G. DUGGAPPA.—And they have made it impossible for the inhabitants of the colony to live that we pity the very existence of the people. I only request Government, through you, to take immediate steps to see that the compound walls are demolished and further area is taken back which is not at all of any practical use to the Company and thereby help the Adikarnataka people at Harihar.

Mr. SPEAKER.—Cut motion moved :

> "That the demand be reduced by Rs. 100."

Sri T. CHANNIAH.—Mr. Speaker, Sir, the Deputy Commissioner, Chitaldrug, after spot inspection, has reported to Government that Messrs. Kirloskar, Ltd., Harihar, have not encroached on the Adikarnataka Colony at Harihar. He has further reported that the revenue surveyor after actual measurement of the area,

(SRI T. CHANNIAH.)

has found that the extent of 5 acres and 4 guntas which was acquired for the Adikarnatakas is intact and that there is no encroachment whatsoever.

And he has also pointed out that a margin of 3 to 5 feet on the eastern and western sides of the colony up to their land is left free. The entire A. K. Colony area is at present enclosed by the compound wall put up by Kirloskar Company. So, there is no encroachment and the land comprising the A. K. Colony is intact.

Sri G. DUGGAPPA.—Anyway, I withdraw the cut motion with the permission of the House.

The cut motion was, by leave, withdrawn.

Mr. SPEAKER.—The question is:

"That a sum not exceeding Rs. 31,52,000 be granted to the Government to defray the charges which will come in course of payment during the year ending 31st day of March 1954 in respect of 'Rural Development'."

The motion was adopted.

Mr. SPEAKER.—The House will now rise for the day and meet tomorrow at Twelve of the Clock.

The House adjourned at Two Minutes past five of the Clock to meet again at Twelve of the Clock on Thursday the 26th March 1953.

WD 4516—GPB—500—31-12-53